ಸಂಚಯ


ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆ ೧೦೩



ಸಂಚಯ
ಗ್ಯಾ|ಲ|ರಿ|

ಶ್ರದ್ಧಾಂಜಲಿ



■ ಸಂಚಿಕೆ: ೧೦೩

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

■ ದ್ವೈ ಮಾಸಿಕ ■ ಜನವರಿ-ಫೆಬ್ರವರಿ ೨೦೧೪

ಉತ್ತುಮಿಕೆ ಪಣವೆತ್ತಿದ ಹೊತ್ತಿಗೆ
ಹೊತ್ತಿಗೆ ಮೂಡಲಿ ಸರಸತಿಯೆ!
ನೆತ್ತಿಗೆ ಎಣ್ಣೆಯ, ಬಾಯಿಗೆ ಬೆಣ್ಣೆಯ
ನೀಡುತ ನೀನಿರು ಜತಿಜತಿಯೆ

■ ದ.ರಾ. ಬೇಂದ್ರೆ

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ,
ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪
email:
sanchaya.sahityapatrike@gmail.com

● ಮುಖಪುಟ: ಡಿ.ಕೆ. ರಮೇಶ್, ಪುಟವಿನ್ಯಾಸ: ಎಂ.ಆರ್. ಗುರುಪ್ರಸಾದ್

ಚಂದಾವಿವರ ● ಬಿಡಿಪ್ರತಿ : ರೂ. ೮೫/- ● ವರ್ಷಕ್ಕೆ (ಆರು ಸಂಚಿಕೆಗಳು) : ರೂ. ೫೦೦/- ● ವಿದ್ಯಾರ್ಥಿಗಳಿಗೆ : ರೂ. ೩೦೦/-

ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ ಕೆನರಾಬ್ಯಾಂಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: 1821101004682ಗೆ ಐಎಫ್‌ಎಸ್‌ಸಿ ಕೋಡ್: CNRB 0001821 - ಜಮಾ ಮಾಡಬಹುದು.

ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ಹೊಸ ವರ್ಷದ ಮೊದಲ ಸಂಚಿಕೆಗೆ ಈ ಚಳಿಗಾಲದಲ್ ಸಂಪಾದಕೀಯ ಬರೆಯುವುದು ಖುಷಿಯ ಕೆಲಸ ಹೊಸ ವರ್ಷ ಈಗಷ್ಟೇ ಶುರುವಾಯ್ತು ಅಂದುಕೊಂಡ ಸಂಭ್ರಮಿಸುತ್ತಿರುವಾಗಲೇ ಅದರ ಮೊದಲ ತಿಂಗಳೂ ಹಳಿಯ ಮೇಲಿನ ರೈಲಿನಂತೆ ಮುಂದೆ ಸಾಗಿ ಮುಗಿದಿದೆ.

ಡಿಸೆಂಬರ್ ಮತ್ತು ಜನವರಿ ತಿಂಗಳುಗಳು ಸಾಹಿತ್ ಚಟುವಟಿಕೆಗಳ ಕಾಲ, ಈಗಷ್ಟೇ ಜರುಗಿದ, ನೆನಪಿನಲ್ ರಿಂಗಣಿಸುತ್ತಲೇ ಇರುವ ಮಡಿಕೇರಿಯ ಸಾಹಿತ್ಯ ಸಮ್ಮೇಳನ ಒಂದು ಕಡೆಗಾದರೆ, ಅನೇಕ ಮುಖ್ಯ ಪ್ರಶ್ನೆಗಳನ್ನು ಎತ್ತಿಕೊಂಡು ಅರ್ಥಪೂರ್ಣವಾಗಿ ಚರ್ಚಿಸಿದ ಧಾರವಾಡದ ಸಾಹಿತ್ ಸಂಭ್ರಮವೂ ಮನಸ್ಸಿನಲ್ಲಿನ್ನೂ ಬಿಸಿಯಾಗಿದೆ. ಕೋಟಿಗಟ್ಟಲೆ ಖರ್ಚು ಮಾಡಿ ಅವ್ಯವಸ್ಥೆಯ ಗೂಡಾಗಿ ಮುಗಿಯುವ ವ್ಯಕ್ತಿ ವಿಜೃಂಭಣೆಯ ಸಾಹಿತ್ಯ ಸಮ್ಮೇಳನಗಳಿಗೆ ನಿಧಾನವಾಗಿ ಪರ್ಯಾಯಗಳು ರೂಪುಗೊಳ್ಳುತ್ತಿವೆ. ಅವುಗಳ ಮಿತಿಗಳನ್ನು ತಿದ್ದಿಕೊಂಡು ಅಂಥವು ಇನ್ನಷ್ಟು ವ್ಯಾಪಕವಾಗಬೇಕಾಗಿವೆ.

ಇವುಗಳ ಜೊತೆಗೆ ಡಿಸೆಂಬರ್ ೨೯ಕ್ಕೆ ಬರುವ ಕುವೆಂಪು ಹುಟ್ಟಿದ ಹಬ್ಬ, ಜನವರಿ ೩೧ಕ್ಕೆ ಬರುವ ಬೇಂದ್ರೆಯವರ ಹುಟ್ಟುಹಬ್ಬ ಎರಡೂ ಅನೇಕ ವರ್ಷಗಳಿಂದ ಸಾಹಿತ್ ಚಟುವಟಿಕೆಗಳಿಗೆ ನಿಮಿತ್ತವಾಗಿದೆ. ನಮ್ಮ ದೊಡ್ಡ ಕವಿಗಳನ್ನು ನೆನಪಿಟ್ಟುಕೊಳ್ಳುವುದು, ಆ ನೆಪದಲ್ಲಿ ಸಂಭ್ರಮಿಸುವುದು ಆರೋಗ್ಯಕರ ಅಭ್ಯಾಸವೆಂದು ಭಾವಿಸುತ್ತೇನೆ. ಈ ಇಬ್ಬರು ಕವಿಗಳ ಹುಟ್ಟುಹಬ್ಬಕ್ಕೆ ಯಾವತ್ತಿನ ಗೀತಗಾಯನ, ಭಾಷಣ, ವಿಚಾರ ಸಂಕಿರಣಗಳು ನಾಡಿನುದ್ದಕ್ಕೂ ನಡೆಯುತ್ತವೆ. ಆದರೂ ಕೆಲವು ವಿಭಿನ್ನ ಕಾರ್ಯಕ್ರಮಗಳು ಜರುಗುತ್ತವೆ.

ಜನವರಿಗೆ ೩೧ಕ್ಕೆ ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಹಲವು ದಶಕಗಳಿಂದ 'ಕವಿದಿನ'ವನ್ನು ಆಚರಿಸಿಕೊಂಡು ಬರುತ್ತಿತ್ತು. ಚಿ. ಶ್ರೀನಿವಾಸರಾಜು ಅದಕ್ಕೊಂದು ಬಹುಮುಖಿ ಆಯಾಮ ರೂಪಿಸಿದ್ದರು. ಕವಿದಿನ ಬೇಂದ್ರೆ ಭಜನೆಯಾಗದೆ, ಅದರ ನೆಪದಲ್ಲಿ ಹಿರಿ-ಕಿರಿಯ ಲೇಖಕರ 'ಸಮ್ಮಿಲನ' ಸಾಧ್ಯವಾಗುತ್ತಿತ್ತು. ಹಿರಿಯ ಲೇಖಕರ ನಾಲ್ಕೈದು ಪುಸ್ತಕಗಳು ಬಿಡುಗಡೆಯಾದರೆ, ಕಿರಿಯ ಲೇಖಕರಿಗೆ ಕಟ್ಟು ಕಟ್ಟು ಪುಸ್ತಕಗಳ

ಬಹುಮಾನ ಜೊತೆಗೆ ಅವರದ್ದೇ ಕವಿತೆ, ಲೇಖನಗಳು ಪುಸ್ತಕ ರೂಪದಲ್ಲಿ ಪ್ರಿಂಟಾಗಿರುವುದನ್ನು ನೋಡಿಕೊಳ್ಳುವ ಮೊದಮೊದಲ ಪುಳಕಗಳು, ಅದಕ್ಕೂ ಮೀರಿ ಕಾರಂತ, ಅಡಿಗ, ಮುಂತಾದ ಆ ಕಾಲಕ್ಕೆ ಲಭ್ಯವಿದ್ದ ಹಿರಿಯ ಲೇಖಕರ ಭೇಟಿ. ಕೆಲವು ಕಾರ್ಯಕ್ರಮಗಳು ಆಯಾ ಲೇಖಕರ ಊರು, ಮನೆಗಳಲ್ಲೇ ನಡೆದವು. ಒಟ್ಟಾರೆ ಹಿರಿ-ಕಿರಿಯ ಲೇಖಕರ ಅಕ್ಷರ ಸಂಭ್ರಮ ಅದಾಗಿತ್ತು. ೨೦೦೧ರಲ್ಲಿ ರಾಜುಮೇಷ್ಟ್ರು ನಿವೃತ್ತರಾದ ನಂತರ ಕವಿದಿನ ಕಳೆ ಸಹಜವಾಗಿ ಕುಗ್ಗಿತು. ಅದಕ್ಕಿದ್ದ ವೈಯಕ್ತಿಕ ಪ್ರೀತಿಯ ಸ್ಪರ್ಶ ಮುಗಿದು ಔಪಚಾರಿಕತೆ-ಯಾಂತ್ರಿಕತೆಗಳು ಅದರ ಜಾಗವನ್ನು ಆಕ್ರಮಿಸಿವೆ.

'ಕವಿದಿನ' ಸಂಚಯಕ್ಕೆ ಜೋಡಿಸಿಕೊಂಡದ್ದೂ ಒಂದು ವಿಚಿತ್ರ. ರಾಜು ಮೇಷ್ಟ್ರಿಗೆ ಜನವರಿ ೩೧ಕ್ಕೆ ಕವಿದಿನ ನಡೆಯಬೇಕೆನ್ನುವ ನಿಷ್ಠೆ, ಅದಕ್ಕಾಗಿ ಅವರು ಏಕಾಂಗಿಯಾಗಿ ಬಹಳಷ್ಟು ದುಡಿಯುತ್ತಿದ್ದರು. ಅದು ನಡೆಯುವ ತನಕ, ಸರಿಯಾಗಿ ಮುಗಿಯುವ ತನಕ ಅವರಲ್ಲೊಂದು ಚಡಪಡಿಕೆ ಇರುತ್ತಿತ್ತು. ಮೇಷ್ಟ್ರ ಸಮಾಧಾನಕ್ಕೆ ಸಂಚಯದಿಂದಲೂ ಕವಿದಿನ ನಡೆಸಲು ನಿರ್ಧರಿಸಲಾಯಿತು. ಅದಕ್ಕೆ ಜೋಡಿಸಿಕೊಂಡ ಹಾಗೆ ಹಿರಿಯರೊಬ್ಬರನ್ನು ಗೌರವಿಸುವುದೂ ಶುರುವಾಯಿತು.

ಸಂಚಯ ೧೯೯೪ರಿಂದ ಸಾಹಿತ್ಯ ಸ್ಪರ್ಧೆ ನಡೆಸುತ್ತ ಬಂದಿದೆ. ಮೊದಮೊದಲಿಗೆ 'ಸಂಚಯ'ದಲ್ಲೇ ಆಯಾ ವರ್ಷ ಉತ್ತಮ ಲೇಖನ, ಕವಿತೆ ಬರೆದ ಇಬ್ಬರಿಗೆ ಒಂದೊಂದು ಪುಸ್ತಕ ಬಹುಮಾನವಾಗಿ ಕೊಡುತ್ತಿದ್ದ ಪರಿಪಾಠ ೧೯೯೪ರಿಂದ ರಾಜ್ಯಾದ್ಯಂತ ಅನೇಕ ಯುವ ಲೇಖಕರನ್ನು ಒಳಗೊಳ್ಳುವ ಸ್ಪರ್ಧೆಯಾಗಿ ನಡೆಯುತ್ತಿದೆ. ವರ್ಷಕ್ಕೆ ಸರಾಸರಿ ಹತ್ತು ಹನ್ನೆರಡು ಮಂದಿಯಂತೆ ಈ ತನಕ ಸಂಚಯ ಸಾಹಿತ್ಯ ಸ್ಪರ್ಧೆಯ ಮೂಲಕ ಬಹುಮಾನಿತರಾದ ಯುವ ಲೇಖಕರ ಒಂದು ದೊಡ್ಡ ಪಡೆಯೇ ನಮ್ಮ ರಾಜ್ಯದ ಉದ್ದಗಲಗಳಲ್ಲಿದೆ.

ಈ ತನಕ ನಾವು ಗೌರವಿಸಿದ ಹಿರಿಯರದ್ದೊಂದು ಪಟ್ಟಿ ಕೊಡಬೇಕೆನ್ನಿಸುತ್ತದೆ. ನೀಲತ್ತಹಳ್ಳಿ ಕಸ್ತೂರಿ (೨೦೦೨), ಕ.ವೆಂ. ರಾಜಗೋಪಾಲ (೨೦೦೩), ಪ್ರೊ. ಎಸ್. ಆರ್. ಮಳಗಿ (೨೦೦೪), ರಾಘವೇಂದ್ರ ಖಾಸನೀಸ (೨೦೦೫), ಕೆ.ಜಿ. ನಾಗರಾಜಪ್ಪ (೨೦೦೬), ಕುಸುಮಾಕರ ದೇವರಗಣ್ಣೂರ (೨೦೦೭), ಶೇಷನಾರಾಯಣ (೨೦೦೮), ಕಾಮರೂಪಿ (೨೦೦೯), ಕಮಲಮ್ಮ ಶಾರದಾಪ್ರಸಾದ್ (೨೦೧೦), ಸುರೇಂದ್ರನಾಥ ಮಿಣಜಗಿ (೨೦೧೧), ಡಾ. ಅ.ಲ. ನರಸಿಂಹನ್ (೨೦೧೨), ಸ. ರಘುನಾಥ್ (೨೦೧೩). ನಮ್ಮ ಹೆಗ್ಗಳಿಕೆಗಲ್ಲದಿದ್ದರೂ ನೆನಪಾಗಿ ಉಳಿಯುವ ಮಾಹಿತಿಗಾಗಿ. ನಮ್ಮ ಗೌರವದಿಂದ ಅವರುಗಳೇನೂ ದೊಡ್ಡವರಾಗಲಿಲ್ಲ. ಆದರೆ, ನಮ್ಮ ಸಮುದಾಯಕ್ಕೆ ಸದ್ದಿಲ್ಲದೇ ದುಡಿದವರ ಬಗ್ಗೆ ಒಂದು ಕೃತಜ್ಞತೆ, ತೆರೆಮರೆಯಲ್ಲೇ ಉಳಿದ ಹಿರಿಯರಿಗೆ ಒಂದು ಗೌರವ ಸೂಚನೆ ನಾಗರಿಕ ಸಮುದಾಯ ಒಂದರ ಲಕ್ಷಣ ಅಲ್ಲವೇ? ಜೊತೆಗೆ ಈ ಒಬ್ಬೊಬ್ಬರ ಸಾಧನೆಗಳು, ಅವರ ಜೊತೆಗಿನ ಒಡನಾಟದ ಮಧುರ ಕ್ಷಣಗಳು ನಮ್ಮೆಲ್ಲರ ನೆನಪಿನ ಅಮೂಲ್ಯ ವಸ್ತುಗಳು.

ಈ ವರ್ಷ ೨೦೧೪ಕ್ಕೆ ಹಿರಿಯ ಲೇಖಕ ಅ.ರಾ. ಸೇತುರಾಮರಾವ್ (ಅ.ರಾ. ಸೇ) ಅವರನ್ನು ಗೌರವಿಸಲಾಗುತ್ತಿದೆ. ಕವಿಯಾಗಿ ತಮ್ಮ ಬರವಣಿಗೆ ಆರಂಭಿಸಿದ ಅ.ರಾ. ಸೇ. ಹಾಸ್ಯ ಲೇಖಕರಾಗಿ ರಾ.ಶಿ.ಯವರು ಸಂಪಾದಿಸುತ್ತಿದ್ದ 'ಕೊರವಂಜಿ'ಯಲ್ಲಿ ಬರೆದು

ನಗಿಸಿದರು. ಚಿತ್ರದುರ್ಗ ತಾಲೂಕಿನ ಭರಮಸಾಗರದ ಅ.ರಾ.ಸೇ. ಕನ್ನಡ ಉಪನ್ಯಾಸಕರಾ
ನಿವೃತ್ತರಾಗಿದ್ದಾರೆ. ನಗೆ ಬರಹಗಳ ಜೊತೆಗೆ ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಇವುಗಳ ಜೊತೆ
ವೇದಾಂತ ಗ್ರಂಥಗಳನ್ನೂ ಸಂಪಾದಿಸಿ ಭಾಷ್ಯ ರಚಿಸಿದ್ದಾರೆ. ಅವರ 'ಪರಮಾರ್ಥ ಪದಕೋಶ
ಜಗತ್ತಿನ ಎಲ್ಲಾ ಮುಖ್ಯ ಧರ್ಮಗಳಲ್ಲಿ ಬಳಕೆಯಲ್ಲಿರುವ ಪ್ರಮುಖ ಪಾರಿಭಾಷಿಕ ಪದಗಳಿಗೆ ಅರ್ಥ
ನೀಡುತ್ತದೆ. ಅನೇಕ ಮತಗಳ ಪರಿಚಯವುಳ್ಳ ಇಂಥ ಗ್ರಂಥ ಭಾರತದ ಯಾವುದೇ ಭಾಷೆಯಲ್ಲಿಲ್ಲ
ಇದರ ಜೊತೆಗೆ ಕುಮಾರವ್ಯಾಸ ಭಾರತವನ್ನೂ ಸಂಪಾದಿಸಿ, ತಾತ್ಪರ್ಯದೊಡನೆ ರಚಿಸಿದ್ದಾ
'ಲಕ್ಷ್ಮೀಶನ ಜೈಮಿನಿ ಭಾರತ', 'ನಾಗರಸನ ಭಗವದ್ಗೀತೆ'ಗಳನ್ನು ಸಂಪಾದಿಸಿ ವ್ಯಾಖ್ಯಾನ ಸಹಿ
ಪ್ರಕಟಿಸಿದ್ದಾರೆ. ಒಬ್ಬ ಅಧ್ಯಾಪಕರಾಗಿ ಅನೇಕ ಯುವಕರನ್ನು ಬರೆಯಲು ಹುರಿದುಂಬಿಸಿದ ಅ.ರಾ
ಸೇ. ತಾವು ಮಾತ್ರ ತಮ್ಮ ಪಾಡಿಗೆ ತಮ್ಮ ಇಳಿವಯಸ್ಸಿನಲ್ಲೂ (ಈಗ ೮೩) ಚಟುವಟಿಕೆಯಿಂ
ಲವಲವಿಕೆಯಿಂದ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ. ಅವರಿಗೆ ಈ ಸಲದ 'ಕವಿದಿನ'
ಗೌರವ ಸಲ್ಲಿಸಲಾಗುತ್ತಿದೆ.

ಕಳೆದ ಸಂಚಿಕೆಯ (೧೦೨) ಸಂಪಾದಕೀಯ ಓದಿ ಅನೇಕರು ತಮ್ಮ ಆತಂಕ ವ್ಯಕ್ತಪಡಿಸಿದರು
ಹಿರಿಯರು, ಗೆಳೆಯರು ಪತ್ರಿಕೆ ನಿಲ್ಲಬಾರದೆಂಬ ಒತ್ತಾಯ ತಂದರು. ಒಬ್ಬ ಹಿರಿಯರಂತು
ಮನೆಗೇ ಬಂದು ಒಂದು ದೊಡ್ಡ ಮೊತ್ತದ ಚೆಕ್ ಕೊಟ್ಟು ಬೆರಗುಗೊಳಿಸಿದರು. ಒಳ್ಳೆಯ
ಕೆಲಸಗಳು ಅದನ್ನು ಮಾಡುವವರನ್ನೂ ಮೀರಿ ಬೆಳೆಯುವುದು ಹೀಗೇ ಅಲ್ಲವೇ? ಎಲ್ಲರ ಒತ್ತಾಸೆ
ಸಹಾಯ, ಸಹಕಾರಗಳಿಂದ ಸಂಚಯ ಮುಂದುವರಿಯುತ್ತದೆ. ಇನ್ನು ಮುಂದಿನ ಸಂಚಿಕೆಗಳ
ನಿಯಮಿತವಾಗಿ ವೈವಿಧ್ಯವಾಗಿ ಹೊರಬಲಿವೆ.

ವರ್ಷವೊಂದಕ್ಕೆ ಬರೀ ಆರು ಸಂಚಿಕೆಗೆ ಐದುನೂರು ರೂಪಾಯಿಯ ಚಂದಾ ಜಾ
ಅನ್ನುವುದು ಕೆಲವರ ಗಂಭೀರ ಅನಿಸಿಕೆ. ಪತ್ರಿಕೆ ಒಂದು ವರ್ಷ ನಡೆಯುವಷ್ಟು ಹಣ ಕೂಡಿದ
ಚಂದಾ ಹಣ ಕಡಿಮೆ ಮಾಡುವುದೂ ನನಗೆ ಸಂತೋಷದ ವಿಚಾರವೆ. ಅದಕ್ಕೇ ಮತ್ತೊಮ್ಮೆ ಒ
ಹೇಳುತ್ತಿರುವೆ ಈ ಪತ್ರಿಕೆಯನ್ನು ಒಂದು ಕೊಳ್ಳ ಬಲ್ಲ ವಸ್ತುವಿನ ಹಾಗೆ ನೋಡಬೇಡಿ. ನಾವೆಲ್ಲರೂ
ಸೇರಿ ಮನಸ್ಸು, ಬರವಣಿಗೆ ಮತ್ತು ಓದು, ಹಣವನ್ನು ಹಾಕಿ ರೂಪಿಸುತ್ತಿರುವ ಒಂದು ಪ್ರಕ್ರಿಯೆ
ಅಂತ ಭಾವಿಸಿ.

ಇನ್ನೊಂದಷ್ಟು ಜನ ಚಂದಾ ಕೊಡಿ ನಮ್ಮ ದಾರಿ ಸುಗಮಗೊಳಿಸಿ ಅಂತ ಮತ್ತೊಮ್ಮೆ ಹಳೆಯ
ರಾಗವನ್ನೇ ನೆನಪಿಸಿ ಮುಗಿಸುತ್ತಿರುವೆ.

ಮತ್ತೆ ಏಪ್ರಿಲ್‌ಗೆ ಮುಂದಿನ ಸಂಚಿಕೆ.

ನಿಮ್ಮ

ಸಂಪಾದಕ



ಎಲ್ಲರೂ ಬದುಕುವುದು ನೋವಿನಲ್ಲಿ
ತಿಳಿದಿರುವೆ ನಾನು ಈ ಬಾಳಿನಲ್ಲಿ
ಮೇಲುದಾರಿಯ ಹಿಡಿದು ಏರುವವರು
ಕೆಳಗೇನೆ ಸಂತೃಪ್ತ ಬಾಳುವವರು

ಈ ಸಂಚಿಕೆಯಲ್ಲಿ...





ವಿಲಿಯಂ ಬಟ್ಲರ್ ಯೇಟ್ಸ್ (೧೮೬೫-೧೯೩೯) ಐರ್ಲೆಂಡ್‌ನಲ್ಲಿಹುಟ್ಟಿದ ಕವಿ. ಐರಿಶ್ ಮತ್ತು ಬ್ರಿಟಿಷ್ ಸಾಹಿತ್ಯದ ಆಧಾರ ಸ್ತಂಭಗಳಲ್ಲಿ ಒಬ್ಬ, ನೊಬೆಲ್ ಪ್ರಶಸ್ತಿ ಪಡೆದಿದ್ದ ಯೇಟ್ಸ್ ತನ್ನ ಅನುಭವಗಳಿಗೆ ಅತ್ಯಂತ ಪ್ರಾಮಾಣಿಕನಾಗಿದ್ದ ಕವಿ. ನಾವು ನಮ್ಮೊಡನೆ ಆಡುವ ಜಗಳದಿಂದ ಕಾವ್ಯ ಹುಟ್ಟುತ್ತದೆ ಎಂದು ನಂಬಿದ್ದವ. ದಿಗಿಲು ಹುಟ್ಟಿಸುವಷ್ಟು ಪ್ರಾಮಾಣಿಕತೆಯಿಂದ ತನ್ನ ವೃದ್ಧಾಪ್ಯದ ಯಾತನೆ, ಅಸಹಾಯಕತೆಗಳು, ಚಪಲಗಳನ್ನು ಹಾಗೂ ಬದುಕಿನ ಬಗೆಗಿನ ಮೂಲಭೂತ ಸಂದೇಹಗಳನ್ನು ಕುರಿತು ಬರೆದಿದ್ದಾನೆ. ತನಗೆ ದೊರೆತ ಘನತೆ, ಗೌರವಗಳಿಗೆ ಗೊಡ್ಡಾಗದ ಕವಿ ಯೇಟ್ಸ್.

ಇಂಥ ಗಟ್ಟಿ ಕವಿಯ ಕವಿತೆಗಳನ್ನು ಕನ್ನಡಕ್ಕೆ ಅನೇಕ ಸೃಜನಶೀಲ ಲೇಖಕರು ಅನುವಾದಿಸಿದ್ದಾರೆ. ಅನಂತಮೂರ್ತಿ, ಲಂಕೇಶ್, ಲಕ್ಷ್ಮೀನಾರಾಯಣ ಭಟ್ಟರು ಅನುವಾದಿಸಿದ ಯೇಟ್ಸ್ ಈಗ ಎಚ್. ಎಸ್. ವೆಂಕಟೇಶಮೂರ್ತಿಯವರ ಅನುವಾದದ ಮೂಸೆಯಲ್ಲಿ ಕನ್ನಡದ ಲಯದಲ್ಲಿ ಜೀವಂತಿಕೆ ಪಡೆದಿರುವ ಕವಿತೆಗಳಿವು, ವರ್ಡ್ಸ್‌ವರ್ತ್ ಕವಿತೆಗಳ ಗುಚ್ಛದ ನಂತರ ಯೇಟ್ಸ್ ಕವಿತೆಗಳು ನಿಮ್ಮ ಓದಿಗೆ.

ಇದೇ ಮಹಾ ಸುದಿನ

ಕ್ರಾಂತಿಗೆ ಜೈ ಹೇ ಫಿರಂಗಿ ಗುಂಡಿಗೆ ಜಯಹೇ
ಕುದುರೆ ತಿರುಕ, ನೆಲ ತಿರುಕಗೆ ಬಾರಿಸುತಾನೆ।
ಕ್ರಾಂತಿಗೆ ಜೈ ತಿರುಗಿ ಬಂದ ತೋಪಿಗೆ ಜಯಹೇ
ತಿರುಕರೀಗ ಅದಲುಬದಲು, ಹೊಡೆತ ಅದೇನೆ॥



ಯೇಟ್ಸ್ ಕವಿತೆಗಳು

ಕನ್ನಡಕ್ಕೆ : ಎಚ್.ಎಸ್. ವೆಂಕಟೇಶಮೂರ್ತಿ

ಯೇಟ್ಸನ ಮುದಿತನದ ಪ್ರಾರ್ಥನೆ

ಬರೀ ಬುದ್ಧಿಯ ಗುಣತದಿಂದ ಹುಟ್ಟುವ
ವಿಚಾರಗಳಿಂದೆನ್ನನ್ನು ರಕ್ಷಿಸು ದೇವ!
ಮೂಳೆ ಮಜ್ಜೆಗಳಲ್ಲಿ ಧ್ಯಾನಿಸುವವನಷ್ಟೆ
ಬರೆದಾನು ಉಳಿದು ಬಾಳುವ ಕವನ.

ಈ ಜಾಣ ಮುದುಕನನ್ನು ಆ ಒಂದು ಕಾರಣ
ಕ್ಕಾಗಿಯೇ ಹೊಗಳುವವರಿಂದ ರಕ್ಷಿಸು.
ಅದ್ಯಾವ ಸೀಮೆಯ ಜನ? ಹಾಡೊಂದಕ್ಕಾಗಿ
ನೂರಕ್ಕೆ ನೂರು ಹುಚ್ಚರೇ ಆಗದವರು!

ಪ್ರಾರ್ಥನೆ ಪದ ಚಾಲ್ತಿಯಲ್ಲಿದೆಯಾಗಿ
ಪ್ರಾರ್ಥಿಸುವೆ ಈವತ್ತೂ ಸಹ ಮತ್ತೆ.
ಇವನೊಬ್ಬ ಖಿಲ, ಮಹಾಮೋಹಿ ಎನಿಸದ
ಮುಟ್ಟಿನ ಸಾವ ಎಷ್ಟು ದ್ವೇಷಿಸುವೆ ಗೊತ್ತೆ?

ಮಗಳಿಗಾಗಿ ಪ್ರಾರ್ಥನೆ

ಮತ್ತೊಮ್ಮೆ ಬಿರುಗಾಳಿ ಹುಯ್ಲು, ತೊಟ್ಟಿಲಲ್ಲಿ, ಅರೆಬರೆ
ಹೊದ್ದಿಕೆ ಮರೆ; ಕಣ್ಣನ್ನರೆ ಮುಚ್ಚಿ ನಿದ್ರಿಸುವ ಮಗಳಿರೆ
ಮತ್ತ್ಯಾವುದೇ ಅಡ್ಡಿಯೆಂಬುದಿಲ್ಲ, ಗ್ರೆಗರಿಬನ, ಅಲ್ಲೊಂದು
ಬೋಳುಗುಡ್ಡ ಹೊರತು, ಹುಲ್ಬಣವೆ, ಹಟ್ಟಿಯ ಮಾಡು
ನೆಲಸಮ ಮಾಡುವಂಥ ಅಟ್ಲಾಂಟಿಕ್ ಕಡಲು ಹಡೆದಂಥ
ಬಿರುಗಾಳಿ ತಡೆಗೆ. ತೊಟ್ಟಿಲ ಬದಿ ಗಂಟೆಗಟ್ಟಲೆ ಉಧ್ವಸ್ಥ
ಚಡಪಡಿಕೆಯ ಶತಪಥ ನಡೆ. ಮನಃಕ್ಷೋಭೆಯ ನಿಮಿತ್ತ
ಪ್ರಾರ್ಥಿಸುತ್ತಿರುವೆ ನನ್ನ ಪುಟ್ಟ ಮಗಳಿಗಾಗಿ ಒಂದೇ ಸಮನೆ.

ಎಡೆಬಿಡದ ನಡೆ ನಡುವೆ ನಡೆದೇ ಇದೆ ಮಗಳಿಗಾಗಿ ಪ್ರಾರ್ಥನೆ.
ಕಡಲಗಾಳಿ ಭೋ ಎಂದಬ್ಬರಿಸುತ್ತಲೇ ಇದೆ ಸೂರಿನ ಮೇಲೆ,
ಸೇತುವೆಯ ಕಣ್ಣೊಳಗೆ, ಕೇಕೆ ಹಾಕುತ್ತ, ಪ್ರವಾಹದ ಮೇಲೆ
ತಲೆಯಷ್ಟನ್ನೆ ಎತ್ತಿರುವ ಎಲ್ಮ್ ವಕ್ಷಗಳ ಮೇಲೆ.
ನವಮನ್ವಂತರ ಬಂದೇಬಿಟ್ಟಿತೆಂದು ಭ್ರಮೆಗೊಳ್ಳುವೆನಾಗ-
ಉನ್ಮತ್ತ ಚಂಡೆ ಬಡಿತಕ್ಕೆ ಉದ್ರಿಕ್ತ ಕುಣಿಯುತ್ತ,
ಕಡಲೊಡಲ ತಲೆಹೊಡಕ ಮುಗ್ಧತೆಯಿಂದ ಹೊಮ್ಮುತ್ತ.

ಚೆಲುವೆಯಾಗಲಿ ನನ್ನ ಮಗಳು- ಆದರೆ ಚೆಲುವು
ಅಪರಿಚಿತರ ಕಣ್ಣುಗಳ ಕುಕ್ಕುವಷ್ಟಿರದಿರಲಿ, ಇರದಿರಲಿ
ಕನ್ನಡಿ ಮುಂದೆ ತನಗೆ ತಾನೇ ಸಂಭ್ರಾಂತಿಪಡದಷ್ಟು,
ವಿಪರೀತ ಚೆಲುವು ತಂದೀತು ಚೆಲುವಷ್ಟೆ ಪರಮಾರ್ಥ
ಎನ್ನುವ ಭಾವ. ಆ ಭಾವದಲ್ಲಿ ಸಹಜ ದಯಾಪರತೆ
ಕಳಕೊಂಡು, ಸತ್ಯ ಹೆಕ್ಕುವ ಎದೆತೆರೆವಂಥ ಆಪ್ತತೆಗೆ
ಹೊರತಾಗುವರು. ನಿಜಕ್ಕು ತಕ್ಕ ತಕ್ಕ ಗೆಳೆಯರವರಿಗೆ
ದಕ್ಕಲಿಕ್ಕಿಲ್ಲ, ಹೆಲನ್ ಗೆ ಆದದ್ದಷ್ಟೆ, ತಪ್ಪಾಯ್ಕೆಯಿಂದ
ಬದುಕೇ ದರಿದ್ರ, ನಿಸ್ಸಾರ ಎನ್ನಿಸಿತು ಆಕೆಗೆ. ಮುಂದೆ
ಬದುಕಲ್ಲಿ ಮಡ್ಡನೊಬ್ಬನಿಂದ ಪಟ್ಟ ಪಾಡಷ್ಟಿಷ್ಟಲ್ಲ,
ಬುರುಗು ಬೆಳ್ನೊರೆಯಿಂದೆದ್ದ ಆ ಅಪ್ರಾಕೃತೆ, ತಂದೆ
ಕಣ್ಣಂಕೆ ತಪ್ಪಿದ್ದಕ್ಕೇನೆ, ಬೊಂಕರಗಾಲ ಕಮ್ಮಾರನನ್ನ
ತನ್ನ ಗಂಡನೆಂದಾಯ್ದಳು. ನಿಜ. ಪರಮಚೆಲುವೆಯರೆಲ್ಲ
ಹೀಗೇನೆ. ಊಟದ ಜೊತೆಗೆ ಪಿತ್ತ ಕೆರಳಿಸುವ ಏನನ್ನೋ
ನಂಜಿಕೊಳ್ಳುವರು. ಹೀಗಾಗಿ ಭಗ್ನಗೊಳ್ಳುವದಕ್ಷಯ ಪಾತ್ರೆ.




ನಯನಡಾವಳಿಯ ಕಲಿಕೆ ಬಲು ಮುಖ್ಯ; ಪಡೆಯಲಿ ಮಗಳು.
ಹೃದಯಗಳು ಬಿಟ್ಟಿ ಸಿಕ್ಕುವುದಿಲ್ಲ; ಗಳಿಸಬೇಕವನ್ನು.
ಯಾರು ಅಷ್ಟೇನು ಸೊಬಗಿಯರಲ್ಲವೋ ಅವರಂತು ಶ್ರಮ-
ವಹಿಸಲೇ ಬೇಕು. ಪರಮಸುಂದರಿಯರಿಗೆ ಮರುಳಾದವರು
ಆ ಚೆಲುವಿನಿಂದಲೇ ಗಳಿಸುವರು ತಕ್ಕ ವಿವೇಕ. ಮತ್ತೆ
ಕೆಲವರು ಯಾರನ್ನೋ ಮೆಚ್ಚಿ, ಹುಚ್ಚರಂತಲೆದು, ತಮ್ಮನ್ನು
ತಾವೇ ಪ್ರಿಯತಮರೆಂದು ತಿಳಿದು, ಕೊನೆಗೆ ಎಲ್ಲಿ ಅಂತಃ-
ಕರಣವುಂಟೋ ಅಲ್ಲಿಯೇ ತಮ್ಮ ಬಿಡದಿ ಹೂಡುವರು.

ಮಗಳು, ಮರೆಯಲ್ಲಿ ಹುಲುಸಾಗಿ ಬೆಳೆದ ಮರವಾಗಲಿ.
ಅವಳೆಲ್ಲ ಭಾವ ಲಿನೆಟ್ ಹಕ್ಕಿಗಳಂತೆ, ಬೇರೆ ಜಂಜಡ
ವಿರದೆ, ಸುತ್ತಲೂ ಹರಡುತ್ತಿರಲಿ, ನಾದದ ಉದಾತ್ತತೆಯ.
ಬೇಟೆ ನಡೆಯಲಿ ಆಟಕ್ಕೆ ಮಾತ್ರ; ನಡೆಯಲಿ ಜಗಳ ಕೇ-
ವಲ ಖುಷಿಗೆ. ಹಸಿರ ಸೊಂಪಿನ ಲಾರೆಲ್ಲಂತೆ ಬದುಕಲಿ
ಅವಳು ಆಳಕ್ಕೆ ಬೇರೂರಿ ಪ್ರಿಯವಾದೊಂದೆ ನೆಲೆಯಲ್ಲಿ.

ನನ್ನ ಮನವೋ, ನಾನೊಲಿದ ಬೇರೆ ಮನಗಳೆ ಕಾರಣವಾಗಿ,
ನಾನು ಮೆಚ್ಚಿದ ಚೆಲುವೇ ಕಾರಣವಾಗಿ, ಹಬ್ಬದೆ
ಜಡ್ಡುಬಿದ್ದಿದೆ. ಈಚೆಗೆ ಒಣಗತುತ್ತಿದೆ ನಿಧಾನಕ್ಕೆ.
ಆದರೂ ತಿಳಿದಿದೆ ಅದಕ್ಕೆ ದ್ವೇಷದಿಂದುಸುರುಕಟ್ಟುವುದು
ಎಲ್ಲಕ್ಕಿಂತ ಮಿಗಿಲಾದ ಕೇಡೆಂದು. ದ್ವೇಷವಿಲ್ಲದ
ಮನಸ್ಸಿದ್ದಲ್ಲಿ ಎಂಥ ಆಕ್ರಮಣವೂ, ಬಿರುಗಾಳಿ
ಬಡಿತವೂ ಬೇರ್ಪಡಿಸಲಾರವು ಲಿನೆಟ್ ಹಕ್ಕಿಯನು
ಮರದ ಎಲೆಯಿಂದ.

ಅತ್ಯಂತ ನಿಕೃಷ್ಟವಾದ್ದು ಬೌದ್ಧಿಕ ದ್ವೇಷ.
ಅರಿತಿರಲಿ ಮಗಳು ಸಿದ್ಧಾಭಿಪ್ರಾಯಗಳು
ಶಾಪಗಳೆಂದು. ನಾನೆ ನೋಡಿಲ್ಲವೇ ಅತ್ಯಂತ
ಸುಂದರ ಹೆಣ್ಣು ಹುಟ್ಟಿದ್ದು ಸಮೃದ್ಧ
ಕೊಂಬಲ್ಲಿ, ಸ್ವಪ್ರತಿಷ್ಠೆಯ ಹಠದಿಂದವಳು
ಮಾರಿಬಿಟ್ಟಳು ಬಲ್ಲವರು ಶುಭವೆಂದು
ತಿಳಿದಿದ್ದೆಲ್ಲವನ್ನೂ, ಅಕ್ಷಯದ ಕೊಂಬನ್ನೂ,
ಕೋಪತುಂಬಿದ ಗಾಳಿತಿದಿಗೆ ವಿನಿಮಯವಾಗಿ.



ಯಾವಾಗ ಎಲ್ಲ ಬಗೆ ದ್ವೇಷ ಹೊರಬೀಳುವುದೊ
ಆಗ ಪಡೆಯುವುದಾತ್ಮ ಮೂಲ ಮುಗ್ಧತೆಯನ್ನು.
ಪಡೆಯುವುದು ತನ್ನ ಆತ್ಮಾರಾಮಸ್ಥಿತಿಯನ್ನು.
ಆಗ ಅರಿವಾಗುವುದು ಸಂತಪ್ತಿ, ಆತಂಕ
ಆಗುವುದು ತನ್ನಿಂತಾನೆ. ತನ್ನ ಮಧುರೇಚ್ಛೆಯೇ
ದೈವೇಚ್ಛೆ. ಈ ಅರಿವ ಪಡೆದವಳು, ಯಾರ ಮುಖ
ಮುದುಡಿರಲಿ, ಎಷ್ಟೇ ಗಾಳಿ ಘೂರ್ಮಿಸಲಿ, ಯಾವ
ತಿದಿ ಬಿರಿದಿರಲಿ, ಉಳಿಯುವಳು ಸುಖಿಯಾಗಿ.

ಎಲ್ಲಿ ಸಂಪನ್ನ ಸಭ್ಯಾಚಾರ ನೆಲೆಸಿರುವುದೋ
ಅಂಥ ಮನೆಗವಳನ್ನು ಕರೆದೊಯ್ಯಲವಳ ವರ.
ತೆಮರು ಆಕ್ರೋಶಗಳು ಬೀದಿ ಸಾಲಿನ ಮಾಲು.
ರೂಢಿ ಮತ್ತು ರಿವಾಜು ಇಲ್ಲದಿರುವಂಥ ಕಡೆ
ಚೆಲುವು ಮುಗ್ಧತೆ ಹುಟ್ಟು ಪಡೆದಾವು ಹೇಗೆ?
ಸಮೃದ್ಧಕೊಂಬಿಗೆ ಆಚರಣೆ ಬದಲೀ ಹೆಸರು
ಸತ್ಸಂಪ್ರದಾಯವೇ ಲಾರೆಲ್ಲಿನ ಆತ್ಮದ ಉಸಿರು.



ರಾಜಕಾರಣ

ಈ ಕಾಲದಲ್ಲಿ ಮನುಷ್ಯನ ದೆಸೆ
ತನ್ನ ಅರ್ಥವನ್ನು ರಾಜಕೀಯದಲ್ಲಿ ಪ್ರಕಟಿಸುತ್ತದೆ.

■ **ಥಾಮಸ್ ಮನ್**

ನಿಂತಿರುವಾಗ ಆ ಹುಡುಗಿ ಅಲ್ಲಿ
ರೋಮನ್ ರಷಿಯನ್ ಅಥವಾ ಸ್ಪಾನಿಶ್
ರಾಜಕೀಯದಲ್ಲಿ
ಹೇಗೆ ನನ್ನ ಮನಸ್ಸ ನಿಲ್ಲಿಸಲಿ?

ನಿಜ. ನಿಂತಿದ್ದಾನಿಲ್ಲೊಬ್ಬ
ತಾನಾಡುವುದನ್ನರಿತ ದೇಶ ನೋಡಿದಾತ.
ಜೊತೆಗಿದ್ದಾನೆ ರಾಜಕೀಯ ಮುತ್ಸದ್ದಿ
ಸಾಕಷ್ಟೋದಿ ಧ್ಯಾನಿಸಿದಾತ.
ಅವರು ಯುದ್ಧ, ಯುದ್ಧಭೀತಿ ಕುರಿತು
ಆಡುತ್ತಿರುವುದು
ನಿಜವಿದ್ದರೂ ಇರಬಹುದು.


ಆದರೆ, ಛೆ! ನಾನಿನ್ನೂ ಹುಡುಗನಾ
ಗಿದ್ದಿದ್ದರೆ...
ಆ ಹುಡುಗಿಯನ್ನು ಬಾಚಿ ತಬ್ಬಿಕೊಳ್ಳುವುದು ಸಾಧ್ಯ
ವಿದ್ದಿದ್ದರೆ...



ಹುಂಬ ಧೂರ್ತ ಮುದುಕ

ನೋಡಿ, ನನಗೋ ಸಖಿತ್ತು ಹೆಣ್ಣು ಹುಚ್ಚು
ಅದಕೆಂದೆ ಬೆಟ್ಟದೇರಿಳಿವು ಮೆಚ್ಚು
ಹೀಗೆ ಹೇಳುವ ಹುಂಬ ಧೂರ್ತ ಮುದುಕ!
ದೇವರಿಚ್ಛಿಸಿದಲ್ಲಿ ಅಲೆವ ಮುದುಕ!
ಸಾವು ಬರದಿರಲಿ ಮನೆ ಚಾಪೆ ಮೇಲೆ
ಕೊನೆಗೆ ಮುಚ್ಚಲಿ ಕಣ್ಣನಾ ಕೈಗಳೇ
ಬಾನಿನಲ್ಲಿರುವಂಥ ಆ ಮುದುಕನ
ಇಷ್ಟು ಮಾತ್ರ ಬೇಡುವೆನು ನಲ್ಲೆ!
–ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.

ಬಹಳ ಹಿತ ನಿನ್ನ ಮಾತೆನ್ನ ಪ್ರಿಯಳೇ
ಕೊಡದೆ ಉಳಿದದ್ದ ಕೊಡು ತಡೆಯಬೇಡ.
ಬಲ್ಲವರು ಯಾರಮ್ಮ ತೀರುಗಾಲ
ಎಂದಾಗುವುದೊ ರಕ್ತವು ಶೀತಲ
ಪ್ರೀತಿಸುವ ತರುಣ ಕೊಡಲಾರದವ್ವ
ನಾನು ಕೊಡಬಲ್ಲೆ ಇದ್ದೇನೆ ಸಿದ್ಧ
ಅವನು ಮುಟ್ಟುವುದಷ್ಟೆ ಮಾಡಬಲ್ಲ!
ಹೃದಯಹೊಗುವಂಥ ನುಡಿ ಅವನಿಗಿಲ್ಲ!
–ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.



ಆಗ ನುಡಿದಳು ಅವಳು ಆ ಮುದುಕಗೆ
ದಪ್ಪ ಕೈಗೋಲೂರಿ ನಿಂತವನಿಗೆ
ಪ್ರೀತಿ ಕೊಡುವುದು ಅಥವಾ ಕೊಡದಿರೋದು
ಯಾರು ಬಲ್ಲರು ಯಾರ ಕೈಲಿರುವುದು?
ಎಲ್ಲ ಕೊಟ್ಟಿರುವೆ ಆ ಹಿರಿ ಮುದುಕಗೆ
ಆ ನೀಲಿ ಬಾನಲ್ಲಿ ಇರುವವನಿಗೆ
ಎಡೆಬಿಡದೆ ಜಪಮಣಿಯ ಎಣಿಸುವವಗೆ
ಎಲ್ಲಿ ಕೈಬಿಡುವು ಕಣ್ ಮುಚ್ಚಲಿಕ್ಕೆ?
-ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.

ಸರಿ ಹೊರಡು ನಿನಗಿರಲಿ ನಿನ್ನ ದಾರಿ
ನಾನು ನಡೆಯುವೆ ಹಿಡಿದು ಬೇರೆಯ ಗುರಿ
ಕಡಲ ತೀರದಲಿರುವ ಕನ್ನಿಕೆಯರು
ಕತ್ತಲರ್ಥವ ಅರಿಯುವಂಥ ಜನರು
ಬೆಸ್ತ ತರುಣರಿಗಾಗಿ ಪೋಲಿ ಮಾತು
ಚಿಕ್ಕ ಮಕ್ಕಳಿಗೆ ತಕೋ ಮಸ್ತು ನಾಚು
ಕತ್ತಲಿಳಿದಾಗ ಆ ಕಡಲ ಮೇಲೆ
ಬಿಚ್ಚುವುವು ಹಾಸಗೆಯು ಹೊಯ್ಗೆ ಮೇಲೆ.
-ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.

ಇರುಳ ಮುಸುಕಲ್ಲಿ ನಾನೊಬ್ಬ ಯುವಕ
ಹಗಲ ಬೆಳಕಲ್ಲದೇ ಹುಂಬ ಮುದುಕ
ನಗಿಸಬಲ್ಲವ ಬೆಕ್ಕ, ಮುಟ್ಟಬಲ್ಲೋನು
ಮೂಳೆಯಲಿ ಹುದುಗಿರುವ ಮಜ್ಜೆಯನ್ನು
ಬಹುಕಾಲದಿಂದ ಬಚ್ಚಿಟ್ಟ ಗೂಢ
ಪಕ್ಕ ಮಲಗಿದ ಮಾತ್ರಕ್ಕೆ ಹುಡುಗ
ಎಚ್ಚರಿಸಬಲ್ಲನೇ ಒಳಗಿನೊಳಗ?
ಎಲ್ಲ ಬಲ್ಲವನಿವನೆ ಹುಂಬ ಮುದುಕ.
-ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.

ಎಲ್ಲರೂ ಬದುಕುವುದು ನೋವಿನಲ್ಲಿ
ತಿಳಿದಿರುವೆ ನಾನು ಈ ಬಾಳಿನಲ್ಲಿ
ಮೇಲುದಾರಿಯ ಹಿಡಿದು ಏರುವವರು
ಕೆಳಗೇನೆ ಸಂತೃಪ್ತ ಬಾಳುವವರು



ದೋಣಿಯಲಿ ಬಾಗಿರುವ ದೋಣಿಗಾರನು
ಮೈಬಗ್ಗಿ ನೇಯುತಿರೊ ನೇಯ್ಗೆಯವನು
ಕುದುರೆ ಬೆನ್ನಲಿ ಸೆಟೆದ ಆರೋಹಿಯು
ತಾಯ ಒಡಲಲಿ ಹುದುಗಿದಂಥ ಕೂಸು.
–ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.

ಮೇಲಿಂದ ಸಿಗಿದು ಮಿಂಚಿನ ಪ್ರವಾತ
ಬಾನಿಂದ ಮುದುಕ ಕೆಳಗೊಗೆಯುವಾಗ
ನಮ್ಮ ಪಾಡನು ಭಸ್ಮಗೊಳಿಸಬಲ್ಲ
ನಂಬೋರು ನಂಬುವರು ಹಳೆಯ ನುಡಿಯ
ನಾನಂತು ಬಿಡಿ ಬಂಡುಕೋರ ಮುದುಕ
ನನಗಿರಲಿ ಪಾಡು ಪಾಡಾಗಿಯೇನೇ
ಎಲ್ಲಿ ಮರೆಯುವೆ, ಹಾಗೆ ಮರೆತ ಮೇಲೆ
ಮಲಗುವೆನು ಪ್ರಾಯಸ್ಥೆ ಮೊಲೆಯ ಮೇಲೆ.
–ಮತ್ತೆ ಮುಂಬೆಳಗು ಮೋಂಬತ್ತಿ ಮುಗಿವು.

ಬೈಜಾಂಟಿಯಮ್ ಯಾನ

೧

ಮುದುಕರಿಗಲ್ಲ ಜಿಡಿ ಆ ನಾಡು. ಹರಯದವರೊ
ಬ್ಬರೊಬ್ಬರ ತೋಳಲ್ಲಿ, ಹಕ್ಕಿಗಳು ಮರದಲ್ಲಿ
–ಅಳಿವ ಪೀಳಿಗೆಯೆಲ್ಲ–ತಂತಮ್ಮ ಹಾಡುಗಳಲ್ಲಿ,
ಸಾಲ್ಮನ್ ಜೀಳುಗಳು, ಮ್ಯಾಕರೆಲ್ ಸಮ್ಮರ್ದ ಕಡಲು,
ನೆಲ ನೀಲಿ ಜಲ ಜಂತು. ಸಮಸುಖೋಷ್ಣ ಗ್ರೀಷ್ಮ
ಸ್ತುತಿಸುವುದು, ಪಡುವ ಪಡೆಯುವ ಮಡಿವ ಪಾಡನ್ನು.
ಮರುಳುಗೊಳಿಸುವ ಗಾಯನದಲ್ಲಿ ಮೈಮರೆತ
ಜಗಕ್ಕೆ ಚಿರನಿತ್ಯ ಜ್ಞಾನ ಸ್ಮಾರಕದ ಲಕ್ಷ್ಯವೆ ಇಲ್ಲ.

೨

ವಯಸ್ಸಾದ ಮನುಷ್ಯ ಒಂದು ಕುಪದಾರ್ಥವೇ ಸರಿ.
ಆತ್ಮವೆಂಬುದು ಧ್ವನಿಯೆತ್ತಿ ಚಪ್ಪಾಳೆಯಿಕ್ಕಿ ಹಾಡ
ದಿದ್ದರೆ ಗಟ್ಟಿಕೊರಳಲ್ಲಿ ಚಿಂದಿ ಬಟ್ಟೆಯು ಸುಕ್ಕು
ಸುಕ್ಕಗೆ, ಕೋಲಮೇಲಿನ ಚಿಂದಿ ಕೋಟು ಅವನು.ಇರಲಿಲ್ಲ
ಅಲ್ಲಿ ಹಾಡು ಕಲಿಸುವ ಶಾಲೆ. ತನ್ನದೇ ಭವ್ಯತೆಯ
ಸ್ಮಾರಕವ್ಯಂದ. ಅದಕ್ಕೇ ಮತ್ತೆ ಕಡಲುಗಳ ಹಾಯ್ದು
ನಾನೀ ಪವಿತ್ರ ಬೈಜಾಂಟಿಯಮ್ ಸಿಟಿಗೆ ಬಂದದ್ದು.





೩

ಸ್ವರ್ಣಭಿತ್ತಿಯಲಿ ಕೆತ್ತಿದ ಚಿತ್ರಗಳಂತೆ ದೇವರ
ದಿವ್ಯಾಗ್ನಿಯಲ್ಲಿ ನಿಂತ ಓ ಋಷಿಗಳೇ, ಡೇಗೆಗಳಂತೆ
ವೃತ್ತಾಕಾರ ಸುತ್ತುತ್ತಾ ಹಾಡೋಜರಾಗಿ ಈ ಆತ್ಮಕ್ಕೆ.
ಕರಗಿಸಿ ನನ್ನ ಹೃದಯ. ಮತ್ತು ಮುದಿ ಪ್ರಾಣಿಯೊಂ
ದಕ್ಕಂಟಿದ ಈ ಮೋಹಾವಿಷ್ಟ ಆತ್ಮ. ತನ್ನತನದ
ಅರಿವೇ ಇಲ್ಲ ಅದಕ್ಕೆ. ಮೂರ್ತೀಕರಿಸಿ ನನ್ನನ್ನು ಶಾ
ಶ್ವತದ ದಿವ್ಯ ಸೃಷ್ಟಿಗೆ.

೪

ಈ ಮಣ್ಣ ನೆಲೆಯಿಂದೊಮ್ಮೆ ಜಿಗಿದರೆ ಸಾಕು ಹೊರಕ್ಕೆ
ಮತ್ತೆ ಯಾವತ್ತೂ ಪಡೆಯೆನು ಈ ಪ್ರಾಕೃತಿಕ ಕಾಯ.
ಪಡೆಯುತ್ತೇನೆ ಗ್ರೀಸಿನ ಸ್ವರ್ಣಶಿಲ್ಪಿಯು ಬಡಿದು
ಬಾಗಿಸಿ ಕಡೆದ ಸ್ವರ್ಣಲೇಪದ ದಿವ್ಯಶಿಲ್ಪಾಕಾರ.
ಆಸ್ಥಾನದಲ್ಲಿ ಜೂಬರಿಸುತ್ತ ಕೂತ ದೊರೆಯನ್ನು
ಹೊನ್ನಹರೆಯಲಿ ಕೂತು ಎಚ್ಚರಿಸಲು, ಆಸ್ಥಾನಿಕರಿಗೆ
ಕಳೆದದ್ದನ್ನು, ಇರುವುದನು, ಬರುವುದನು ಹಾಡಲು.

ಪಾದ್ರಿಗೆ ತಿಕ್ಕಲು ಜೇನ್ ಮಾಡಿದ ಬೋಧನೆ

(ಯೇಟ್ಸ್ ಪ್ರೇರಣೆ)

ಬೀದಿಯಲ್ಲೊಬ್ಬ ಪಾದ್ರಿ ಸಿಕ್ಕು
ಅದೂಇದೂ ಮಾತಾಡಿದೆವು:

ಜೋತುಬೀಳುವುವು ಮೊಲೆಗಳೊಂದು ದಿನ
ಒಳನಾಳಗಳು ಒಣಗುವುವು
ಅಪ್ಪಟಂದ ಬಾ ಭಗವಂತನ ದಿವ್ಯ ಸನ್ನಿಧಿಗೆ
ಬಿಟ್ಟು ಪಡುವ ಪಟ್ಟೆ ಪಲ್ಲಂಗ

ಸ್ವಾಮೀ, ಭಗವಂತನ ಹೆಸರಲ್ಲೇ ಇದೆ ಭಗವೂ.
ಭಗವಿಲ್ಲದೆ ಇಲ್ಲ ಭಗವಂತ!
ಪಿತ್ತ ಕೆರಳಿ ಕೂಗಿದೆ ಆ ಪಾದ್ರಿಗೆ: ಮಲಗಲಿಕ್ಕೇನೆ
ಮಂಚವೂ, ಚಿತೆಯೂ!

ಪುಟಿಯುವೆದೆಯ ತರುಣಿಗೆ ತುಪ್ಪಳದ
ಮಂಚದಲ್ಲೆಂಥ ಪೊಗರು!
ಮೂತ್ರಾಮೇಧ್ಯವ ಬಿಡುವ ಕಡೆಯಲ್ಲೇ ಮತ್ತೆ
ಪ್ರೀತಿಯ ಮಹಾ ಮಹಲ್ಲು!

ಒಂದನ್ನು ಬಿಟ್ಟೊಂದಿಲ್ಲ, ಈ ಅರಿವು
ತಮಗೂ ಆಗಲಿಕ್ಕುಂಟು!
ಭಗವೂ ಭಗವಂತನ ನಿವಾಸ
ನೆನಪಿಗಿರಲಿ ಉಡಿಯಲ್ಲೊಂದು ಗಂಟು.



ದೀರ್ಘ ಮೌನದ ಬಳಿಕ ಬರೀ ಮಾತು


ದೀರ್ಘ ಮೌನದ ಬಳಿಕ ಬರೀ ಮಾತು. ಸರಿಯೇ ಮತ್ತೆ.
ಉಳಿದೆಲ್ಲ ಪ್ರೇಮಿಗಳೂ ಸತ್ತೋ ಕೆಟ್ಟೋ ಹೋದರು.

ನಿರ್ದಯಿ ಜೀವ ಬಚ್ಚಿಟ್ಟುಕೊಂಡಿದೆ ರಕ್ತಬುರುಡೆಯೊಳಗೆ.
ಅಸ್ಮೃತಿಯ ರಾತ್ರಿಯ ಮೇಲೆ ಯಾರೋ ಎಳೆದಿದ್ದಾರೆ ಪರದೆ.

ನಾವು ಸುಮ್ಮಗೆ ಆಡುತ್ತಲೇ ಇದ್ದೇವೆ ಆಡುತ್ತಲೇ ಇದ್ದೇವೆ.
ಸಂಗೀತ ಸಾಹಿತ್ಯಗಳ ಪರಮ ಮೌಲ್ಯಗಳ ಕುರಿತು.

ವೈದಿಕ ಮರೆವಸ್ಥೆಯೆಂಬುದೇ ದಿವ್ಯಜ್ಞಾನ ಕಣಯ್ಯ.
ಯೌವನದಲ್ಲಿ ಏನೂ ಅರಿಯದ ನಾವು ಅದೆಷ್ಟು ತೀವ್ರ,

ಮಾಡಿದ್ದೆವು ಮಾಡಬೇಕಾದ್ದ ಒಂದೂ ಶಬ್ದ ಆಡದೆ!



ಆಯ್ಕೆಯ ಪ್ರಶ್ನೆ

ಮನುಷ್ಯನ ಮನಸ್ಸು ಸುಮ್ಮನೆ ಒತ್ತಾಯಿಸುತ್ತದೆ:
ಸಫಲವಾಗು ಬದುಕಲ್ಲಿ ಅಥವಾ ಒಂದು ಕೃತಿಯಲ್ಲಿ.

ಎರಡನೇದ ಆಯ್ಕೆಯೋ ತೊರೆಯಲೇ ಬೇಕು
ಆ ದಿವ್ಯ ಮಹಲನ್ನು ಕುದಿಯುತ್ತ ಕತ್ತಲಲ್ಲಿ.

ಕಥೆಯೆಲ್ಲ ಮುಗಿದದ್ದಾದ ಮೇಲೆ ಉಳಿದ ವಾರ್ತೆ?
ಅದೃಷ್ಟದಿಂದಲೋ, ಪರಮಪರಿಶ್ರಮದಿಂದಲೋ

ಉಳಿದ ಗುರುತು ಹಳೆಯ ಖಾಲಿ ಪರ್ಸಲ್ಲೊಂದು ದಿಗ್ಭ್ರಾಂತಿ.
ಹಗಲ ಪೊಗರು; ಇರುಳ ವಿಷಾದ.

ಆದಿಮನ ಶಾಪ

ಬೇಸಿಗೆಯ ತುದಿ. ಕೂತಿದ್ದೇವೆ ಒಟ್ಟಿಗೇ.
ಆ ಸಂಪನ್ನೆ ಚೆಲುವೆಹೆಣ್ಣು–ನಿನ್ನ ಆಪ್ತ ಗೆಳತಿ–
ನಾನು, ನೀನು. ಕಾವ್ಯದ ಮಾತಾಡುತ್ತಾ.

ನಾನೆಂದೆ: ಸರಿಯಾದ ಒಂದು ಸಾಲಿಗೆ ಗಂಟೆಗಟ್ಟಲೆ ಹೆಣಗುತ್ತೇವೆ ನಾವು.
ಅದು ಒಂದು ಕ್ಷಣದಲ್ಲಿ ಮೂಡಿದ್ದು ಅನ್ನಿಸಲಿಲ್ಲಾ
ನಾವು ಹೊಲಿದಿದ್ದು ಬಿಚ್ಚಿದ್ದು ಎಲ್ಲ ವ್ಯರ್ಥ. ಅದಕ್ಕೆ ಬದಲು
ಸುಮ್ಮನೆ ನಡ ಬಗ್ಗಿಸಿ ಅಡುಗೆಮನೆ ನೆಲ ಒರೆಸುವುದು ಮೇಲು;
ಅಥವಾ ಹಳೇ ಕಲ್ಲೊಡ್ಡನಂತೆ , ವರ್ಷದ ಎಲ್ಲ ಕಾಲದಲ್ಲೂ,
ಕಲ್ಲೊಡೆಯುವುದು.
ಹದವಾದ ಮಧುರ ಮಾತಿನ ಹೆಣಿಗೆ ಬಹಳ ಕಷ್ಟ
ನಾನು ಈ ಮೊದಲು ಹೇಳಿದ ಕಾಯಕಕ್ಕಿಂತ.
ಹೀಗಿದ್ದೂ ಬ್ಯಾಂಕಲ್ಲಿ, ಸ್ಕೂಲಲ್ಲಿ, ಮಠದಲ್ಲಿ ಕೆಲಸ ಮಾಡುವ ಮಂದಿ
ಅನ್ನುತ್ತಾರೆ ನಮಗೆ:
ಸೋಮಾರಿಗಳು ಕಣ್ರೀ ಬರೀ ಸೋಮಾರಿಗಳು.


ಇಷ್ಟಾದ ಮೇಲೆ
ಆ ಸಂಪನ್ನೆಚೆಲುವೆ
–ಯಾರ ಮಧುರ ಮೆಲ್ನುಡಿಗಾಗಿ
ಎಂಥೆಂಥವರೂ ಎದೆಶೂಲೆ ಸಹಿಸಲು ಬಯಸುವರೋ
ಆ ಸಂಪನ್ನೆಚೆಲುವೆ–ಮೆಲುದನಿಯಲ್ಲಿ ಅಂದದ್ದು:
ನಿಜ. ಹುಡುಗಿಯರೆಲ್ಲಾ ತಿಳಿಯಲಿಕ್ಕೇ ಬೇಕು
ಶಾಲೆಯಲ್ಲಿ ಯಾರೂ ಕಲಿಸದಿದ್ದರೂ
ಚೆಲುವೆಯಾಗಿರಲು ನಾವು ಹೆಂಗಸರು ಶ್ರಮಿಸಲೇ ಬೇಕು

ನಾನೆಂದೆ: ಹೌದು, ಆದಿಮನ ಪತನದ ಬಳಿಕ
ಉತ್ತಮವಾದದ್ದು ಯಾವುದೂ ಪರಿಶ್ರಮವಿಲ್ಲದೆ ದಕ್ಕದು
ಎನ್ನುವುದು ಸತ್ಯ.

ಪ್ರೇಮಿಗಳಿದ್ದರು ನಮ್ಮಲ್ಲಿ, ಪ್ರೀತಿಗೆ ಬೇಕು
ಸಿಹಾ ನಾಜೂಕು, ನಿಟ್ಟುಸಿರು,
ುದ್ಗ್ರಂಥಗಳಿಂದೆತ್ತಿದ ವಾಕ್ಯವೃಂದ
ೂಗಸಾದ ಹಳೇ ಗ್ರಂಥಗಳ ಮೇಲ್ಪಂಕ್ತಿ
ಂದು ತಿಳಿದವರು. ಇದಕ್ಕೆಲ್ಲಾ ಮೂರುಕಾಸಿನ
ರೆಲೆಯಿಬಿಲ್ಲ ಅನ್ನಿಸುವುದು ಈಗ.

ಪ್ರೇಮದ ಮಾತು ಬಂದದ್ದೇ ತೆಪ್ಪಗೆ ಕೂತೆವು ಎಲ್ಲಿ.
ಣ್ಣೆಗೆಜಿತ್ತು ನಂದುತ್ತಿರುವ ಹಗಲ ಕೊನೆಗೊಳ್ಳ
ತ್ತರಿಸುವ ಆಕಾಶದ ನೀಲಿಯಲ್ಲಿ,
ಾಲದ ಯಾತಾಯಾತವಾಘಾತದಿಂದ ತಾರೆಗಳ ನಡುವೆ
ಸಮೆದು ಚಿಪ್ಪಾಗಿ
ಕೌಂಚಿಜಿದ್ದಿದ್ದ ಚೂರು ಚಂದ್ರ.

ಕೊನೆಗೆ ಕೇವಲ ನಿನ್ನ ಕಿವಿಗಷ್ಟೇ ಬಿದ್ದರೆ ಸಾಕು ಎನ್ನಿಸಿದ
ಕೆಲವು ಮಾತು:
ಚೆಲುವೆಯಾಗಿದ್ದೆ ನೀನು
ಅದೇ ಹಳೆಯ ಮಾರ್ಗಶೈಲಿಯಲ್ಲಿ ಪ್ರೀತಿಸಲು
ನಾನೂ ಹೆಣಗಿದ್ದೆ. ಫಲಪ್ರದವೆನ್ನಬಹುದೋ ತಿಳಿಯದು
ನಾವಂತೂ ಈಗ
ಆ ಚೂರುಚಂದ್ರನಂತೇ
ಸಮೆದ ಹದಯದಲ್ಲಿ
ದಣಿದವರು.



ಒಮ್ಮೆಗೇ ಆಘಾತ; ಬಡಿಯುತ್ತಲೇ ಇವೆ ಸದೃಢ ರೆಕ್ಕೆ
ತತ್ತರಿಸೊ ಹುಡುಗಿಯ ಮೇಲೆ. ತೊಡೆಯನ್ನಮುಕಿ ಮುದ್ದಿಸಿವೆ
ಕಪ್ಪನೆಯ ಜಾಲಪಾದ. ಹಿಂಗತ್ತನ್ನವಳ ಹಿಡಿದಿದೆ ಕೊಕ್ಕು,
ಅವಳ ಅಸಹಾಯಕ ಎದೆಗಳನೊತ್ತಿದ್ದಾನಾತ ತನ್ನೆದೆಗೆ.


ಗಬಗಬಿಸುವಮುದ್ದಿತ! ಹೇಗೆ ತಳ್ಳಬಲ್ಲುದು ನಡುಗು ಬೆರಳಿಲ್ಲಿ
ಸಡಿಲಾದ ತೊಡೆಯಿಂದ ಜೊತೆಗಿದನ? ಹೇಗೆ ತನ್ನ ಒಡಲನ್ನ
ಆಕ್ರಮಿಸಿರುವ ವಿಪುಲಧವಳತೆಯಡಿ ಸ್ಪಂದನಗ ತುಡಿತಗಳನ್ನು
ಅಲಕ್ಷಿಸಿ ಅಪರಿಚಿತದೆದೆ ಮಿಡಿತ ಒಳಗೊಳ್ಳದಿರುವುದು?

ಸೊಂಟದ ಮಿಗಿಲುಸಡಿಲಿಕದ ಕ್ಷಣವೆ ನಿರ್ಮಾಣ ಗೊಂಡಿತೊ
ಭಗ್ನ ಭಿತ್ತಿ, ಭುಗಿಲ್ಲನುರಿಯುವ ಉಪ್ಪರಿಗೆ, ಉಧ್ವಸ್ತ
ಕೋಟೆಬುರುಜು ಏರಿ, ಅಗಮೆಮ್ನನ್ ಮರಣ? ಬಾನ
ಗಾಳಿಯ
ಪಶುಗಾತ ಹಮುಕ್ತ ಜಾರಿಸಿದೆ ನಿರ್ಲಿಪ್ತ ಕೊಕ್ಕಿಂದವಳಗೆ
ಶಕ್ತಿಯ ಜೊತೆಗೆ ಅರಿವನ್ನೂ?



ಲೀಡಾ ಮತ್ತು ಹಂಸ





ಕೆ. ನರಸಿಂಹಮೂರ್ತಿ



ಕುವೆಂಪು ನಮನ*

ಕುವೆಂಪು ಅವರನ್ನು ನಾನು ಮೊದಲು ಕಂಡದ್ದು ಅವರಿನ್ನೂ ಕಿಶೋರ ಚಂದ್ರವಾಣಿಯಾಗಿದ್ದಾಗ. ೧೯೩೫-೩೬ರ ಸುಮಾರಿನಲ್ಲಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕಾವ್ಯವಾಚನ, ಭಾಷಣ ಮಾಡಿದರು. ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿರುವುದು ಸಭಿಕರನ್ನು ಉದ್ದೇಶಿಸಿ ಮಾತು ಆರಂಭಿಸುವ ಮೊದಲು ಅವರು ಗೋಡೆಗಳ ಮೇಲೆ ವಿರಾಜಮಾನರಾಗಿದ್ದ ಚಿತ್ರಸ್ಥ ಉದ್ದಾಮ ಸಾಹಿತಿ ಚೇತನರೆಡೆಗೆ ತಮ್ಮ ದೃಷ್ಟಿಯನ್ನೆತ್ತಿ ಅವರನ್ನು ಸಂಬೋಧಿಸಿ ಅಭಿವಂದಿಸಿದರು.

ಮೈಸೂರು ಮಹಾರಾಜ ಕಾಲೇಜಿನ ನನ್ನ ವಿದ್ಯಾರ್ಥಿದೆಸೆಯಲ್ಲಿ ಅವರ ದರ್ಶನ ಲಾಭ ನನಗೆ ಆಗುತ್ತಲೇ ಇದ್ದಿತು. ೧೯೪೦-೪೩ರ ಕಾಲಾವಧಿಯಲ್ಲಿ ಅದೇ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಆದ ನನ್ನ ನೇಮಕಾತಿ ಅಧ್ಯಾಪಕರಿಗಾಗಿ ಮೀಸಲಾಗಿದ್ದ ಕಾಮನ್ ರೂಂನೊಳಕ್ಕೆ ಪ್ರವೇಶಕ್ಕೂ ಅಲ್ಲಿ ನಡೆಯುತ್ತಿದ್ದ ಸ್ವಾರಸ್ಯಪೂರ್ಣ ಸಂಭಾಷಣೆಯ ಹಾಗೂ ಉಪಯುಕ್ತ ವಿಚಾರವಿನಿಮಯದ ಪ್ರಯೋಜನ ಪಡೆಯುವುದಕ್ಕೂ ಪರವಾನಿಗೆಯನ್ನಿತ್ತಿತು. ಅಲ್ಲಿ ಆಗಾಗ ತಮ್ಮ ಮಹಾಕಾವ್ಯ ರಚನೆಯ ಅನುಭವವನ್ನು ಕುವೆಂಪು ಸಹೋದ್ಯೋಗಿ ಸಹೃದಯರೊಡನೆ ಹಂಚಿಕೊಳ್ಳುತ್ತಿದ್ದರು. ಉದಾಹರಣೆಗೆ, ಕಿಷ್ಕಿಂಧಾಕಾಂಡದ ಮೊದಲನೆ ಮತ್ತು ಮೂರನೆ ಸಂಚಿಕೆಗಳ ಕೊನೆಯಲ್ಲಿ

ತಟಕ್ಕನೆ ನಿಲುಗಡೆಗೊಂಡಿದ್ದ ಕಾವ್ಯಧಾರೆ ಅಷ್ಟೇ ತಟಕ್ಕನೆ ಪುನಶ್ಚೇತನಗೊಂಡು ಪ್ರವಹಿಸತೊಡಗಲು ನೆರವಾದ ಸ್ಫೂರ್ತಿ ಸಂದರ್ಭಗಳು. ಒಂದು ಹಕ್ಕಿಯ ಟುವ್ವಿ ಟುವ್ವಿ, ಇನ್ನೊಂದು ಮಗು ತೇಜಸ್ವಿಯ ಅಳು.

ಒಮ್ಮೆ ಕಾಮನ್ ರೂಂನ ಕದದ ಬಳಿ ಅವರೊಡನೆ ನಾನೊಬ್ಬನೇ ನಿಂತಿದ್ದಾಗ, ಕುಮಾರ ಸಂಭವದ ಆರಂಭಶ್ಲೋಕದ ದೀರ್ಘಸ್ವರಗಳನ್ನು ಉಲ್ಲೇಖಿಸಿ ಅವರು ಮಾಡಿದ ಸ್ಮರಣೀಯ ವಿಮರ್ಶೆ ಇನ್ನೊಂದು ಅಂಥ ನಿದರ್ಶನ. ಪೃಥ್ವಿಯ ಮಾನದಂಡ ಎನ್ನುವ ಅದ್ಭುತ ಉಪಮೆಯಷ್ಟೇ ಶ್ಲೋಕದ ಆ ದೀರ್ಘ ಸ್ವರಗಳು ಹಿಮಾಲಯ ಪರ್ವತದ ವಿಸ್ತಾರ ಔನ್ನತ್ಯಗಳನ್ನು ಸೂಚಿಸುತ್ತವೆ ಎಂದು ಹೇಳಿ ಗುರುಮಹಿಮೆ ಎನ್ನುವ ಶೀರ್ಷಿಕೆಯಲ್ಲಿ ತಾವು ಆ ವಿಷಯವನ್ನು ಕುರಿತು ಒಂದು ಪ್ರಬಂಧ ಬರೆಯುವ ಮುನ್ನ ತಮ್ಮ ಉದ್ದೇಶವನ್ನೂ ಅವರು ತಿಳಿಸಿದರು.

ಶ್ರೀರಾಮಾಯಣ ದರ್ಶನಂ ಕುರಿತ ಒಂದು ವಿಚಾರಸಂಕಿರಣದಲ್ಲಿ ಆ ಕಾವ್ಯದ ಮೇಲಿನ ಪಾಶ್ಚಾತ್ಯ ಸಾಹಿತ್ಯ ಪ್ರಭಾವವನ್ನು ಕುರಿತು ಒಂದು ಲೇಖನ ಬರೆದು ಓದಲು ನನಗೆ ಕರೆ ಬಂದು, ಅಂಥ ಒಂದು ಲೇಖನ ಬರೆದು ಓದಿದೆ. ಈಚೆಗೆ inter textuality ಎಂದು ಪ್ರಚುರವಾಗುತ್ತಿರುವ ರೀತಿಯಲ್ಲಿ ಮಿಲ್ಟನ್ ನಂಥ ಪಾಶ್ಚಾತ್ಯ ಮಹಾಕವಿಗಳ ಹಾಗೂ ಷೇಕ್ಸ್‌ಪಿಯರ್ ನಂಥ ನಾಟಕಕಾರರ ಪ್ರಭಾವಗಳನ್ನು ಗುರುತಿಸಿದ ನನ್ನ ಲೇಖನಕ್ಕೆ ಕೆಲವರಿಂದ ಬಂದ ಪ್ರತಿಕ್ರಿಯೆ ನನ್ನನ್ನು ದಿಗ್ಭ್ರಮೆಗೊಳಿಸಿತು. ಇಂಥ ತಪ್ಪುಗ್ರಹಿಕೆಯಿಂದ ನಾನು ಅನುಭವಿಸಿದ ನೋವನ್ನು ಕುವೆಂಪು ಅವರ ಮನೆಗೆ ಹೋಗಿ ಅವರ ಮುಂದೆಯೇ ತೋಡಿಕೊಂಡೆ. ಆಗ ಅವರು ಆಡಿದ ಮಾತು ಅವರ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರಿಸಿತು. ನೀವು ತೋರಿಸಿರುವ ಪ್ರಭಾವಗಳಲ್ಲಿ ಅವರು ಹೇಳಿದರು. ಒಂದನ್ನು ಹೊರತುಪಡಿಸಿ ಉಳಿದವನ್ನು ನೀವು ಸರಿಯಾಗಿಯೇ ಗುರುತಿಸಿದ್ದೀರಿ. ನೀವು ನನ್ನ ಕಾವ್ಯವನ್ನು ಕುರಿತು ಮುಂದೆಯೂ ಬರೆಯುತ್ತಿರಬೇಕು.

'The literary half yearly' ಎಂಬ ಇಂಗ್ಲಿಷ್ ಪತ್ರಿಕೆಯ ಮೊದಲ ಸಂಚಿಕೆಯ ಮುಖಪುಟಕ್ಕಾಗಿ ಕುವೆಂಪು ಅವರ ಒಂದು ಕವನದ ಅನುವಾದಕ್ಕಾಗಿ ಸಂಪಾದಕರು ಅಪೇಕ್ಷಿಸಿದಾಗ ಹಾಪ್‌ಕಿನ್ಸ್ ಕವಿಯ ಶೈಲಿಯಲ್ಲಿ ಕುವೆಂಪು ಅವರ ಮೋಡಗಳು ಎಂಬ ಪುನೀತವನ್ನು ಆಂಗ್ಲೈಸಿದೆ. ಅನುವಾದ ಕುವೆಂಪು ಅವರಿಗೆ ಇಷ್ಟವಾಯಿತೆಂದೆನಿಸುತ್ತದೆ. ಏಕೆಂದರೆ ಎಷ್ಟೋ ವರ್ಷಗಳ ಮೇಲೆ ಕನ್ನಡ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸ್ವೀಕರಿಸಲು ಅವರು ಬೆಂಗಳೂರಿಗೆ ದಯಮಾಡಿಸಿದ್ದಾಗ ನನ್ನ ನಮಸ್ಕಾರಗಳನ್ನು ಅವರಿಗೆ ಸಮರ್ಪಿಸುತ್ತಿದ್ದಾಗ ನೀವು ನನ್ನ ಮೋಡಗಳು ಕವನ ಅನುವಾದಿಸಿದಿರಿ ಅಲ್ಲವೆ? ಎಂದು ನೆನಪು ಮಾಡಿಕೊಂಡರು.

ಪ್ರೊಫೆಸರ್ ಹುದ್ದೆಗೆ ಆಯ್ಕೆಗಳು ನಡೆದ ಸಂದರ್ಭದಲ್ಲಿ ನನ್ನ ಅರ್ಹತೆಯನ್ನು ಅವರ ಮುಂದೆ ನಿವೇದಿಸಿಕೊಂಡಾಗ ಅವರು ಆಗಿನ ಸಂದರ್ಭದ ತಮ್ಮ ಅಸಹಾಯಕತೆಯನ್ನು ಸೂಚಿಸಿದರೂ ನನ್ನ ಬಗ್ಗೆ ಅವರು ಆಡಿದ ಮೆಚ್ಚುಗೆಯ ನುಡಿಯೂ ಅವರು ವ್ಯಕ್ತಪಡಿಸಿದ ವಿಶ್ವಾಸವೂ ಆ ಹುದ್ದೆಗಿಂತಲೂ ಹೆಚ್ಚು ಮುಖ್ಯವೆನಿಸಿದವು.

ನಾನು I.A.S.ಗೆ ಆಯ್ಕೆಯಾಗಿ ವಿಶ್ವವಿದ್ಯಾಲಯವನ್ನು ಬಿಡುವ ಮುನ್ನ ಅವರನ್ನು ವಂದಿಸಲು ಅವರ ಮನೆಗೆ ಹೋಗಿದ್ದೆ. ಅವರ ಸಾಹಿತ್ಯದ ವಿಷಯ ಮಾತು ಆರಂಭವಾಗಿ ಒಂದು ಘಂಟೆಗೂ ಮೀರಿದ ಸಂವಾದವೆಲ್ಲಾ ಅದನ್ನು ಕುರಿತೇ ಸಾಗಿ ನಾನು ಹೋಗಿದ್ದ ಉದ್ದೇಶವೇ ಮರೆತುಹೋಗಿ

ರನ್ನು ಎತ್ತದೆಯೇ ನಾನು ಅವರಿಗೆ ನಮಸ್ಕಾರ ಹೇಳಿ ಹಿಂದಿರುಗಿದ ನೆನಪು.

ಅವರ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಏರ್ಪಡಿಸಿದ್ದ ಒಂದು ಸಮಾರಂಭಕ್ಕಾಗಿ ನಾನು ರಚಿಸಿ ಅರ್ಪಿಸಿದ ಆ ಕಾವ್ಯದ ಮಹತ್ವವನ್ನು ಸಂಕ್ಷೇಪವಾಗಿ ವರ್ಣಿಸುವ ಈಗಿನ ಸುನೀತದೊಂದಿಗೆ ನನ್ನ ಈ ಸ್ಮೃತಿ ಸರಣಿಯನ್ನು ಮುಗಿಸುತ್ತೇನೆ.

ಕುವೆಂಪುವಿಗೆ

ಸುರಿದು ಕಿವಿಯಿಂದ ಹೃದಯದಲಿ ಕಡಲಾಗುತಿದೆ
ನಿನ್ನೀ ಮಹಾಕಾವ್ಯರಸ ಜಾಹ್ನವಿ, ಕುವೆಂಪು
ಸಾವಧಾನದಿ ಹರಿಯುತಿದೆ ಇಲ್ಲಿ ಕೊಳಲಿಂಪು
ಆದರದೊ ಧುಮುಧುಮಿಸುತಲ್ಲಿ ಸಿಡಿಲಾಗುತಿದೆ
ಅಗ್ನಿದಿವ್ಯವ ಮೀರಿ ಆನಂದ ಮಾಗುತಿದೆ
ವಿಶ್ವವೇ ತೊನೆಯೆ ಜೋತಿಹುದವರ ತನಿಬಿಣ್ಪು
ಜಾಗರಾಮುಗ್ಧರಾಜಸವು ಸ್ವಪ್ನದಲಂಪು
ಸೆಳೆಯೆ ಶಿಶುಹೃದಯಸಾತ್ವಿಕತೆ ಬದಲಾಗುತಿದೆ
ಪಂಪ ರನ್ನ ಕುಮಾರವ್ಯಾಸರಾಗೆ ಕುವೆಂಪು
ವ್ಯಾಸರನ್ನವರೆಂತೊ ವಾಲ್ಮೀಕಿಯನ್ನಂತೆ
ಕರೆತಂದ ನಿನ್ನ ಭಾಗೀರಥ್ಯದೇನ್ ಪೆಂಪು!
ಸಹ್ಯಾದ್ರಿ ಋಶ್ಯಮೂಕದೊಳೆನಿತು ನೀನ್ ನೊಂತೆ!
ಲಂಘಿತ ಮಹಾಕಾವ್ಯ ಜಲಧಿಗೆ ನಮೋನಮಃ
ಸೀತಾರವಿಂದ ಸಂಜೀವಗೆ ನಮೋನಮಃ

★ ಈಚೆಗೆ ದೊರಕಿದ ಖ್ಯಾತ ವಿಮರ್ಶಕ, ಐ.ಎ.ಎಸ್. ಅಧಿಕಾರಿಯಾಗಿದ್ದ ಡಿ. ಕೆ. ನರಸಿಂಹಮೂರ್ತಿ ಅವರ ಹಸ್ತಪ್ರತಿಯಿಂದ

ಡಿ.ವಿ. ಪ್ರಹ್ಲಾದ್



ಗಾಂಧೀವಾದದ ಪರಿಮಳ; ನೀಲತ್ತಹಳ್ಳಿ ಕಸ್ತೂರಿ

ಬುದ್ಧನ ಪ್ರಕಾರ ಒಬ್ಬ ಜ್ಞಾನಿಯಾದವನು ಈ ಜಗತ್ತಿನಲ್ಲಿ ಒಂದು ಜೇನ್ನೊಣದ ಹಾಗೆ ಬದುಕುತ್ತಾನೆ. ಜಗತ್ತಿನ ಸೌಂದರ್ಯವನ್ನೂ, ಸುಗಂಧವನ್ನೂ ಕೆಡಿಸದೆ ಸದ್ದಿಲ್ಲದೇ ಇದ್ದು ಮೌನವಾಗಿಯೇ ಸಾಗುತ್ತಾನೆ. ಬೇಕಾದಷ್ಟನ್ನು ಮಾತ್ರ ಪಡೆದುಕೊಂಡು ಸರಳವಾಗಿ ಬದುಕುತ್ತಾನೆ. ನಾಳೆಗಳಿಗಾಗಿ ಏನನ್ನೂ ಕೂಡಿಡುವುದಿಲ್ಲ. ಜೇನ್ನೊಣ ನಾಳೆಗಾಗಿ ಏನನ್ನೂ ಸಂಗ್ರಹಿಸುವುದಿಲ್ಲ. ಅದಕ್ಕೇನಿದ್ದರೂ ಇವತ್ತಿಗಷ್ಟೇ ಸಾಕು-ಈ ಕ್ಷಣದ ಬದುಕು.

ಇತ್ತೀಚೆಗೆ ನಮ್ಮನ್ನಗಲಿದ ಗಾಂಧಿವಾದದ ಪರಿಮಳದ ನೀಲತ್ತಹಳ್ಳಿ ಕಸ್ತೂರಿಯವರನ್ನು ನೆನಪಿಸಿಕೊಂಡಾಗ ಬುದ್ಧ ಹೇಳಿದ ಜೇನಿನ ಹೋಲಿಕೆ ಅವರಂಥವರಿಗೆ ಹೊಂದುತ್ತದೆ. ಈ ಗಾಂಧಿ ಎನ್ನುವ ಅಯಸ್ಕಾಂತ ಅದೆಷ್ಟು ಜನಗಳನ್ನು, ತಲೆಮಾರುಗಳನ್ನು ತನ್ನ ತೆಕ್ಕೆಯಲ್ಲಿಟ್ಟುಕೊಂಡು ಕಾಂತಮಯವಾಗಿಸಿತು ಅಂತ ಆಲೋಚಿಸುವಾಗ ವಿಸ್ಮಯವಾಗುತ್ತದೆ.

“ನಿಮ್ಮಂಥ ಯುವಕರು ಒಂದೆಡೆ ಸೇರಿ ಒಟ್ಟಾಗಿ ಬೀಡಿ ಸೇದಿದರೂ ಸಮಾಜಕ್ಕೆ ಉಪಯುಕ್ತವಾದ ಹಾಗೆ” ಅಂತ ಶರ್ಮಾಜಿ ಹೇಳುತ್ತಿದ್ದರು ಅಂತ ನಮ್ಮೊಂದಿಗಿನ ತಮ್ಮ ಮೊದಲ ಭೇಟಿಯಲ್ಲೇ ಅವರು ತಮ್ಮ ಗುರು ಸಿದ್ದವನಹಳ್ಳಿ ಕೃಷ್ಣಶರ್ಮರ ಬಗ್ಗೆಯೂ ಸ್ಮರಿಸಿದ್ದರು. ಅದು ಡಿವಿಜಿ ಜನ್ಮಶತಾಬ್ದಿ ವರ್ಷ. ಸಂಚಯದ ಮೊದಲ ದೊಡ್ಡ ಕಾರ್ಯಕ್ರಮ. ಗಾಂಧಿ ಸಾಹಿತ್ಯ ಸಂಘದಲ್ಲಿ. ‘ಮಂಕುತಿಮ್ಮನ ಕಗ್ಗ’ ಕುರಿತ ಉಪನ್ಯಾಸಕ್ಕೆ ಅಧ್ಯಕ್ಷತೆ ನಿಮ್ಮದೇ ಅಂದೆವು. ಕಾರ್ಯಕ್ರಮದ ದಿವಸ ನಮ್ಮ ಹಾಗೇ ಅವರು ಎಲ್ಲರಿಗಿಂತ ಮುಂಚೆ ಬಂದು ಕುರ್ಚಿಗಳ ಧೂಳು ಒರೆಸಿ, ನಮ್ಮ

ವಯಸ್ಸಿನವರ ಹಾಗೇ ವರ್ತಿಸಿದ್ದರು. ಚಿಕ್ಕ ಹುಡುಗರ ಹಾಗೆ ಒಂದರ ಹಿಂದೆ ಮತ್ತೊಂದು ಬಿಸ್ಕೇಟು ತಿಂದಿದ್ದರು. ನಮ್ಮ ಕಾಲೇಜುಗಳಲ್ಲಿ ಏರುಹುಬ್ಬಿನ ಅತಿಥಿಗಳನ್ನೇ ಕಂಡಿದ್ದ ನಮಗೆ ಇವರ ಸರಳತೆ ಅರ್ಥವಾಗದೇ ಗೊಂದಲವಾಗಿತ್ತು, ಆಶ್ಚರ್ಯವೂ ಆಗಿತ್ತು.

ನಾವುಗಳು ಜೊತೆಗೂಡುವ ಕಾಲಕ್ಕೆ ಗಾಂಧಿವಾದಿಗಳಿಗೂ, ಗಾಂಧಿ ಸಾಹಿತ್ಯ ಸಂಘಕ್ಕೂ ಸಾಕಷ್ಟು ವಯಸ್ಸಾಗಿತ್ತು. ನಮ್ಮ ಉದ್ದೇಶಗಳನ್ನ ಅದರ ಅಸಲಿಯತ್ತನ್ನ ಗುರುತಿಸಿದ ಈ ಹಿರಿಯರು ನಮ್ಮ ಎಲ್ಲ ಚಟುವಟಿಕೆಗಳಿಗೂ ಬೆಂಬಲವಾಗಿ ನಿಂತಿದ್ದು ಅವರ ದೊಡ್ಡತನದ ಗುರುತು. ಕೊಂಚ ಕೊಂಚವಾಗಿ ಗಾಂಧಿತನ ಈ ಹಿರಿಯರ ನಡೆನುಡಿಗಳ ಮೂಲಕ ಅವರ ವರ್ತನೆಗಳ ಮೂಲಕ ನಮ್ಮನ್ನೂ ಪ್ರಭಾವಿಸುತ್ತಿತ್ತು. ಅಮೂಲ್ಯವಾದ ಪುಸ್ತಕಗಳ ಪುರಾತನ ಲೈಬ್ರೆರಿ ಅದರ ಜೊತೆಗೇ ಸಾಗುತ್ತಿದ್ದ ಗಾಂಧಿ ಸಾಹಿತ್ಯ ಸಂಘದ ಬೇರೆ ಬೇರೆ ಕಾರ್ಯಕ್ರಮಗಳು, ಗಮಕ ರೂಪಕಗಳಿಗೆ ನಡೆಯುತ್ತಿದ್ದ ಅಭ್ಯಾಸ ನಮ್ಮಗಳ ಕಿವಿಗಳಿಗೂ ತಲುಪುತ್ತಾ ಹಳಗನ್ನಡದ ಕಾವ್ಯಗಳು ತನ್ನ ಛಾಪು ಮೂಡಿಸಿತ್ತು. ಗಾಂಧಿ ಸಾಹಿತ್ಯ ಸಂಘ ಒಂದು ದೊಡ್ಡ ಮರದ ಹಾಗೆ ಅನೇಕ ಚಟುವಟಿಕೆಗಳ ಆಶ್ರಯ ತಾಣವಾಗಿತ್ತು. ಮೇಲಿನ ಪ್ರಕೃತಿ ಜೀವನ ಕೇಂದ್ರ, ಬುದ್ಧಿಮಾಂದ್ಯ ಮಕ್ಕಳ ಶಾಲೆ; ಬಾಲಮನೋವಿಕಾಸ ಕೇಂದ್ರ, ಆರಂಭ ಕಾಲದ ಚಿತ್ರಕಲಾ ಪರಿಷತ್ತು, ಗಮಕ ಪರಿಷತ್ತು, ಮಾಸ್ತಿಯವರ 'ಜೀವನ' ಪತ್ರಿಕೆಯ ಕೊನೆಯ ಘಟ್ಟ, ರಾಜರತ್ನಂ ಅವರ ಮಕ್ಕಳ ವಾರಾಂತ್ಯ ತರಗತಿಗಳು, ವಿವಿಧ ವಿಷಯ ಕುರಿತ ಉಪನ್ಯಾಸಗಳು, ಎಂಭತ್ತರ ದಶಕದ ಕೊನೆಕೊನೆಯಲ್ಲಿ ಸೇರಿದ ಸಂಚಯ, ಪ್ರತಿಭಾ ಕಲಾವಿದರ ಸಂಘ (ಈಗಿನ ಅಭಿನವ) ಗೆಳೆಯ ಶಾಂತರಾಜರ ಚಿತ್ರಕಲೆ ತರಗತಿಗಳು ಮತ್ತು ರಘುನಾಥರ ಸಾಮಾಜಿಕ ಚಟುವಟಿಕೆಗಳು, ಎಂ.ಎನ್. ಚಂದ್ರಶೇಖರ ಅವರ ಸಂಸ್ಕೃತ ತರಗತಿಗಳು ಮಲ್ಲೇಶ್ವರದ ಎಲ್ಲಾ ಬಹುಮುಖಿತನ ಇಲ್ಲಿ ಮೇಳವಿಸಿತ್ತು. ಅವು ತಂತಮ್ಮ ಕಾರ್ಯ ನಡೆಸಿ ತಮ್ಮ ನೆಲೆಗೋ ಅಥವಾ ಕಾಲದ ಅನಂತದೊಳಗೋ ಸೇರುತ್ತಿದ್ದವು. ಆದರೆ ಗಾಂಧಿ ಸಾಹಿತ್ಯ ಸಂಘ ಮಾತ್ರ ತನ್ನ ಪಾಡಿಗೆ ತಾನು ಇವೆಲ್ಲವುಗಳ ಆಶ್ರಯದಾತೆ ಯಾಗಿ ಇದೆ. ಇಲ್ಲಿ ಯಾರೂ ದೊಡ್ಡವರಲ್ಲ ಚಿಕ್ಕವರೂ ಅಲ್ಲ ಎಲ್ಲರೂ ಕೆಲಸಗಾರರೇ ಅನ್ನುವ ನಂಬಿಕೆಯಿಂದ ಬದುಕಿದ್ದ ಈ ಹಿರಿಯರು ಸದ್ದಿಲ್ಲದೆ ಸರಳವಾಗಿ ಕೆಲಸ ಮಾಡುವುದನ್ನು ತಮ್ಮ ಕಿರಿಯರಿಗೆ ತಮ್ಮ ಕೃತಿಯಿಂದ ಕಲಿಸುತ್ತಿದ್ದರು. ಹೇಗೆಂದರೆ ಕಲಿತೆನೆಂಬುದು ನಮ್ಮ ಅರಿವಿಗೂ ಬಾರದ ಹಾಗೆ!

ಪ್ರತಿದಿನ ನಾವು ಗೆಳೆಯರು ಕೂಡುವ ತಾಣವಾಗಿದ್ದ, ಕೇಂದ್ರ ಬಿಂದುವಾಗಿದ್ದ ಗಾಂಧಿ ಸಾಹಿತ್ಯ ಸಂಘದಲ್ಲಿ ಹರಟೆಗೆ ಕೊರತೆ ಇರಲಿಲ್ಲ. ನಮ್ಮ ಗೆಳೆಯರು ಸಿಕ್ಕರೆ ಉಂಟು ಇಲ್ಲದಿದ್ದರೆ ಸದಾ ಇರುತ್ತಿದ್ದ ಕಸ್ತೂರಿ ಅವರಂತೂ ಯಾವಾಗಲೂ ನಮ್ಮ ಜೊತೆಗೆ ಜಗತ್ತಿನ ಯಾವುದೇ ವಿಷಯ ಕುರಿತು ಹಂಚಿಕೊಳ್ಳಲು ಸದಾ ಸಿದ್ಧ. ವಯೋ ಸಹಜವಾಗಿ ಇವರು ಏನ್ನೋಂದು ಮಾತಾಡುತ್ತಾರೆ, ಹಳೆ ನೆನಪುಗಳಲ್ಲಿ ಮುಳುಗುತ್ತಾರೆ ಅಂತ ಅನ್ನಿಸುತ್ತಿದ್ದರೂ ಆ ಹರಟೆಗಳು ನಮ್ಮನ್ನು ಎಷ್ಟು ಸಂಪನ್ನಗೊಳಿಸಿತು ಅಂತ ಈಗ ತುಂಬಿ ಬರುತ್ತದೆ. ಸಾಮಾನ್ಯ ಹರಟೆಯಲ್ಲಿ ತುಂಬಾ ಮಾತಾಡುತ್ತಿದ್ದ ಕಸ್ತೂರಿಯವರು ಭಾಷಣದಲ್ಲಿ ಅದರ ಔಚಿತ್ಯ ತುಂಬಾ ಚೆನ್ನಾಗಿ ಕಾಪಾಡುತ್ತಿದ್ದರು. ಕೇಳುವವರಿಗೆ ಹಿತವಾಗುವ ಹಾಗೆ ಅದರಲ್ಲೂ ಯುವಕರಿಗೆ ಕೊಂಚ ತಮಾಷೆಯಾಗಿ ಸರಳವಾಗಿ ಆದರೆ ಹೇಳಬೇಕಾದಷ್ಟನ್ನ ಯಾವ ಆಡಂಬರವೂ ಇಲ್ಲದೆ ಎಷ್ಟು ಚೆನ್ನಾಗಿ ಮಾತಾಡಿದರು ಅಂತನ್ನಿಸುವ ಹಾಗೆ ಮಾತಾಡಿ ಮುಗಿಸುತ್ತಿದ್ದರು.

ಅದು ತೊಂಭತ್ತೆರಡರ ಬಾಬ್ರಿ ಮಸೀದಿ ಘಟನೆಯಾದ ಹೊಸದು; ನಮ್ಮ ಗುಂಪಿಗೇಕೆ ಇಡೀ ದೇಶಕ್ಕೇ ಅದೊಂದು ಬಹು ಚರ್ಚೆಯ ವಿಷಯ. ಕಸ್ತೂರಿಯವರು mob mentality ಕುರಿತು ಹೇಳುತ್ತಾ ಗುಂಪಿನ ವಿವೇಕ ಮಂಕಾಗಿ ಹೀಗಾಗಿ ಬಿಡುತ್ತೆ ಅನ್ನುವ ಮಾತು ವಿಷಾದದಿಂದಲೇ ಹೇಳಿದ್ದರು. ನನ್ನ ಗೆಳೆಯ ಅವರ ಮಾತುಗಳನ್ನು ಅಪಾರ್ಥ ಮಾಡಿಕೊಂಡು ಹುಚ್ಚುಚ್ಚಾಗಿ ಎಗರಾಡಿದ್ದು ನೆನಪಾಗುತ್ತದೆ.


ಮತ್ತೊಮ್ಮೆ 'ಭೂಮಿದಿನ'ದ ಕಾರ್ಯಕ್ರಮ, ಅವತ್ತು ನಾವು ಗೆಳೆಯರು ರಾತ್ರಿ ಇಡೀ ಒಂದು ಬೃಹತ್ ಪೇಪರ್‌ಗ್ಲೋಬ್ ನಿರ್ಮಿಸಿ ಅದನ್ನು ಮಲ್ಲೇಶ್ವರದಲ್ಲಿ ಮೆರವಣಿಗೆ ಮಾಡುವ ಇರಾದೆ. ಕಸ್ತೂರಿಗಳು ಚಿಕ್ಕ ಹುಡುಗರ ಹಾಗೆ ತಮ್ಮ ದಟ್ಟಿ ಪಂಚೆ ಎತ್ತಿಕಟ್ಟಿ ಆ ಗ್ಲೋಬು ಹೆಗಲಿಗೆ ಹೊತ್ತು ನಮ್ಮ ಮೆರವಣಿಗೆಯ ಭಾಗವಾಗಿದ್ದು ನೆನಪಾದಾಗ ಅವರ ಸರಳತೆಯ ಬಗ್ಗೆ ಗೌರವ ಉಕ್ಕುತ್ತದೆ. ಬೀದಿ ನಾಟಕ, ವಿಚಾರ ಸಂಕಿರಣ, ಪುಸ್ತಕ, ಪತ್ರಿಕೆ ಏನು ಮಾಡಿದರೂ ನಿಮ್ಮ ಜೊತೆಗೆ ನಾನು ಎನ್ನುವುದು ಅವರ ಮಂತ್ರ. ಪರಿಸರವಾದ, ಗಾಂಧೀತತ್ತ್ವಗಳನ್ನು ಆಧರಿಸಿದ ಸಂಘಟನೆಗಳು, ಕಾರ್ಯಕ್ರಮಗಳೊಡನೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಲ್ಲದೆ ನಮ್ಮನ್ನೂ ತೊಡಗಿಸುತ್ತಿದ್ದುದು ವಿಶೇಷ. ಪ್ರತಿ ಗಾಂಧಿ ಜಯಂತಿಗೂ ಯುವಕರ ಕಾರ್ಯಕ್ರಮವೊಂದಕ್ಕೆ ನಮ್ಮ ಪಾಲೂ ಇರುತ್ತಿತ್ತು.

ಒಬ್ಬ ಮನುಷ್ಯ ಅರವತ್ತು ವರ್ಷಗಳ ಕಾಲ ತನ್ನ ಬದುಕಿನ ಬಹುಮುಖ್ಯ ಚಟುವಟಿಕೆಯಾಗಿ ಯಾವುದನ್ನೇ ನಡೆಸುವುದೂ ಸುಲಭವಲ್ಲ. ಕೃಷ್ಣಶರ್ಮರ ಶಿಷ್ಯ ಕಸ್ತೂರಿಯವರು ತಮ್ಮ ಜೀವಿತದ ಅರವತ್ತು ವರ್ಷ, ಪ್ರತಿ ದಿನ ಸಂಜೆ ಗಾಂಧಿ ಸಾಹಿತ್ಯ ಸಂಘಕ್ಕೆ, ಅದರ ಕೆಲಸಕ್ಕೆ ವ್ರತಧಾರಿಯಂತೆ ನಡೆದುಕೊಂಡರು. ಅವರ ಮಗಳು ಅಂದುಕೊಂಡದ್ದು ನಿಜ; ಕಸ್ತೂರಿ ಸಂಘಕ್ಕೆ ಬರೀ ಚಪ್ಪಲಿ ಸವೆಸಲಿಲ್ಲ ದಾರಿಯನ್ನೇ ಸವೆಸಿದರು. ಚಳಿ, ಮಳೆ, ಅನಾರೋಗ್ಯ ಯಾವುದೂ ಅವರ ಒಳಗಿನ ಕೆಲಸಗಾರನನ್ನ ಕುಗ್ಗಿಸಲಿಲ್ಲ. ಅಂದುಕೊಂಡ ಕೆಲಸಗಳನ್ನ ಮಾಡಿ ಮುಗಿಸಬೇಕೆನ್ನುವ ಚಡಪಡಿಕೆ ಅವರಲ್ಲಿ ಸದಾ ಇರುತ್ತಿತ್ತು. ಕಸ್ತೂರಿ ಸಾಕಷ್ಟು ಬರೆದೂ ಇದ್ದಾರೆ. ಸಿದ್ಧವನಹಳ್ಳಿ ಕೃಷ್ಣಶರ್ಮ, ರಾಜರತ್ನಂ, ಡಿವಿಜಿ ಮುಂತಾದವರ ಕುರಿತ ಜೀವನ ಚರಿತ್ರೆಗಳ ಪುಸ್ತಕಗಳು, ಕನ್ನಡ ಸಾಹಿತ್ಯದಲ್ಲಿ ಗಾಂಧಿ, ಮಕ್ಕಳಿಗಾಗಿಯೇ ಅನೇಕ ಪುಸ್ತಕಗಳು, ಗಾಂಧಿ ಸಾಹಿತ್ಯದ ಸಂಪುಟಗಳ ಅನುವಾದ, ರಾಜರತ್ನಂ ಮಕ್ಕಳ ಸಾಹಿತ್ಯ ಸಂಪುಟ ಸಂಪಾದನೆ, ಹೀಗೆ ಅನೇಕ ಕೃತಿಗಳು ಕಸ್ತೂರಿ ಅವರ ಕರ್ತೃತ್ವದ ಫಲಗಳು. ಅನೇಕ ಗೌರವಗಳು ಅವರನ್ನ ಹುಡುಕಿಕೊಂಡು ಬಂದರೂ ಅವರಿಗೆ ಅವುಗಳ ಬಗ್ಗೆ ಯಾವತ್ತಿನ ಕೆಲಸಗಾರನ ನಿರ್ಲಿಪ್ತಿ ಹಾಗೂ ವಿನಯ. ಕಸ್ತೂರಿಯವರು ಗಾಂಧಿ ಸಾಹಿತ್ಯ ಸಂಘದ ಭಾಗವಾಗಿ ತಮ್ಮ ಹಿರಿಯರು ತೋರಿದ ಹಾದಿಯಲ್ಲಿ ಸಾಗಿ ತಮ್ಮ ಬದುಕನ್ನಷ್ಟೇ ಅಲ್ಲ ಅನೇಕ ಸಾಮಾಜಿಕ ಅಗತ್ಯಗಳನ್ನು ಸಂಪನ್ನಗೊಳಿಸಿದರು, ಸದ್ದುಗದ್ದಲವಿಲ್ಲದೇ ನಿರಾಡಂಬರವಾಗಿ ಅದೇ ಗಾಂಧಿತನದಲ್ಲಿ.

ಅವರ ಮಾತುಗಳಲ್ಲಿ ಈ ಕಾಲದ ರಾಜಕೀಯ, ಸಾಮಾಜಿಕ, ಕೌಟುಂಬಿಕ ಪರಿಸ್ಥಿತಿಗಳ ಕುರಿತ ಕಳವಳ-ಆತಂಕಗಳು ವ್ಯಕ್ತವಾಗುತ್ತಿತ್ತು. ಹಾಗೆಯೇ ಜಗತ್ತಿನ ಯಾವುದೇ ಮೂಲೆಯ ಗಾಂಧಿಗಿರಿ ಬಗ್ಗೆ, ಗಾಂಧೀಜಿಯವರ ಬಗ್ಗೆ ಸಲ್ಲುವ ಹೊಗಳಿಕೆ, ಟೀಕೆ ಎಲ್ಲದರ ಬಗೆಗೆ ಅವರ ಮನಸ್ಸು ಸದಾ ಜಾಗೃತಗೊಂಡಿರುತ್ತಿತ್ತು. ಒಬಾಮ ಗಾಂಧೀಜಿಯನ್ನು ಮೆಚ್ಚಿ ಮಾತನಾಡಿದಾಗಲೂ ಅಮೆರಿಕೆಯ ಎಲ್ಲ ಅವಗುಣಗಳನ್ನೂ ಮರೆತು ಮೆಚ್ಚುವ

ಮೊಡ್ಡಸ್ತಿಕೆ, ಮುಗ್ಧತನ ಕಸ್ತೂರಿಯವರಿಗಿತ್ತು. ಕಸ್ತೂರಿಯವರ ಮಲ್ಲೇಶ್ವರದ ಮನೆ ಹೆಸರು 'ಮಿಥಿಲಾ' ಅನೇಕ ವರ್ಷಗಳು ನೀರೆರೆದು ಬೆಳೆಸಿದ ಹಸಿರು ಗಿಡ ಮರಗಳ ತಂಪು ಅಂಟಿ ಮನೆಗೆ ಒಂದು ಸೊಬಗನ್ನ ನೀಡಿತ್ತು. ಆ ಮನೆಯನ್ನ ತನ್ನ ಬಂಧು-ಬಾಂಧವರ ಜೊತೆಗೂಡಿ ಕಾಲಕ್ಕೆ ತಕ್ಕ ಹಾಗೆ ಅಪಾರ್ಟ್‌ಮೆಂಟ್ ಆಗಿ ರೂಪುಗೊಳಿಸಿದಾಗಲೂ ಅವರಲ್ಲಿದ್ದ ಹಂಚಿಕೊಂಡು ಬದುಕುವ ಗಾಂಧಿಗಿರಿಯೇ ಮೇಲುಗೈ ಸಾಧಿಸಿತ್ತು. ಈಚೆಗೆ ಭೇಟಿಯೊಂದರಲ್ಲಿ ತಮ್ಮ ಅನಾರೋಗ್ಯ ಹಣ್ಣು ಮಾಡಿರುವ ಬೇಸರಕ್ಕಿಂತಲೂ ಡಯಾಲಿಸಿಸ್ ಮುಂತಾದ ಚಿಕಿತ್ಸೆಗಳ ದುಬಾರಿತನ ಅವರ ಬೇಸರಕ್ಕೆ ಕಾರಣವಾಗಿತ್ತು. ವರ್ಷಗಟ್ಟಲೆ ಕಷ್ಟಪಟ್ಟು ಮುಂದೆ ಓದಬೇಕು ಅಂದುಕೊಂಡು ಸಂಗ್ರಹಿಸಿದ ಪುಸ್ತಕಗಳನ್ನು ಓದಲು ತ್ರಾಣವಿಲ್ಲದ ತಮ್ಮ ಅನಾರೋಗ್ಯದ ಹಿನ್ನೆಲೆಯಲ್ಲಿ ಯಾರಿಗಾದರೂ ದಾನ ಮಾಡಬೇಕೆಂದು ವಿಷಾದದಿಂದ ಹೇಳಿಕೊಂಡಿದ್ದರು.

ಯಾವುದೇ ಕಾರ್ಯಕ್ಕೆ ಮಾತುಗಳ, ವಸ್ತುಗಳ ಹಾಗೂ ಮನುಷ್ಯರ ಆಡಂಬರ ನಿರಾಕರಿಸುವ ಗಾಂಧೀತನ ಕಸ್ತೂರಿಯವರಿಗೆ ರಕ್ತಗತವಾಗಿತ್ತು. ಅದು ಅವರ ಬದುಕಿನ ಎಲ್ಲ ಹೆಜ್ಜೆಗಳಲ್ಲೂ ವ್ಯಕ್ತವಾಗಿತ್ತು. ಗಿಜಿಗುಡುವ ಟ್ರಾಫಿಕ್ಕು, ನಿತ್ಯ ಮಾರುಕಟ್ಟೆಯ ಝುಗಮಗಿಸುವ ಬೆಳಕಿನಡಿಯ ಮಲ್ಲೇಶ್ವರದ ಎಂಟನೆಯ ಕ್ರಾಸಿಗೆ ಸದ್ದಿಲ್ಲದೆ ಸಂದುಹೋದ ಗಾಂಧಿವಾದದ ಪರಿಮಳದ ಕಸ್ತೂರಿಯವರು ನೆನಪಾಗಲಿಕ್ಕೆ, ಗುರುತಾಗಲಿಕ್ಕೆ ಅವರ ಪಾಪದ ಅಕೌಂಟುಗಳು ಬಿಡುವುದಿಲ್ಲ ಅನ್ನುವುದು ನಮ್ಮ ಕಾಲದ ಕಟುವಾದ ನಿಜ.



ಕಸ್ತೂರಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಸಂವಹನ ಮಾಧ್ಯಮ ಕಡಿಮೆ ಖರ್ಚಿನ ಪೋಸ್ಟ್ ಕಾರ್ಡ್. ಅವರದ್ದೇ ಕೈ ಬರಹದ ಕಾರ್ಡ್ ಇದು...

೩೦ ಸಂಚಿಕೆ

ಜಿ.ಎನ್. ರಂಗನಾಥ ರಾವ್

ಒಂದು ನಿವೇದನೆ

ಗೆಳೆಯ ದೇವ,

ನಿಮಗೆ ಹೀಗೆ ಕೊನೆಯ ನಮಸ್ಕಾರ ಹೇಳುತ್ತೇನೆ ಎಂದು ನಾನು ಎಣಿಸಿರಲಿಲ್ಲ.

ಜನವರಿ ತಿಂಗಳಲ್ಲಿ ಒಂದು ಬೆಳಗ್ಗೆ ೮ರ ಸಮಯ ನೀವು ಫೋನ್ ಮಾಡಿದಿರಿ. ಕೇರಳದ ಯಾವುದೋ ರೈಲ್ವೆ ಸ್ಟೇಷನ್ನಿನಿಂದ-ಮಂಗಳೂರಿನ ರೈಲಿಗೆ ಕಾಯುತ್ತಾ...

ಏನು ಹೇಗಿದ್ದೀರಿ, ದೇವ?

ಫಸ್ಟ್‌ಕ್ಲಾಸ್, ಅದಿರಲಿ, ನಿಮಗೆ ಅಶ್ವತ್ಥಾಮ ಗೊತ್ತಲ್ಲ

ನಿಮ್ಮ ಅಶ್ವತ್ಥಾಮನೂ ಗೊತ್ತು... ಏನು ಹೇಳಿ?

ನನ್ನ ರಥಮುಸಲ ಇಂಗ್ಲಿಷ್‌ನಲ್ಲಿ ಅನುವಾದಗೊಂಡು ಪ್ರಕಟವಾಗಿದೆ. ಅದಕ್ಕೆ ಮರುಳಸಿದ್ದಪ್ಪ ಮುನ್ನುಡಿ ಬರೆದಿದ್ದಾರೆ...

ಓಹೋ... ಒಳ್ಳೆಯ ನಾಟಕ ಅದು

ಈಗ ಅಶ್ವತ್ಥಾಮ ಮತ್ತು ಇನ್ನೆರಡು ಕಿರುನಾಟಕಗಳ ಇಂಗ್ಲಿಷ್ ಅನುವಾದ ಮಾಡ್ತಿದೀನಿ... ಅದಕ್ಕೆ ನೀವು ಮುನ್ನುಡಿ ಬರೆದುಕೊಡಬೇಕು.

ನಿಮ್ಮ ಇಂಗ್ಲಿಷ್ ಅಶ್ವತ್ಥಾಮ ತರಾತುರಿಯಲ್ಲಿದ್ದರೆ ನನ್ನಿಂದ ಆಗದೇನೋ... ಅದೂ ನಿಮ್ಮ ಒಳ್ಳೆಯ ನಾಟಕಗಳಲ್ಲಿ ಒಂದು. ನಾನೀಗ ಬೇರೊಂದು ಕೆಲಸ ಮೈಮೇಲೆ ಎಳೆದುಕೊಂಡಿರುವುದರಿಂದ...

ಅಡ್ಡಿ ಇಲ್ಲ, ತರಾತುರಿ ಏನಿಲ್ಲ. Take your own time... ನೀವು ಬರೆದರೆ ನನಗೆ ಖುಷಿಯಾಗುತ್ತೆ.

ಆಯಿತು. ನಿಮಗೆ ಇಲ್ಲ ಅನ್ನಲಿಕ್ಕುಂಟೆ. ಹಳೆಯ ನಾನು ಗೆಳೆಯ ನೀನು... ಮೇ ತಿಂಗಳಲ್ಲಿ ಕೊಡುತ್ತೇನೆ.

ಚುಕುಪುಕು ಚುಕುಪುಕು... ದೇವನ ರೈಲು ಬಂದಿರಬೇಕು.

ಮೇ ಎಂದದ್ದು ಜೂನ್‌ವರೆಗೆ ಹೋಯಿತು. ಮುನ್ನುಡಿ ಮುಗಿಸಿದ ಉತ್ಸಾಹದಿಂದ ದೇವನಿಗೆ ಫೋನ್ ಮಾಡಿದ್ದೇ ಮಾಡಿದ್ದು... ಉತ್ತರವಿಲ್ಲ, ಅವರ ರೈಲು ಆಗಲೇ ಬಂದು ಹೋಗಿಯಾಗಿತ್ತಲ್ಲ!

ದೇವ, ಅಲ್ಲ ದೇವರೆ * ಇಗೋ ನೀವು ಕೇಳಿದ ಮುನ್ನುಡಿ...


ಒಪ್ಪಿಸಿಕೊಳ್ಳಿ ಎನ್ನಲು ಅಂತರ್ಧಾನವಾಗಿಬಿಟ್ಟಿದ್ದೀರಲ್ಲ...

ನೀವಿಲ್ಲ-

ಇಲ್ಲ ಅನ್ನಲುಂಟೆ?

ಅಶ್ವತ್ಥಾಮ ಚಿರಂಜೀವಿ.

★ ರಾಮಚಂದ್ರದೇವ ಆಗ ಸ್ವಲ್ಪ ಮುಂಗೋಪಿ. ಪ್ರಜಾವಾಣಿಯ ದಿನಗಳಲ್ಲಿ ವೈಕುಂಠರಾಜು, ಸದಾಶಿವ, ನಾನು ಅವರನ್ನು ದೇವರು ಎಂದು ರೇಗಿಸುತ್ತಿದ್ದುದುಂಟು.





ರಾಮಚಂದ್ರ ದೇವರ ಮೂರು ನಾಟಕಗಳು

ಕನ್ನಡದಲ್ಲಿ ನಾಟಕ ಸಾಹಿತ್ಯವನ್ನು ರಂಗಕೃತಿ, ಸಾಹಿತ್ಯಕೃತಿ ಎಂದು ವಿಭಜಿಸುವ ಪ್ರಕ್ರಿಯೆ ಶುರುವಾದದ್ದು ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ. ಅದೂ ರಂಗಭೂಮಿಯ ನಿರ್ದೇಶಕನ ಅನುಕೂಲಕ್ಕಾಗಿ ಅಥವಾ ನಿರ್ದೇಶಕನ ಅಹಮಿಕೆಯ ತೃಪ್ತಿಗಾಗಿ. ರಂಗಭೂಮಿ ನಿರ್ದೇಶಕನ ಮಾಧ್ಯಮ ಎಂಬ ಪರಿಕಲ್ಪನೆಯೇ ಇಂಥದೊಂದು ಚಿಂತನೆಯ ಮೂಲವಿದ್ದೀತು. ಆದಾಗ್ಯೂ ನಾಟಕವೂ ಒಂದು ಸಾಹಿತ್ಯ ಪ್ರಕಾರ- Drama as literary form ಎಂಬುದೊಂದುಂಟು. ಇದಕ್ಕೆ ಕಾವ್ಯೇಷು ನಾಟಕಂ ರಮ್ಯಂ ಎಂಬ ಉಕ್ತಿಗಿಂತ ಉತ್ತಮವಾದ ಮತ್ತೊಂದು ಉದಾಹರಣೆಗಾಗಿ ಹುಡುಕಬೇಕಾಗಿಲ್ಲ. ಕಾವ್ಯ, ನಾಟಕ, ಸಾಹಿತ್ಯ, ರಂಗಕೃತಿ ಇವೆಲ್ಲದರ ಮೂಲ ಆಶಯ ಒಂದೇ. ರಸಾಸ್ವಾದನೆ, ರಸಾನುಭವ, ಕಾವ್ಯಮೀಮಾಂಸೆ, ಮತ್ತು ನಾಟ್ಯಶಾಸ್ತ್ರಗಳಲ್ಲಿನ ರಸಾನುಭವ ಮತ್ತು ರಸನಿಷ್ಪತ್ತಿ ಸೂತ್ರಗಳು ಸಾಹಿತ್ಯ, ರಂಗಭೂಮಿ ಎರಡಕ್ಕೂ ಅನ್ವಯವಾಗುವಂಥಾದ್ದು. ಆದಾಗ್ಯೂ ನಾಟಕ ಸಾಹಿತ್ಯದ ರಸಾಸ್ವಾದನೆ-ರಸಾನುಭವಗಳ ಪರಮಸಿದ್ಧಿ ಇರುವುದು ಅದರ ರಂಗ ಪ್ರಯೋಗದಲ್ಲಿ ಎನ್ನುವ ಸಿದ್ಧಾಂತದಿಂದಾಗಿ ರಂಗಕೃತಿಯ ಹೆಚ್ಚಳ. ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನ ಬರೆದಿರುವ ಕ್ರಿ.ಶ. ಹತ್ತನೆ ಶತಮಾನದ ಲಾಕ್ಷಣಿಕ ಭಟ್ಟತೌತನು-

ಪ್ರಯೋಗತ್ವ ಮನಾಪನ್ನೇ ಕಾವ್ಯೇನಾಸ್ವಾದ ಸಂಭವಃ ಎನ್ನುತ್ತಾನೆ.★೧ ಎಂದರೆ ಕಾವ್ಯ ನಾಟ್ಯರೂಪ ತಾಳದ ಹೊರತು ಕಾವ್ಯದಲ್ಲಿ ರಸಾಸ್ವಾದನೆ ಉಂಟಾಗದು. ಕಾವ್ಯನಾಟಕವೇ ಆದರ್ಶ ಪ್ರಾಯವಾದದ್ದು ಎಂದು ಪಾಶ್ಚಾತ್ಯ ನವ್ಯಕಾವ್ಯದ ಪ್ರವರ್ತಕ ಕವಿಗಳಲ್ಲಿ ಒಬ್ಬನಾದ ಟಿ.ಎಸ್. ಎಲಿಯಟ್ ಹೇಳುತ್ತಾನೆ.

"...Drama is essentially poetic and the greatest drama always moves towards poetry" *2

ಶ್ರೇಷ್ಠ ನಾಟಕ, ಶ್ರೇಷ್ಠ ಕಾವ್ಯ. ಶ್ರೇಷ್ಠ ಕಾವ್ಯದ ರಸಾಸ್ವಾದನೆ ಅದರ ನಾಟ್ಯಮಯತೆಯಲ್ಲಿದೆ ಎಂದಾಯಿತು. ಸಾಹಿತ್ಯ ಕೃತಿಯಾಗಿಯೂ ನಾಟಕ ಕಾವ್ಯವಾಗಬೇಕು ಹಾಗೂ ತನ್ನ ನಾಟ್ಯಮಯತೆ ಯಿಂದಾಗಿ ರಂಗಭೂಮಿಯ ಕಾವ್ಯವಾಗಿಯೂ ಸೈ ಎನ್ನಿಸಿಕೊಳ್ಳಬೇಕು. ಹೀಗಾಗಿ ನಾಟಕಕಾರನ ಪ್ರತಿಭೆ ಎಂಬುದು ಎರಡು ದೋಣಿಯ ಪಯಣ.

ನೂರಾರು ವರ್ಷಗಳ ಸುದೀರ್ಘ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಮತ್ತು ರಂಗಭೂಮಿ ಎರಡರಲ್ಲೂ ಈ ಮಾತಿಗೆ ಹಲವಾರು ನಿದರ್ಶನಗಳು ಸಿಗುತ್ತವೆ. ಹಾಗೆ ನೋಡಿದರೆ ನಮ್ಮ ಕಂಪನಿ ನಾಟಕಗಳೆಲ್ಲ ರಂಗ ಕೃತಿಗಳೇ. ಅವುಗಳ ಕಾವ್ಯತನ ಎಷ್ಟು ಎನ್ನುವುದು ಬೇರೆ ಮಾತು. ಹಾಗೆಯೇ ನಾಟಕ ಸಾಹಿತ್ಯದ ನಾಟ್ಯಮಯತೆ ಬಗ್ಗೆಯೂ ಇದೇ ಮಾತನ್ನು ಹೇಳಬಹುದು. ಕಾವ್ಯದ ಮಾಂತ್ರಿಕ ಸ್ಪರ್ಶವಿಲ್ಲದೆ ಸಂಭಾಷಣೆಯ ಬಲದ ಮೇಲೇ ನಿಂತಿರುವ ಗದ್ಯನಾಟಕಗಳ ಕಾಲವೂ ನಮ್ಮಲ್ಲಿ ಬಂದುಹೋಗಿದೆ. 'ಕಾವ್ಯೇಷು ನಾಟಕಂ ರಮ್ಯಂ' ನಾಟಕ ಸಾಹಿತ್ಯ ಕೃತಿಗಳೂ ಇವೆ.

Drama is essentially poetic ಎನ್ನುವ ಹಾಗೂ ಪ್ರಯೋಗತ್ವ 'ಮನಾಪನ್ನೇ ಕಾವ್ಯೇನಾಸ್ವಾದ ಸಂಭವಃ' ಈ ಎರಡೂ ಪರಿಕಲ್ಪನೆಗಳ ಪ್ರಜ್ಞೆಯನ್ನು ಕೈಲಾಸಂ, ಶ್ರೀರಂಗ, ಪರ್ವತವಾಣಿ ನಂತರದ ತಲೆಮಾರಿನ ಕನ್ನಡ ನಾಟಕಕಾರರಲ್ಲಿ ನಾವು ಢಾಳಾಗಿ ಕಾಣುತ್ತೇವೆ. ಲಂಕೇಶ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಶಿವಪ್ರಕಾಶ್, ಎಚ್.ಎಸ್. ವೆಂಕಟೇಶ ಮೂರ್ತಿ ಇಂಥವರಲ್ಲಿ ಪ್ರಮುಖರು. ಈ ಪ್ರಮುಖರ ಸಾಲಿನಲ್ಲಿ ನಿಲ್ಲುವ ಇನ್ನೊಬ್ಬ ನಾಟಕಕಾರ ರಾಮಚಂದ್ರ ದೇವ.

ರಾಮಚಂದ್ರ ದೇವರ ಸೃಜನಶೀಲ ಪ್ರತಿಭೆಯ ಮೂಲ ಸೆಲೆ ಕಾವ್ಯವೇ. ಅವರು ಶುರುವಿಗೆ ಬರೆದದ್ದು ಕವನಗಳು ಮತ್ತು ಕಥೆಗಳನ್ನೇ. ಅವರ ಕಥೆಗಳಲ್ಲಿ ಕಾವ್ಯದ ಸೊಗಡಿನೊಟ್ಟಿಗೇ ನಾಟಕೀಯತೆ, ನಾಟ್ಯಮಯತೆಗಳೂ ಶೃಂಗಸದೃಶವಾಗಿ ಕಾಣಿಸಿಕೊಳ್ಳುವುದುಂಟು. ಈ ಮಾತಿಗೆ ನಿದರ್ಶನವಾಗಿ ದಂಗೆಯ ಪ್ರಕರಣ, ಜೀವಪಕ್ಷಿಯ ಕಥೆ, ಮೂಗೇಲ, ರಿಸಾರ್ಟ್ ಮೊದಲಾದವು ಅಧ್ಯಯನಯೋಗ್ಯ ಕಥೆಗಳಾಗಿವೆ. ಮಿಗಿಲಾಗಿ ಹುಟ್ಟಿದ ನೆಲದ ಯಕ್ಷಗಾನ ಸಂಸ್ಕೃತಿಯ ನಾಟ್ಯಮಯತೆ ಮತ್ತು ಕಾವ್ಯೋತ್ಕರ್ಷಗಳು ಅವರ ಪ್ರತಿಭೆಯ ರಕ್ತಗತ ಅಂಶಗಳು. ಇದರ ಜೊತೆಯಲ್ಲೇ ಓದುಗರು ನೆನಪಿನಲ್ಲಿಟ್ಟುಕೊಳ್ಳಬೇಕಾದ ಇನ್ನೊಂದು ಅಂಶವೆಂದರೆ ರಾಮಚಂದ್ರ ದೇವ ಅವರ ಆಧುನಿಕ ಪ್ರಜ್ಞೆ. ವಸಾಹತೋತ್ತರ ಭಾರತದಲ್ಲಿ ಮತ್ತು ಯುದ್ಧೋತ್ತರ ಪ್ರಪಂಚದಲ್ಲಿ, ಯುದ್ಧಪಿಪಾಸೆ ಮತ್ತು ವಸಾಹತುಶಾಹಿಯ ಕರಿನೆರಳಾಗಿ ಇನ್ನೂ ಮಾನವಕುಲವನ್ನು ಕಾಡುತ್ತಿರುವ

★೧ ಭಾರತೀಯ ಕಾವ್ಯಮೀಮಾಂಸೆ, ಲೇ: ತೀ.ನಂ.ಶ್ರೀ ಪುಟ: ೩೫೨

*2 Selected Essays- T.S. Eliot

ಶೋಷಣೆ, ಅಸಮಾನತೆ, ಕ್ರೌರ್ಯ, ಧರ್ಮಾಂಧತೆ, ಜನಾಂಗೀಯ ಹತ್ಯೆ ಇತ್ಯಾದಿಗಳಿಗೆ ಸ್ಪಂದಿಸುವ ಸಂವೇದನೆಯಿಂದ ಮೂಡಿದ ಆಧುನಿಕ ಪ್ರಜ್ಞೆ. ಪುರಾಣ, ಇತಿಹಾಸಗಳನ್ನು ಆಧುನಿಕ ಪ್ರಜ್ಞೆಯೊಂದಿಗೆ ಮುಖಾಮುಖಿಯಾಗಿಸುವುದು ಅವುಗಳನ್ನು ಆಧುನಿಕ ಸಂವೇದನೆಗೆ ದುಡಿಸಿಕೊಳ್ಳುವುದು ದೇವ ಅವರ ಸೃಜನಶೀಲತೆಯ ವಿಶಿಷ್ಟ ಪರಿಯಾಗಿದೆ.

ರಾಮಚಂದ್ರ ದೇವರ ನಾಟಕಗಳ ಓದು, ರಸಾನುಭವಗಳಿಗೆ ಈ ಹಿನ್ನೆಲೆಯ ತಿಳಿವಳಿಕೆ ಅಗತ್ಯ ಎಂಬುದು ನನ್ನ ವಿನಮ್ರ ಅನಿಸಿಕೆ. ಇನ್ನು ಅವರ ಈ ಸಂಕಲನದಲ್ಲಿನ ನಾಟಕಗಳತ್ತ ಹೊರಳಬಹುದು.

೨

ರಾಮಚಂದ್ರ ದೇವ ಬಹುಮುಖ ಪ್ರತಿಭೆಯುಳ್ಳ ಲೇಖಕರಾದರೂ ಪುಂಖಾನುಪುಂಖವಾಗಿ ಬರೆದವರಲ್ಲ. ಅವರ ಇದುವರೆಗಿನ ಪ್ರಕಟಿತ ಕೃತಿಗಳು ಸುಮಾರು ಇಪ್ಪತ್ತು. ಇದರಲ್ಲಿ ಹದಿಮೂರು ಸ್ವತಂತ್ರ ನಾಟಕಗಳು, ಎರಡು ಅನುವಾದಗಳು-ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆಥ್ ಮತ್ತು ಹ್ಯಾಮ್ಲೆಟ್, **ಶೇಕ್ಸ್‌ಪಿಯರ್ ಎರಡು ಸಂಸ್ಕೃತಿಗಳಲ್ಲಿ** ಅವರ ಸಂಪ್ರಬಂಧ ಗ್ರಂಥ. ಪ್ರಸ್ತುತ ನಮ್ಮ ಮುಂದಿರುವುದು ಮೂರು ನಾಟಕಗಳ ಒಂದು ಗುಚ್ಛ. ಈ ಮೂರು ನಾಟಕಗಳು:

೧. ಅಶ್ವತ್ಥಾಮ , ೨. ಹುಲಿಯ ಕಥೆ, ೩. ದಂಗೆ

ಅಶ್ವತ್ಥಾಮ, ಮಹಾಭಾರತದ ಒಂದು ಪಾತ್ರದ ನಿರೂಪಣೆಯಾದರೆ ಉಳಿದೆರಡು ಇತಿಹಾಸ ವರ್ತಮಾನಗಳ ನಡುವೆ ತೂಗುಯ್ಯಾಲೆಯಾಡುವ ನಾಟಕಗಳು.

ಅಶ್ವತ್ಥಾಮ ಮಹಾಭಾರತದ ಒಂದು ವಿಶಿಷ್ಟ ನಮೂನೆ. ಯಮಸ್ವರೂಪಿಯಾದ ಅಶ್ವತ್ಥಾಮ ದುರಂತನಾಯಕನೂ ಹೌದು, ಖಳನಾಯಕನೂ ಹೌದು. ಎಂದೇ, ಮಹಾಭಾರತದ ಶ್ರೀಕೃಷ್ಣ ಧರ್ಮರಾಯ, ಧೃತರಾಷ್ಟ್ರ ದುರ್ಯೋಧನ, ಭೀಷ್ಮರಂಥವರಂತೆ ಅಶ್ವತ್ಥಾಮನೂ ನಿರ್ಣಾಯಕ. ಅಶ್ವತ್ಥಾಮನ ವ್ಯಕ್ತಿತ್ವವೂ ಸಂಕೀರ್ಣವಾದದ್ದು. ಅಶ್ವತ್ಥಾಮನ ಹುಟ್ಟು ಬದುಕುಗಳೂ ವಿಧಿನಿಗೂಢ. ಅವನ ಬದುಕಿನ ವಿವರಗಳನ್ನು ಹೀಗೆ ಸಂಗ್ರಹಿಸಬಹುದು.

ಮಹಾಭಾರತದ ದುರಂತಪಾತ್ರಗಳಲ್ಲಿ ಅಶ್ವತ್ಥಾಮ ಚಿರಂಜೀವಿ. ದ್ರೋಣ ಪುತ್ರ. ಹುಟ್ಟಿನಿಂದಲೇ absurd, abnormal ಅನ್ನುವಂಥ ಗುಣಗಳು ಇವನಲ್ಲಿ. ಹಸುಳೆಯಾಗಿದ್ದಾಗ ಹಾಲಿಗೆ ಬದಲಾಗಿ ಪಿಷ್ಟೋದಕವನ್ನು ಆತ ಕುಡಿಯಬೇಕಾಯಿತಂತೆ. ಹುಟ್ಟುತ್ತಲೇ ಕುದುರೆಯ ಹಾಗೆ ಕೆನೆದ. ಆ ಕಾರಣ, ಅಶರೀರವಾಣಿಯ ಆದೇಶದಂತೆ ಅವನಿಗೆ ಅಶ್ವತ್ಥಾಮ ಎಂದು ಹೆಸರಿಟ್ಟರು. ಮುಂದೆ ತಂದೆಯಲ್ಲಿ ಬಿಲ್ಲುಗಾರಿಕೆ ಕಲಿತ. ಆದರೆ ಅಲ್ಲಿಂದ ಉದ್ದಕ್ಕೂ ಸೋಲಿನ ಕಥೆ ಆತನದು. ತನ್ನನ್ನು ಯಃಕಶ್ಚಿತ್ತವಾಗಿ ಕಂಡು ಹೀಗಳೆದರೂ ದುರ್ಯೋಧನನ ಬಗೆಗೆ ಆತನಿಗೆ ತೀರದಂಥ ಅನುಕಂಪ. ತನ್ನ ಪ್ರಭು, ಭೀಮಸೇನನಿಂದ ಪರಾಭವಗೊಂಡು ತೊಡೆಮುರಿದು ಕಿರೀಟಭಗ್ನನಾಗಿ ತಡೆಯಲಾರದಂಥ ದೈಹಿಕ-ಮಾನಸಿಕ ಯಾತನೆಯಲ್ಲಿ ಬೇಯುತ್ತ ರಕ್ತದ ಮಡುವಿನಲ್ಲಿ ಕನವರಿಸುತ್ತಿದ್ದುದನ್ನು ಕಂಡು ಕನಿಕರವುಕ್ಕಿದ ಅಶ್ವತ್ಥಾಮ, ಪಾಂಡವರನ್ನು ತರಿದು ಬರುವುದಾಗಿ ಪಣ ತೊಟ್ಟು, ಮಾತು ಕೊಟ್ಟು ಸೇನಾಧಿಪತ್ಯವನ್ನು ಪಡೆದ. ಮಾರ್ಗಮಧ್ಯದಲ್ಲಿ ಆ ರಾತ್ರಿ ನಿದ್ರೆ ಮಾಡುತ್ತಿದ್ದ ಅನೇಕ ಕಾಗೆಗಳನ್ನು ಗೂಬೆಯೊಂದು ಕಡಿದು ಕೊಂದುದನ್ನು ಕಂಡು

ಉತ್ತೇಜನಗೊಂಡ. ಕೃಷ್ಣ, ಕೃತವರ್ಮರು ಬೇಡವೆಂದು ಅಡ್ಡ ನಿಂತರೂ ಧರ್ಮ-ಅಧರ್ಮ ಎಂಬುದನ್ನು ಲೆಕ್ಕಿಸದೆ ನಡುರಾತ್ರಿಯಲ್ಲಿ ಪಾಂಡವ ಪಾಳಯಕ್ಕೆ ನುಗ್ಗಿ, ಧೃಷ್ಟದ್ಯುಮ್ನ, ಶಿಖಂಡಿ ಹಾಗೂ ಎಳೆವಯಸ್ಸಿನ ಉಪಪಾಂಡವರನ್ನು ಕೊಂದು ಉನ್ಮತ್ತನಾಗಿ ವಿಜೃಂಭಿಸಿದ. ಕೃಷ್ಣನ ನೆರವಿನಿಂದ ಸುಳಿವು ಹಿಡಿದು ಭೀಮಾರ್ಜುನರು ಮೇಲೆರಗಿ ಬಂದಾಗ, ಶತ್ರುವನ್ನೂ ತನ್ನನ್ನೂ ಒಳಗೊಂಡು ಮೂರು ಲೋಕಗಳನ್ನು ದಹಿಸುವ ಶಕ್ತಿಯುಳ್ಳ ಐಷಿಕಾಸ್ತ್ರವನ್ನು ಹೂಡಿಬಿಟ್ಟ. ಕೃಷ್ಣನ ಆದೇಶದಂತೆ ಅದನ್ನೆದುರಿಸಲು ಅರ್ಜುನ ಗಾಂಡೀವಕ್ಕೆ ಬ್ರಹ್ಮಾಸ್ತ್ರ ಹೂಡುವುದರಲ್ಲಿದ್ದಾಗ ಅಲ್ಲಿಗೆ ವ್ಯಾಸ, ನಾರದರ ಆಗಮನವಾಗುತ್ತದೆ. ವ್ಯಾಸ, ನಾರದರ ಉಪದೇಶಕ್ಕೆ ಕಿವಿಗೊಡದ ಅಶ್ವತ್ಥಾಮ ತನ್ನ ಮಹಾಸ್ತ್ರವನ್ನು ಉಪಸಂಹರಿಸಲೊಪ್ಪದೆ, ಅದರಿಂದ ಉತ್ತರೆಯ ಗರ್ಭವನ್ನು ಸುಟ್ಟುಭಸ್ಮ ಮಾಡುವುದಾಗಿ ಸಡ್ಡು ಹೊಡೆದು ನಿಲ್ಲುತ್ತಾನೆ. ಇದರಿಂದ ಕೆರಳಿದ ಕೃಷ್ಣ ತಾಯಿಯ ಹರಕೆ-ದೈವಾನುಗ್ರಹಗಳ ಫಲವಾಗಿ ಅಶ್ವತ್ಥಾಮನ ಹಣೆಯಲ್ಲಿದ್ದ ಮಣಿಯನ್ನು ಭೀಮನಿಂದ ಕೀಳಿಸುತ್ತಾನೆ ಹಾಗೂ ಮೂರು ಸಾವಿರ ವರ್ಷಗಳ ಕಾಲ ಕಾಡು-ಮೇಡುಗಳಲ್ಲಿ ಜನರಿಂದ ದೂಷ್ಯನಾಗಿ, ಎಲ್ಲ ನೆನಪುಗಳೂ ಅಳಿಸಿಹೋಗಿ ತಲೆಯ ರಕ್ತ ಹರಿಯುತ್ತಲೇ ಇರಲು ನಿಂತಲ್ಲಿ ನಿಲ್ಲದೆ ಅಲೆಯುತ್ತಿರು ಹೋಗು. ಎಂದು ಘೋರಶಾಪವನ್ನು ಕೊಡುತ್ತಾನೆ.

-ಇದು ಅಶ್ವತ್ಥಾಮ. ಮೇಲಾಗಿ ಸಪ್ತ ಚಿರಂಜೀವಿಗಳಲ್ಲಿ ಒಬ್ಬ. ಈ ಚಿರಂಜೀವತ್ವ ಅವನಿಗೆ ವಜ್ರಕವಚವಿದ್ದಂತೆ. ಅದರಿಂದಾಗಿ ಕೃಷ್ಣನಿಂದಲೂ ಅವನನ್ನು ಮುಟ್ಟಲಾಗದು. ಅಶ್ವತ್ಥಾಮ ಮಹಾಭಾರತ ಯುದ್ಧದಲ್ಲಿ ದುರ್ಯೋಧನನ ಊರುಭಂಗದ ನಂತರ ಪಾಂಡವ ಪಾಳಯಕ್ಕೆ ನುಗ್ಗಿ ಪಾಂಡವರನ್ನೆಲ್ಲ ಕೊಂದು, ಪಾಂಡವ ಕುಲವನ್ನೇ ನಾಶಗೊಳಿಸಲು ಉತ್ತರೆಯ ಗರ್ಭಕ್ಕೇ ಗುರಿಯಿಟ್ಟಾಗ ಕೃಷ್ಣ ಘೋರ ಶಾಪ ಕೊಡುವುದರಿಂದಲೇ ತೃಪ್ತನಾಗಬೇಕಾಗುತ್ತದೆ.

ಅಶ್ವತ್ಥಾಮನ ಪ್ರಭು ನಿಷ್ಠೆ, ಪಾಂಡವರನ್ನು ಕೊಲ್ಲುವ ಪ್ರತಿಜ್ಞೆ ಇವುಗಳ ಹಿಂದೆ ಸುಪ್ತದಲ್ಲಿ ಅಡಗಿರುವ ಅವನ ವ್ಯಕ್ತಿತ್ವದ ಅವಿಚ್ಛಿನ್ನ ಪ್ರವೃತ್ತಿ ಎನ್ನಬಹುದಾದ Killer maniac ರಾಮಚಂದ್ರ ದೇವ ಅವರ ಶೋಧನೆಯಾಗಿದೆ. ಈ ಶೋಧನೆಯಿಂದಾಗಿಯೇ ಅವರಿಗೆ ಅಶ್ವತ್ಥಾಮನ ಪುರಾಣೇತಿಹಾಸಗಳ ಕಾಲದಿಂದ ವರ್ತಮಾನದವರೆಗಿನ ಮಾನವ ಕುಲನಾಶದ ಮೃತ್ಯು ಸ್ವರೂಪಿಗಳ ರೂಪಕವಾಗಿ ಎದ್ದು ಕಾಣುತ್ತಾನೆ. ಎಂಥ ವ್ಯಂಗ್ಯ ನೋಡಿ! ತಾನು ಚಿರಂಜೀವಿ, ಉಳಿದ ಮನುಕುಲಕ್ಕೆ ಮೃತ್ಯುರೂಪಿ! ಅಶ್ವತ್ಥಾಮನ ಈ ಸಂಕೀರ್ಣ ವ್ಯಕ್ತಿತ್ವ ನಮ್ಮ ತಲೆಮಾರಿನ ರಾಮಚಂದ್ರ ದೇವರಂತೆ ಹಿಂದಿನ ತಲೆಮಾರಿನ ಲೇಖಕರನ್ನೂ ಸಹ ಸೆಳೆದಿದೆ. ಕನ್ನಡ ನವೋದಯ ಸಾಹಿತ್ಯದ ಆಚಾರ್ಯರಾದ ಬಿ.ಎಂ.ಶ್ರೀ. ಮತ್ತು ಕವಿ, ನಾಟಕಕಾರ ವಿ.ಸೀ. ಇವರಲ್ಲಿ ಪ್ರಮುಖರು. ಅಶ್ವತ್ಥಾಮನ ವ್ಯಕ್ತಿತ್ವ, ನಿರೂಪಣೆಯಲ್ಲಿನ ಭಿನ್ನತೆ ಮತ್ತು ವೈಶಿಷ್ಟ್ಯಗಳನ್ನು ಪರಾಮರ್ಶಿಸುವ ಮುನ್ನ ಬಿ.ಎಂ.ಶ್ರೀ ಮತ್ತು ವಿ.ಸೀ. ಅವರ ನಾಟಕಗಳನ್ನು ಅವಲೋಕಿಸುವ ಅಗತ್ಯವಿದೆ.

ಶ್ರೀ ಅವರ ಅಶ್ವತ್ಥಾಮನ್ ಗ್ರೀಕ್ ರುದ್ರ ನಾಟಕ ಪರಂಪರೆಯ ಮಾದರಿಯದ್ದು. ಶ್ರೀ ಅವರೇ ಹೇಳಿರುವಂತೆ ಗ್ರೀಕ್ ಮಹಾಕವಿ ಸಾಫೋಕ್ಲೀಸನ ಏಜಾಕ್ಸ್ ಎಂಬ ರುದ್ರನಾಟಕವನ್ನು ಆಶ್ರಯಿಸಿ, ಮಹಾಭಾರತದ ಸೌಪ್ತಿಕ ಪರ್ವದ ಕಥೆಯನ್ನು ಅದರೊಡನೆ ಹೊಂದಿಸಿಕೊಂಡು ರಚಿಸಿದ ನಾಟಕ. ಗ್ರೀಕ್ ನಾಟಕದಂತೆ ಇಲ್ಲಿ ಮೇಳವಿದೆ. ಕೃಷ್ಣನ್, ಅಶ್ವತ್ಥಾಮನ್, ಭೀಮನ್, ಏಕಲವ್ಯನ್ ಮೊದಲಾದ ಪ್ರಮುಖರಿದ್ದಾರೆ. ಅಶ್ವತ್ಥಾಮನ್ ನಡೆ-ನುಡಿ-ನಿಲುವುಗಳೆಲ್ಲ ಸ್ವಂತ ನಿರೂಪಣೆಯಲ್ಲಿ ಹಾಗೂ ಇತರ ಪಾತ್ರಗಳ ಮುಖೇನ ಅನಾವರಣಗೊಳ್ಳುತ್ತದೆ. ಕೃಷ್ಣ

ಅಶ್ವತ್ಥಾಮನಿಗೆ ಘೋರ ಶಾಪ ಕೊಡುವುದಿಲ್ಲ. ಬದಲಾಗಿ ಕಳೆಯಂತೆ ಸೋಲ್ವುದೆ ಜಯಂ; ಕ್ಷಮೆಯೆ ತಾನ್ ಜಯಂ;... ಸತ್ಕರಿಸುವಂಬಾರ, ಪೂಜ್ಯನ್ ಅಶ್ವತ್ಥಾಮನ್ ಎಂದು ಭೀಮ ಕ್ರೋಧವನ್ನು ಸಮಾಧಾನಗೊಳಿಸುತ್ತಾನೆ. ಶ್ರೀಯವರ ಅಶ್ವತ್ಥಾಮನ್ ವೀರೋಚಿತ ರೀತಿಯಲ್ಲಿ ತನ್ನ ಖಡ್ಗದ ಮೇಲೆ ಬಿದ್ದು ಸ್ವಹತ್ಯೆ ಮಾಡಿಕೊಳ್ಳುತ್ತಾನೆ. ಚಿರಂಜೀವಿಯ ಈ ಪರಿಯ ಅಂತ್ಯಕ್ಕೆ ಕೊನೆಯಲ್ಲಿ ಜಯ ಅಶ್ವತ್ಥಾಮನ್ ಎಂಬ ಪರಾಕೂ ಸಲ್ಲುತ್ತದೆ.

ವಿ.ಸೀ. ಅವರ ಅಶ್ವತ್ಥಾಮನ್ ಮಹಾಭಾರತದ ಮೂಲಕ್ಕೆ ನಿಷ್ಠವಾಗಿರುವ ನಾಟಕ. ಕೃಷ್ಣ, ಸಾತ್ಯಕಿ, ದ್ರೌಪದಿ, ನಾರದ, ವ್ಯಾಸ ಮೊದಲಾದವರ ದೃಷ್ಟಿಯ ನಿಕಶಕ್ಕೆ ಅಶ್ವತ್ಥಾಮನನ್ನು ಒಡ್ಡಲಾಗಿದೆ. ಇವರೆಲ್ಲರ ಅಗ್ನಿದಿವ್ಯವೂ ಉತ್ತರೆಯ ಗರ್ಭಕ್ಕೆ ಮಹಾಸ್ತ್ರವನ್ನು ಗುರಿಯಿಟ್ಟ ಅಶ್ವತ್ಥಾಮನನ್ನು ಅಪರಾಧಿ ಎಂದೇ ನಿರ್ಣಯಿಸುತ್ತದೆ. ನನಗೆ ವರವಿದೆ! ಅದರ ಪುಣ್ಯದಿಂದ ಎಲ್ಲ ಪಾಪಗಳನ್ನೂ ತೊಳೆದುಕೊಳ್ಳುತ್ತೇನೆ ಎನ್ನುವ ಅಶ್ವತ್ಥಾಮನನ್ನು ಅವನು ಪಡೆದುಕೊಂಡ ವರವೂ ರಕ್ಷಿಸುವುದಿಲ್ಲ. ಕೋಟಿ ವರಗಳ ಪುಣ್ಯವನ್ನು ಈ ಶಾಪ ಮೆಟ್ಟೀತು! ಮೂರು ಸಾವಿರ ವರ್ಷಗಳ ಕಾಲ ಕಾಡುಮೇಡುಗಳಲ್ಲಿ, ಜನರಿಂದ ದೂಷ್ಯನಾಗಿ... ನಿಂತಲ್ಲಿ ನಿಲ್ಲದೆ ಅಲೆಯುತ್ತಿರು. ಎಂದು ಕೃಷ್ಣ ಶಾಪ ಕೊಡುತ್ತಾನೆ. ಇದು ಅಶ್ವತ್ಥಾಮನ ದುರಂತ. ಈ ಘೋರಶಾಪ ಕಂಡು ವಿ.ಸೀ. ಕನಿಕರ ಪಡುತ್ತಾರೆ. ದುರ್ಬಲ ಮನುಷ್ಯನ ಆತ್ಮನಾಶ ಕಂಡು ಮರುಗುತ್ತಾರೆ. ಮೂರು ಸಾವಿರ ವರ್ಷಗಳು! ಅಯ್ಯೋ, ಅಯ್ಯೋ ಇಹೈವಫಲಂ, ಇಹೈವಫಲಂ ಎಂದು ಶೋಕಿಸುತ್ತ ಅಶ್ವತ್ಥಾಮ ನಿರ್ಗಮಿಸುತ್ತಾನೆ. ಇನ್ನಾದರೂ ನಿರ್ಭಯವಾಗಿ ಧರ್ಮ ಬೆಳೆಯಲಿ! ಎನ್ನುವ ಕೃಷ್ಣನ ಮಾತಿನೊಂದಿಗೆ ನಾಟಕ ಮುಗಿಯುತ್ತದೆ.

ನನ್ನ ಅಶ್ವತ್ಥಾಮ ಶ್ರೀಯವರ ಅಶ್ವತ್ಥಾಮನಿಗಿಂತ ಬಹುಕೀಳ! ಆಗ್ರಹ ಅಶ್ವತ್ಥಾಮನ ಆಗ್ರಹವಲ್ಲ, ಸಂಯಮವಿಲ್ಲದೆ ಕೆಡುಕನ್ನೇ ಮಾಡಲು ಹೊರಟ ಮೂರ್ಖ ಅಶ್ವತ್ಥಾಮನ ಮೇಲೆ ಕೃಷ್ಣನ ಆಗ್ರಹ ಎನ್ನುವ ವಿ.ಸೀ. ಅವರ ನುಡಿಗಳಲ್ಲಿ ನಾಟಕದ ಉದ್ದೇಶ ಸ್ಪಷ್ಟವಾಗಿದೆ. ಸಾತ್ವಿಕತೆ ಉಳಿಯಬೇಕು, ಧರ್ಮಕ್ಕೆ ಜಯವಾಗಬೇಕು ಎನ್ನುವುದು ಸಂದೇಶ.

೩

ಈಗ ರಾಮಚಂದ್ರ ದೇವ ಅವರ ಅಶ್ವತ್ಥಾಮನ ಅನನ್ಯತೆಯನ್ನು ನೋಡೋಣ. ನಾಟಕದುದ್ದಕ್ಕೂ ವಿಜೃಂಭಿಸುವುದು ಸಾವಿನ ಮೂರ್ತರೂಪನಾದ ಅಶ್ವತ್ಥಾಮನೇ. ಅವನಿಗೆ, ಅವನ ಗತಿ ಲಯಗಳಿಗೆ ಶ್ರುತಿ ಹಿಡಿದಂತೆ ಕೇಳಿಬರುವುದು ಹುಟ್ಟು-ಬದುಕು-ಸಾವುಗಳ ಆಲಾಪ-ವಿಲಾಪಗಳು. ನಾಟಕದ ಈ ತನಿ-ಬನಿಗಳನ್ನು ವಿಶೇಷವಾಗಿ ಲಕ್ಷಿಸುವುದಕ್ಕೂ ಮೊದಲು ದೇವ ಮೂಲದಿಂದ ವಿಪಥರಾಗಿರುವುದರತ್ತ ಗಮನಹರಿಸಬೇಕಾದ್ದು ಅತ್ಯವಶ್ಯಕ. ಮುಖ್ಯ ಬದಲಾವಣೆ ಎಂದರೆ ಇಲ್ಲಿ ಕೃಷ್ಣನಿಲ್ಲ. ಅವನ ಶಾಪವಿಲ್ಲ ಹಾಗೂ ಶಾಪಕ್ಕೆ ಕಾರಣವಾದ ಉತ್ತರೆಯ ಗರ್ಭಕ್ಕೆ ಗುರಿಯಿಟ್ಟ ಐಷಿಕಾಸ್ತ್ರಕ್ಕೆ ಪ್ರಾಮುಖ್ಯವಿಲ್ಲ. ಮಿಗಿಲಾಗಿ ಅಶ್ವತ್ಥಾಮ ಇಲ್ಲಿ ಕೃಷ್ಣನಿಂದ ಶಾಪಗ್ರಸ್ತನಾಗುವುದಿಲ್ಲ. ನಾಟಕ ನಡೆಯುವುದು ಕುರುಕ್ಷೇತ್ರ ಯುದ್ಧ ಮುಗಿದ ನಂತರ, ಪಾಂಡವಪುತ್ರರ ಕೊಲೆಯಾದ ರಾತ್ರಿ ಹಾಗೂ ನಂತರದ ಬೆಳಗ್ಗೆ. ಸಾವು, ಕಾಲಪುರುಷ, ದ್ರೌಪದಿ, ಭಾನುಮತಿ, ದ್ರೌಪದಿಯ ಸೇವಕಿ, ಅಶ್ವತ್ಥಾಮ ಮತ್ತು ಪಾಂಡವ ಪುತ್ರರು ಮುಖ್ಯಪಾತ್ರಗಳು. ಕಾಲಪುರುಷ-ಸಾವು ಇವರಿಬ್ಬರ ಸಂಭಾಷಣೆ, ದ್ರೌಪದಿಯ ಪ್ರವೇಶ, ದ್ರೌಪದಿ ಅಲ್ಲಿಯವರೆಗಿನ

ಆಗು-ಹೋಗುಗಳ ಅಜಮಾಯಿಷಿ ಪಡೆದು ಈ ಪ್ರಕ್ರಿಯೆಯಲ್ಲೇ ತನ್ನ ಬಲ ಪ್ರದರ್ಶಿಸುವುದು, ಪ್ರೇತಾತ್ಮಗಳಾದ ಗತಿಸಿದ ಪಾಂಡವಪುತ್ರರು ಅಶ್ವತ್ಥಾಮನಿಗೆ ಅಟಕಾಯಿಸಿಕೊಳ್ಳುವುದು, ಕೊನೆಯಲ್ಲಿ ಅಶ್ವತ್ಥಾಮನ ಮನಸಾಕ್ಷಿಯ ಅಳುಕು ಅಳಿದು ಅವನು ಸೂಪರ್‌ಮ್ಯಾನ್ ಆಗಿ ವಿಜೃಂಭಿಸುವುದು, ಸಾವು ವಿಜಯೋನ್ಮಾದದಿಂದ ಬೀಗುವುದು ಈ ಗತಿಯಲ್ಲಿ ಸಾಗುತ್ತ ನಾಟಕ ಪರಾಕಾಷ್ಠೆಯನ್ನು ಮುಟ್ಟುತ್ತದೆ.

ಕಾಲಪುರುಷ ಮತ್ತು ಸಾವು ಅಶ್ವತ್ಥಾಮನಷ್ಟೇ ಪ್ರಮುಖವಾದ ಪಾತ್ರಗಳು. ಅಷ್ಟೇಕೆ, ಕಾಲಪುರುಷ ಅಶ್ವತ್ಥಾಮನ ಅಹಂಗೆ ಸವಾಲೊಡ್ಡುವ ಪಾತ್ರವಾದರೆ, ಸಾವು ಆತ್ಮಸಖನಿದ್ದಂತೆ. ಕಾಲಪುರುಷ ಮತ್ತು ಸಾವುಗಳ ಅರ್ಥವಿನ್ಯಾಸದ ಬಗ್ಗೆ ಓದುಗರಲ್ಲಿ ಕೊಂಚ ಗೊಂದಲವಾಗುವ ಸಾಧ್ಯತೆ ಇರುವುದರಿಂದ ಒಂದು ಸಣ್ಣ ವಿವರಣೆ ಅಗತ್ಯವೆನಿಸುತ್ತದೆ. ನಿಘಂಟಿನ ಅರ್ಥದ ಪ್ರಕಾರ ಕಾಲಪುರುಷ ಕಾಲಕ್ಕೆ ಅಧಿಪತಿಯಾದ ದೇವತೆ. ಅವನನ್ನು ಮೃತ್ಯುದೇವತೆ, ಯಮ, ಯಮದೂತನೆಂದೂ ಕರೆಯಲಾಗುತ್ತದೆ. ಸಾವು ಎಂದರೆ ಮರಣ, ಮೃತ್ಯು. ಈ ವಾಚ್ಯಾರ್ಥಗಳನ್ನು ಇಲ್ಲಿ ಅನ್ವಯಿಸಲಾಗದು. ಭಗವದ್ಗೀತೆ ಮತ್ತು ಭಾಗವತಗಳಲ್ಲಿ ಕಾಲನನ್ನು ಭಗವಂತನಿಗೆ ಸಮನೆಂದು ಪರಿಗಣಿಸಲಾಗಿದೆ. ಸಾವನ್ನು ಮೃತ್ಯುದೇವತೆ ಯಮನೊಂದಿಗೆ ಸಮೀಕರಿಸಿರುವುದು ತಿಳಿದ ವಿಷಯವೇ ಆಗಿದೆ. ಈ ನಾಟಕಗಳಲ್ಲಿ ಕಾಲಪುರುಷ ಹುಟ್ಟು ಮತ್ತು ಬದುಕುಗಳ, ಸೃಷ್ಟಿಯ ಚಟುವಟಿಕೆಗಳ ಬಗ್ಗೆ ವಕಾಲತ್ತು ವಹಿಸುವುದರಿಂದ, ಜೀವಪರವಾಗಿರುವುದರಿಂದ ಇಲ್ಲಿನ ಕಾಲಪುರುಷನನ್ನು ಭಗವದ್ಗೀತೆ ಮತ್ತು ಭಾಗವತಗಳ ಅರ್ಥದಲ್ಲೇ ಗ್ರಹಿಸುವುದು ಯುಕ್ತವಾದೀತು. ಸಾವು ಸ್ವತಃ ಅಶ್ವತ್ಥಾಮನ ಪ್ರತಿರೂಪವೆನಿಸಿದರೂ ಅವನ ಆತ್ಮಸಖನಾಗಿಯೇ ಹತ್ಯಾಕಾಂಡದ ಪರ ನಿಲ್ಲುವುದರಿಂದ ಯಮನೆಂದೇ ತಿಳಿಯಬಹುದು.

ಪಾಂಡವಪುತ್ರರ ಹತ್ಯೆಯಿಂದ ಸಾವಿಗೆ ಹೊಟ್ಟೆಬಿರಿಯ ಔತಣವಾಗಿದೆ. ಅದೂ ಅಜೀರ್ಣವಾಗುವಷ್ಟು. ಅಜೀರ್ಣ ಆಗದ ನೋಡು ಎಂದು ಕಾಲಪುರುಷ ಸಾವನ್ನು ಛೇಡಿಸುವುದರೊಂದಿಗೆ ಅಶ್ವತ್ಥಾಮ ನಾಟಕ ಆರಂಭವಾಗುತ್ತದೆ. ಕಾಲಪುರುಷ ಮತ್ತು ಸಾವು ಇವರಿಬ್ಬರ ನಡುವಣ ಸಂಭಾಷಣೆಯಲ್ಲಿ ಸೃಷ್ಟಿ-ನಂತರದ ಬದುಕು ಮತ್ತು ಮೃತ್ಯುವಿನ ಸುತ್ತ ಸಂವಾದವಾಗುತ್ತದೆ. ಹುಟ್ಟು, ಬದುಕು, ಸಾವು ಮೂರು ನನ್ನ ಅಧೀನದಲ್ಲಿವೆ ಎಂದು ಕಾಲಪುರುಷ ತನ್ನ ಪಾರಮ್ಯವನ್ನು (Supremacy) ಸ್ಥಾಪಿಸಲೆತ್ನಿಸಿದರೆ ಸಾವು ಹುಟ್ಟು ಬದುಕುಗಳನ್ನು ಸೋಲಿಸಿ ವಿಜೃಂಭಿಸುವ ತನ್ನದೇ ಆಖೈರುಮಾತು ಎಂದು ಸಡ್ಡು ಹೊಡೆಯುತ್ತಾನೆ. ಇದೇನೇ ಇದ್ದರೂ ಹಿಂದಿನ ರಾತ್ರಿಯಂತೂ ಸಾವಿನದೇ ಜಯಭೇರಿ. ಈ ಸಂಭಾಷಣೆಯ ಮಧ್ಯದಲ್ಲೇ ದುರ್ಯೋಧನನ ಊರುಭಂಗ, ಅಶ್ವತ್ಥಾಮನಿಗೆ ಸೇನಾಪತಿ ಪಟ್ಟ ಕಟ್ಟಿದ್ದು, ನಂತರ ಅಶ್ವತ್ಥಾಮ ಪಾಂಡವರ ಪಾಳಯದಲ್ಲಿ ನಡೆಸಿದ ಮಾರಣಹೋಮಗಳ ಪ್ರಸ್ತಾಪ ಬರುತ್ತದೆ. ಸಾವು, ಅಶ್ವತ್ಥಾಮನ ಹತ್ಯಾಕಾಂಡ ವರ್ಣಿಸಿದಾಗ ಕಾಲಪುರುಷನಿಗೆ ನಾಲ್ಕು ಬಾರಿಸಬೇಕು ಎನ್ನುವಷ್ಟು ಸಿಟ್ಟು ಬರುತ್ತದೆ. ಸಾವಿನ ಪ್ರತಾಪ ಸಾಕೆನಿಸಿ ಕಾಲಪುರುಷ ಬದುಕಿಗೆ ಆಳಲಿಕ್ಕೆ ಒಂದು ಅವಕಾಶ ಬೇಕೆನಿಸುತ್ತದೆ. ಸಾವಿಗಾದರೋ ನಾನು ಪರಮ ಚಕ್ರವರ್ತಿಯಾಗಿ ಆಳಬೇಕು ಎನ್ನುವ ಉಮೇದು. ಜೀವನ ತಾನು ಹೇಳಿದ ಹಾಗೆ ನಡೆಯಬೇಕೆಂಬುದು ಕಾಲಪುರುಷನ ನಿಯಮ. ಇದನ್ನು ಒಪ್ಪದ ಸಾವು ಪಂಥಾಹ್ವಾನ ನೀಡುವನು. ಈ ಘಟ್ಟದಲ್ಲಿ ದ್ರೌಪದಿಯ ಪ್ರವೇಶವಾಗುವುದು. ಮತ್ತೆ ಕಾಲಪುರುಷ ಮತ್ತು ಸಾವು ಪ್ರತ್ಯಕ್ಷವಾಗುವುದು ಪರಾಕಾಷ್ಠೆಗೆ ಪೂರ್ವದ ಅಶ್ವತ್ಥಾಮನ ತೊಳಲಾಟದ ಸನ್ನಿವೇಶದಲ್ಲಿ.

ದೇವರ ದ್ರೌಪದಿ, ಕುವೆಂಪು ಅವರ ರಣಚಂಡಿಯು ಆ ಬೆಂಕಿಯ ಮಗಳುಹೆಣ್ಣಿನ ರೂಪದ ಬರಸಿಡಿಲವಳು ವರ್ಣನೆಯ ಸಾಕ್ಷಾತ್ಕಾರ ಎಂದರೆ ಅತಿಶಯೋಕ್ತಿಯಾಗಲಾರದು. ಸೇವಕಿಯ ಜೊತೆಗೆ ದ್ರೌಪದಿಯ ಪ್ರವೇಶವಾಗುತ್ತದೆ. ಅವಳೀಗ ಮಹಾರಾಣಿ. ಧರ್ಮರಾಯನಿಗೆ ಪಟ್ಟಾಭಿಷೇಕ ಇನ್ನೂ ಆಗಿಲ್ಲ, ಆದರೆ ಮಹಾರಾಣಿಯ ದರ್ಪ-ದವಲತ್ತುಗಳೆಲ್ಲ ಆಗಲೇ ಮೈಮೇಲೆ ಬಂದುಬಿಟ್ಟಿದೆ. ಜೊತೆಗೆ ಒಡಲಾಳದಲ್ಲಿ ಸೇಡಿನ ಕಿಚ್ಚೂ ಸುಪ್ತವಾಗಿದ್ದದ್ದು ಈಗ ಬಹಿರಂಗ ಪ್ರಕಟವಾಗುತ್ತಿದೆ. ಸೇವಕಿ ತಾಯಿ ಎಂದಾಗ ಅವಳಿಗೆ ಜಪ್ತಿಸಿ ಮಹಾರಾಣಿ ಎಂದು ಹೇಳಿಸುತ್ತಾಳೆ. ಸೇವಕಿಯಿಂದ ಮಕ್ಕಳ ಹತ್ಯೆ ಗೊತ್ತಾಗುತ್ತದೆ. ಮಕ್ಕಳೇಕೆ ಯುದ್ಧಶಿಬಿರದಲ್ಲಿ ಮಲಗಿದ್ದರು? ಅವರ ಅಪ್ಪಂದಿರು ಏನು ಮಾಡುತ್ತಿದ್ದರು ಎನ್ನುವ ಪ್ರಶ್ನೆಗಳೊಂದಿಗೇ ಮಕ್ಕಳೊಂದಿಗೆ ತಾನು ಕಳೆದ ಕೊನೆಯ ಕ್ಷಣಗಳು ನೆನಪಾಗಿ ತಾಯಿಯ ಕರುಳು ಒಂದೆರಡು ಕ್ಷಣ ಮಿಡಿಯುತ್ತದೆ. ಈಗ ಹೇಡಿಗಳಂತೆ ರಾತ್ರಿ ಮಲಗಿದ್ದಾಗ ಕೊಲೆಯಾದದ್ದು ನೋಡಿದರೆ, ಯುದ್ಧದಲ್ಲಿ ಸತ್ತಿದ್ದರೇ ಚೆನ್ನಾಗಿತ್ತು ಅನ್ನಿಸುತ್ತದೆ. ಅಭಿಮನ್ಯುವಿನ ಕೀರ್ತಿ ಸತ್ತ ಮೇಲೂ ಬೆಳೆದಿದೆ. ಎಂದು ಸವತಿಮಾತ್ಸರ್ಯ ಕೆರಳುತ್ತದೆ. ದೂತನಿಂದ ಯುದ್ಧ ಮುಗಿದು, ಅಶ್ವತ್ಥಾಮನು ಉತ್ತರೆಯ ಗರ್ಭಕ್ಕೆ ಅಸ್ತ್ರ ಹೂಡಿದ್ದು, ಪಾರ್ಥ ಅದನ್ನು ನಿವಾರಿಸಿದ್ದು ಇತ್ಯಾದಿ ಸಂಗತಿಗಳು ತಿಳಿದು ಅಶ್ವತ್ಥಾಮನನ್ನು-

...ಅಶ್ವಪಚ? ಇಡೀ ಪಾಂಡವಸೇನೆ ಹೆದರುತ್ತಿದ್ದುದು ಅವನೊಬ್ಬನಿಗೆ ಮಾತ್ರ. ಶೂರ ಎಂದಲ್ಲ, ನೀತಿನಿಯಮಗಳಿಲ್ಲದವ, ಏನು ಮಾಡಲೂ ಹೇಸದವ ಎಂದು. ಎಳೆತನ್ನಿ, ನನ್ನೆದುರು ಎಳೆತನ್ನಿ. ಎಂದು ಮೂದಲಿಸುತ್ತಾಳೆ.

ಬೆನ್ನಟ್ಟಿ ಬಂದ ಪಾರ್ಥನ ಅಸ್ತ್ರದಿಂದ ಪಾರು ಮಾಡುವಂತೆ ಅಶ್ವತ್ಥಾಮ ಅವಳ ಮೊರೆ ಹೊಕ್ಕಾಗ ಅವನನ್ನು ಬಂಧಿಸಲು ಆಜ್ಞಾಪಿಸುತ್ತಾಳೆ. ಇಡೀ ಕುರುಸೇನೆಯಲ್ಲಿ ಒಬ್ಬನೇ ಒಬ್ಬ ಸೈನಿಕ ಉಳಿದಿಲ್ಲ, ಅದಕ್ಕೆ ನೀನು ಅಧಿಪತಿ ಎಂದು ಹಂಗಿಸುತ್ತಾಳೆ. ತನ್ನ ಮಕ್ಕಳನ್ನು ಕೊಂದವನಿಗೆ-

ಚಿಕ್ಕಂದಿನಲ್ಲಿ ನೀನೇ ಎತ್ತಿ ಆಡಿಸಿದ ಮಕ್ಕಳು. ಅವರನ್ನೇ ಕೊಂದೆ. ಎಂಥಾ ದುರುಳ ಬ್ರಾಹ್ಮಣ ನೀನು. ಇದಿಷ್ಟೂ ಸಾಲದೆಂಬಂತೆ ಉತ್ತರೆಯ ಗರ್ಭನಾಶಕ್ಕೂ ಹೊರಟದ್ದಿ. ಎಂದು ಮಾತಿನಲ್ಲೇ ಇರಿಯುತ್ತಾಳೆ.

ಅಶ್ವತ್ಥಾಮಾ, ನೀನು ಕೊಂದ ಮಕ್ಕಳ ನೆನಪು ಶರದಂತೆ ನಿರಂತರವಾಗಿ ಕಾಡುತ್ತಿರಲಿ ಎಂದು ಶಾಪ ಕೊಡುತ್ತಾಳೆ. ಅಶ್ವತ್ಥಾಮನಿಗೆ ಕೃಷ್ಣನ ಶಾಪಕ್ಕಿಂತ ಈ ಶಾಪ ಘೋರವಾಗಿ ಕಾಣಿಸುತ್ತದೆ. ಪಾಪದ ಫಲ ಅನುಭವಿಸು ಎನ್ನುತ್ತಾಳೆ ದ್ರೌಪದಿ.

ಶಾಪ ಫಲಿಸಿದಂತೆ ಬಾಣ ಹಿಡಿದ ಐದು ಮಕ್ಕಳು ಅಶ್ವತ್ಥಾಮನನ್ನು ಸುತ್ತುವರಿಯುತ್ತವೆ.

ದ್ರೌಪದಿಯ ಆಗ್ರಹ ಇಷ್ಟೇ ತುರ್ತಾಗಿ ದುರ್ಯೋಧನನತ್ತ ತಿರುಗುತ್ತದೆ. ಈಗ ಅವಳು ಮಹಾಸಾಮ್ರಾಜ್ಞಿ. ದುರ್ಯೋಧನನ ಮೇಲಿನ ಸುಪ್ತ ಕೋಪ ಭುಗಿಲೆದ್ದು ಸ್ಫೋಟಿಸಿದಂತೆ ಅವನ ಪತ್ನಿ ಭಾನುಮತಿಯನ್ನು ಕರೆಸಿಕೊಳ್ಳುತ್ತಾಳೆ. ಹಿಂಬದಿಗೆ ಕಟ್ಟಿರಿ. ಹದಿನಾಲ್ಕು ವರ್ಷಗಳ ಹಿಂದಿನ ಆ ದಿನದ ಅವಮಾನ ಹೇಗಿತ್ತೆಂದು ಸ್ವಂತ ಅನುಭವಕ್ಕೆ ಬರಲಿ. ಎಂದು ಭಾನುಮತಿಗೆ ತಾಕುತ್ತಾಳೆ. ದುರ್ಯೋಧನನ ವಸ್ತ್ರಾಪಹರಣ ಕಾಮನೆಗೆ ಪ್ರತೀಕಾರವೆಂಬಂತೆ ಭಾನುಮತಿಯನ್ನು ದಂಡಿಸುತ್ತಾಳೆ.

ದುರ್ಯೋಧನ ಅಷ್ಟೊಂದು ಕುತೂಹಲದಿಂದ ಬಟ್ಟೆ ಬಿಚ್ಚಿಸಿ ನನ್ನ ನೋಡಬೇಕು ಎಂದಾದರೆ,

ಅವನಿಗೆ ನಿನ್ನ ನೋಡಿ ಮನಸ್ಸಿಗೆ ತೃಪ್ತಿ ಆಗಿದ್ದಿರಲಾರದು ಅಲ್ಲವೆ? ...ಆಕರ್ಷಣೆ ಹುಟ್ಟಿಸುವಂಥಾ ದೇಹ ಅಲ್ಲವೋ? ...ತೊಡೆ ಮಾತ್ರ ನನ್ನದರಷ್ಟು ಆಕರ್ಷಕವಾಗಿ ಇಲ್ಲವೋ... ಎಂದು ಭಾನುಮತಿಯನ್ನು ವಿವಸ್ತ್ರಳನ್ನಾಗಿಸುವ ಪ್ರಯತ್ನದಲ್ಲಿ ದ್ರೌಪದಿಯ ಸೇಡು-ಪ್ರತೀಕಾರ-ಒಡಲಾಗ್ನಿ ಶಿಖರ ಮುಟ್ಟುತ್ತದೆ. ತನ್ನನ್ನು ವಿವಸ್ತ್ರಳನ್ನಾಗಿ ನೋಡಬಯಸಿದ ದುರ್ಯೋಧನನ ಮೇಲಿನ ಕ್ರೋಧ ಅವನ ಹೆಂಡತಿಯನ್ನು ವಿವಸ್ತ್ರಳನ್ನಾಗಿಸುವ ಹಿಂಸಾನಂದದಲ್ಲಿ ವ್ಯಕ್ತಗೊಳ್ಳುತ್ತದೆ. ದುರ್ಯೋಧನನ ಮರಣಯಾತನೆಯನ್ನು ಕೇಳಿ ಸುಖಿಸುವ ದ್ರೌಪದಿಯ ಸುಪ್ತೇಚ್ಛೆ ಅವನ ಹೆಂಡತಿಯನ್ನು ದಾಸಿಯನ್ನಾಗಿಸಿಕೊಳ್ಳುವುದರಲ್ಲಿ ಪರಮ ತೃಪ್ತಿಯನ್ನು ಬಯಸುತ್ತದೆ. ಅಹಿಂಸೆಯ ನೆವ ಒಡ್ಡಿ ಭಾನುಮತಿಯ ಸಹಗಮನದ ಅಪೇಕ್ಷೆಯನ್ನು ತಿರಸ್ಕರಿಸುತ್ತಾಳೆ. ಅಂತಿಮವಾಗಿ ಭಾನುಮತಿಯಿಂದ, ಹಸ್ತಿನಾಪುರದ ಮಹಾಸಾಮ್ರಾಜ್ಞಿ, ಪಟ್ಟಮಹಿಷಿ, ದ್ರೌಪದಿದೇವಿ ಭೋಪರಾಕ್ ಎಂದು ಹೇಳಿಸಿಕೊಳ್ಳುವುದರಲ್ಲಿ ಸಿಟ್ಟು ಸೇಡುಗಳು ಸಮಾಧಾನ ಕಾಣುತ್ತವೆ. ಆಮೇಲೆ ದ್ರೌಪದಿಗೆ ಅವಳ ಮಹಾರಾಣಿ ಪಾತ್ರ, ಭಾನುಮತಿಗೆ ಅವಳ ದಾಸಿ ಪಾತ್ರ ಎಂದು ಕಾಲಪುರುಷ ಭಾಷ್ಯ ಬರೆಯುತ್ತಾನೆ. ಭಾನುಮತಿಯ ಪಾಲಿಗಂತೂ ದ್ರೌಪದಿ ಬರಸಿಡಿಲೇ ಆಗಿಬಿಡುತ್ತಾಳೆ.

ಅಶ್ವತ್ಥಾಮನಿಗಂತೂ ದ್ರೌಪದಿಯ ಶಾಪದ ಬಿಸಿ ತತ್‌ಕ್ಷಣವೇ ತಟ್ಟುತ್ತದೆ. ಮೂರು ಸಾವಿರ ವರ್ಷಗಳ ಕಾಲ ಎಲ್ಲರಿಗೂ ದುಷ್ಟನಾಗಿ ಕಾಡುಮೇಡುಗಳಲ್ಲಿ ಅಲೆ ಎನ್ನುವುದು ಕೃಷ್ಣನ ಶಾಪವಾದರೆ, ನೀನು ಕೊಂದ ಮಕ್ಕಳ ನೆನಪು ಶರದಂತೆ ನಿನ್ನನ್ನು ಕಾಡುತ್ತಿರಲಿ. ನಿದ್ರಿಸಲು ಬಿಡದೆ, ಕೂರಲು ಬಿಡದೆ, ಉಣ್ಣಲು ಬಿಡದೆ ನಿನ್ನ ಬೆನ್ನು ಹತ್ತಿದ ಈ ಬಾಣದ ಹಾಗೆ ಪ್ರತಿಕ್ಷಣವೂ ಕಾಡುತ್ತಲೇ ಇರಲಿ ಎಂಬುದು ದ್ರೌಪದಿಯ ಶಾಪ. ಅವನಿಂದ ಹತರಾದ ಮಕ್ಕಳು ಪ್ರೇತರೂಪಿಗಳಾಗಿ ಅಶ್ವತ್ಥಾಮನನ್ನು ಕಾಡತೊಡಗುತ್ತಾರೆ. ಪಾಂಡವಪುತ್ರರು ಐವರೂ ಅವನ ಮೇಲೆರಗಿ ಮಾವಯ್ಯ, ಮಾವಯ್ಯ ಎಂದು ಬಾಲ್ಯದಲ್ಲಿ ಅವನು ಅವರನ್ನು ಬೆನ್ನ ಮೇಲೆ ಕೂರಿಸಿಕೊಂಡು ಉಪ್ಪಿನ ಮೂಟೆ ಆಟ ಆಡಿಸಿದ್ದು ಇತ್ಯಾದಿಗಳನ್ನು ನೆನಪಿಸುತ್ತವೆ. ಇಷ್ಟು ಪ್ರೀತಿ ತೋರಿಸಿದವನು ನಿದ್ದೆಲಿದ್ದವರ ಕೊಂದಿದ್ದು ನ್ಯಾಯವಾ ಎಂದು ಪ್ರಶ್ನಿಸುತ್ತವೆ. ಕೊಂದಿದ್ದೇನೆ ನಿಮ್ಮನ್ನ, ಮತ್ತೆ ಯಾಕೆ ಬಂದಿರಿ... ನನ್ನ ಹೆಗಲೇರಿ ಎಂದು ಅಶ್ವತ್ಥಾಮ ಕತ್ತಿ ಝಳಪಿಸಿದರೂ ಅವನನ್ನು ಅಕ್ಷರಶಃ ಬೆಂಬಿಡದ ಭೂತಗಳಾಗಿ ಕಾಡುತ್ತವೆ. ಮೇಳದೋಪಾದಿ ಮಾತಿನ ಅಂಬುಗಳ ಮಳೆಗರೆಯುತ್ತ, ಪಾರ್ಥನ ಶರಸಂಧಾನದಿಂದ ತನಗೇ ತಿರುಗುಬಾಣವಾದ ಅಸ್ತ್ರದಂತೆ ಅವನಿಗೆ ಚಿತ್ರಹಿಂಸೆ ಕೊಡುತ್ತವೆ. ಅವರ ಕಾಟ ತಡೆಯಲಾಗದೆ ಹೀಗೆ ಬದುಕೋದಕ್ಕಿಂತ ನಿಮ್ಮ ಜೊತೆ ಸತ್ತು ಪ್ರೇತ ಆಗಿದ್ರೇ ಹಿತವಾಗ್ತಿತ್ತು. ನಾನು ಅಮರ, ಚಿರಂಜೀವಿ ಸಾಯಬೇಕೆಂದರೂ ಸಾಯೋದಿಲ್ಲ, ಎಂದು ಹೈರಾಣಾಗುತ್ತಾನೆ. ದುರ್ಯೋಧನನ ಮನಸ್ಸಂತೋಷಕ್ಕಾಗಿ ನಿಮ್ಮನ್ನು ಕೊಂದದ್ದು... ಪ್ರತೀಕಾರದ ಹುಚ್ಚಲ್ಲಿ ಮಾಡಬಾರದ್ದು ಮಾಡಿದೆ ಎಂದು ತಪ್ಪೊಪ್ಪಿಕೊಳ್ಳುತ್ತಾನೆ. ಪಶ್ಚಾತ್ತಾಪ ಪಡುತ್ತಾನೆ. ಕ್ಷಮೆ ಕೇಳುತ್ತಾನೆ. ನನ್ನ ಪಾಡಿಗೆ ನನ್ನ ಬಿಡಿ ದಮ್ಮಯ್ಯ ಎನ್ನುವ ದೈನ್ಯಕ್ಕೆ ಅವನನ್ನು ಕುಗ್ಗಿಸಿಬಿಡುತ್ತವೆ. ಸಾಲದೆಂಬಂತೆ ಅವನ ಮೇಲೆರಗಿ ಗಾಯಮಾಡಿ ಜರ್ಝರಿತನನ್ನಾಗಿಸಿ ಬಿಡುತ್ತವೆ.

ದ್ರೌಪದಿ ಹಾಗೂ ಪ್ರೇತರೂಪಿ ಬಾಲಕರ ಛೀಮಾರಿ-ನಿಂದನೆ-ಪೀಡನೆಗಳಿಂದ ನೊಂದು-ಬೆಂದು-ಭಂಗಪಟ್ಟ ಅಶ್ವತ್ಥಾಮನ ಮನಸ್ಸು ಇವರನ್ನು ಕೊಲ್ಲದೆ ಇರಬಹುದಿತ್ತು. ನಾನು ಎತ್ತಿ ಆಡಿಸಿದ ಮಕ್ಕಳು. ನನ್ನನ್ನು ಮಾಮಾ ಎನ್ನುತ್ತಿದ್ದರು ಎಂದು ಹಲುಬಲಾರಂಭಿಸುತ್ತದೆ. ಹೀಗೆ ಅಶ್ವತ್ಥಾಮ ಮನಃಕ್ಲೇಶದಿಂದ ಘಾಸಿಗೊಂಡಾಗ ಅವನ ನೆರವಿಗೆ ಬರುವುದು ಆತ್ಮಸಖನಾದ

ಸಾವು. ಮನಸಾಕ್ಷಿಗೆ ಸೋಲಬೇಡ ಎಂದು ಸಾವು ಎಚ್ಚರಿಸುತ್ತದೆ. ಎದೆಗುಂದಿದ್ದ ಅಶ್ವತ್ಥಾಮ ಮನಸಾಕ್ಷಿಗೆ ಹೆದರೋದಿಲ್ಲ, ತೊಲಗಿ, ತೊಲಗಿ ಎಂದು ಪ್ರೇತಗಳನ್ನು ಹಿಮ್ಮೆಟ್ಟಿಸುತ್ತಾನೆ. ಮಕ್ಕಳನ್ನು ರಮಿಸಬೇಡ. ಅವರಿಂದ ಕೆಲಸ ಮಾಡಿಸು. ಬೇಗ ಶ್ರೀಮಂತನಾಗುತ್ತಿ ಮಕ್ಕಳನ್ನು ನನ್ನ ಸಾಮ್ರಾಜ್ಯಕ್ಕೂ ಕಳಿಸುತ್ತಿರು ಎಂದು ಸಾವು ಕಿವಿಮಾತು ಹೇಳುತ್ತದೆ. ಸಾವು ಹೀಗಂದದ್ದೇ ತಡ ಅಶ್ವತ್ಥಾಮನಲ್ಲಿನ ಮರಣಾಂತಿಕ ಪ್ರವೃತ್ತಿಗೆ ಅತಿಮಾನುಷ ಬಲ ಬಂದುಬಿಡುತ್ತದೆ. ಸೂಪರ್ ಮ್ಯಾನ್ ಆಗಿ ವಿಜೃಂಭಿಸುತ್ತಾನೆ. ರಕ್ತಬೀಜಾಸುರರಂತೆ ಅನೇಕ ಅಶ್ವತ್ಥಾಮರುಗಳು ಚಾಟಿ, ಗನ್ನುಗಳ ಸಮೇತ ಪ್ರತ್ಯಕ್ಷರಾಗುವುದರೊಂದಿಗೆ ನಾಟಕದ ವರ್ತಮಾನದ ಹೊಳಹು ಸ್ಪಷ್ಟವಾಗುತ್ತದೆ.

ಅಶ್ವತ್ಥಾಮನು ನಾನಿನ್ನು ಸುಖಿ ಎಂದು ಸಂಭ್ರಮಿಸಿದರೆ, ಸಾವು ಪಂಥಾಹ್ವಾನವಾಯಿತು ಎಂದು ಕಾಲಪುರುಷನನ್ನು ಹಂಗಿಸುತ್ತಾನೆ. ಇದರೊಂದಿಗೆ ಗೆದ್ದದ್ದು ಯಾರು? ಬದುಕೇ? ಸಾವೇ? ಎನ್ನುವ ಪ್ರಶ್ನೆಯೂ ಉದ್ಭವಿಸುತ್ತದೆ. ಈ ಪಾಶದ ಒಡಲಿನಿಂದಲೇ ನಾನು ಮತ್ತೆ ಸೃಷ್ಟಿಸುತ್ತೇನೆ. ಮಕ್ಕಳ ನರಳುವಿಕೆಯಿಂದ, ದುಃಖದಿಂದ ಬೆಚ್ಚಿಬೀಳುವವರು ಇರುತ್ತಾರೆ ಎನ್ನುವ ಕಾಲಪುರುಷನ ಮಾತುಗಳಲ್ಲಿ ಭವಿಷ್ಯದ ಬಗ್ಗೆ ಸಾಂತ್ವನವಿದೆಯಾದರೂ ನಾಟಕಕಾರರಿಗೆ ಅಂಥ ಭರವಸೆ ಇದ್ದಂತಿಲ್ಲ.

ಮುಂದೆ ಸಾಹಿತ್ಯ ಮೌನಿಯಾಗುತ್ತದೆ. ಮುಂದಿನದೆಲ್ಲ ಕ್ರಿಯೆ. ದೃಶ್ಯರೂಪಕಗಳು ಸಾಲುಗಟ್ಟಿ ಬರುತ್ತವೆ. ಯುದ್ಧ ಶಸ್ತ್ರಾಸ್ತ್ರಗಳ ಬಾಂಬು ಸ್ಫೋಟದ ಶಬ್ದ, ಗುಡುಗು, ಮಿಂಚು, ಸಿಡಿಲಿನ ಶಬ್ದ. ಜೊತೆಗೆ ಹಾಡುಪಾಡು ಸುಗ್ಗಿಯ ದೃಶ್ಯಗಳು. ಸಾವು, ಅಶ್ವತ್ಥಾಮನ ಅಟ್ಟಹಾಸ ಈ ದೃಶ್ಯ, ಹಾಡು ಕುಣಿತಗಳ ಜೊತೆ ಮಿಳಿತವಾಗುತ್ತದೆ. ಇದೆಲ್ಲವೂ ಪಠ್ಯಮುಖೇನ. ಮಾತುಗಳಲ್ಲಿ ನಡೆಯುವುದಿಲ್ಲ. ಇಲ್ಲಿ ಪಠ್ಯವಿಲ್ಲ. ಈ ಕ್ರಿಯೆಗಳನ್ನು ನಾಟಕಕಾರರು ಕಂಸಗಳಲ್ಲಿ ಸೂಚಿಸಿ, ಮುಂದಿನ ಕ್ರಿಯೆಗಳನ್ನೆಲ್ಲ ನಿರ್ದೇಶಕನಿಗೆ ಬಿಟ್ಟು ವಿಶ್ರಾಂತರಾಗುತ್ತಾರೆ. ಬಹುಶಃ The play starts here. ಸೃಜನಶೀಲ ನಿರ್ದೇಶಕನಿಗೆ ಸುಗ್ಗಿ, ಸವಾಲು...

ರಾಮಚಂದ್ರ ದೇವರ ಈ ನಾಟಕದ ವಿಭಿನ್ನತೆ-ವೈಶಿಷ್ಟ್ಯಗಳಿರುವುದು, ಅಸ್ಮಿತೆ ಇರುವುದು ಅವರು ಮಾಡಿಕೊಂಡಿರುವ ಮಾರ್ಪಾಟುಗಳಲ್ಲಿ ಹಾಗೂ ಅವರ ರೂಪಕನಿಷ್ಠೆಯಲ್ಲಿ. ಇಲ್ಲಿ ಸಂಭವಾಮಿ ಯುಗೇ ಯುಗೆ ಕೃಷ್ಣನಿಗೆ ಸ್ಥಾನವಿಲ್ಲ, ಯುಧಿಷ್ಠಿರನಾದಿಯಾಗಿ ಪಾಂಡವರಿಲ್ಲ, ಕೃಷ್ಣನ ಶಾಪದ ಮಾತಂತೂ ಇಲ್ಲವೇ ಇಲ್ಲ. ಇಲ್ಲಿಯ ಅಶ್ವತ್ಥಾಮನೂ ಮೃತ್ಯುರೂಪಿಯಾಗಿ ಚಿರಂಜೀವಿ. ಅಶ್ವತ್ಥಾಮ ವಿಜೃಂಭಿಸುವ ಮೃತ್ಯುರೂಪಿಯಾದರೆ ದ್ರೌಪದಿ ರಾಜಮಹಾರಾಜರುಗಳ ಕಾಲದ ನಿರಂಕುಶತ್ವದಿಂದ ಇವತ್ತಿನವರೆಗಿನ ಸರ್ವಾಧಿಕಾರ-ನಿರಂಕುಶಗಿರಿಗಳ ಪ್ರತಿರೂಪವೇ ಆಗಿದ್ದಾಳೆ. ಪ್ರೇತರೂಪಿ ಬಾಲಕರು ಬಲಿಪಶುಗಳಾದ ಭಾವಿ ಜನಾಂಗದ ಪ್ರತೀಕಗಳಂತೇ ಕಾಣುತ್ತಾರೆ. ಇಲ್ಲಿ ಯುದ್ಧವಿದೆ, ಸಾವು ನೋವು ಇದೆ. ಯುದ್ಧದಿಂದ ಹುಚ್ಚರಾದವರಿದ್ದಾರೆ. ಸೇವಕಿ, ಭಾನುಮತಿಯಂಥ ಅಸಹಾಯಕರಿದ್ದಾರೆ. ಇವತ್ತಿನ ಆತಂಕ-ಆಪತ್ತುಗಳೆಲ್ಲವೂ ಇಲ್ಲಿ ಮಡುಗಟ್ಟಿದೆ. ಕೃಷ್ಣನೂ ಇಲ್ಲ ಅವನಂಥ ಆಪತ್ಬಾಂಧವನೂ ಇಲ್ಲ. ಇಲ್ಲಿನ ಪ್ರತಿಯೊಂದು ಪಾತ್ರವೂ ೨೦-೨೧ನೇ ಶತಮಾನದ ಯುದ್ಧಭೀತಿ, ಸರ್ವಾಧಿಕಾರ, ಅಮಾನುಷ ಭೇದ-ಭಾವಗಳಿಂದ ಜರ್ಝರಿತನಾಗಿರುವ ಮಾನವನ ಆತಂಕ, ತಲ್ಲಣಗಳ ರೂಪವೇ ಆಗಿದೆ. ಹೀಗೆ ವರ್ತಮಾನ ಕಾಲದ ಆಯಾಮಕ್ಕೆ ಚಾಚಿಕೊಳ್ಳುವ ನಾಟಕದ ಭಾಷೆಯಂತೂ ನಮ್ಮ ನೋವು-ಸಂಕಟ-ಆಕ್ರೋಶಗಳಿಗೆ ದನಿಯಾಗಿದೆ. ಸ್ಫಟಿಕದಂತೆ ಪಾರದರ್ಶಕವಾದ ಭಾಷೆ ಕಾಲಪುರುಷನ ಮಾತುಗಳಲ್ಲಿನ ಪ್ರಾಂಜಲತೆ, ಸಾವು ಆಡುವ ಪ್ರಚೋದನೆ-ಪ್ರಲೋಭನೆ, ದ್ರೌಪದಿಯ ಅಧಿಕಾರ ಮದದ

ಭಾಷೆ (ಸೇವಕಿಯೊಂದಿಗೆ, ಅಶ್ವತ್ಥಾಮನೊಂದಿಗೆ, ಭಾನುಮತಿಯೊಂದಿಗೆ ಆಡುವ ನಿಂದನೆಯ ಮಾತುಗಳು) ಗಮನಿಸಿ.

ಹೀಗೆ ವರ್ತಮಾನಕ್ಕೆ ರೂಪಕವಾಗುವುದರಲ್ಲೇ ರಾಮಚಂದ್ರ ದೇವರ ಅಶ್ವತ್ಥಾಮ ನಾಟಕದ ಯಶಸ್ಸಿದೆ.

೪

ಹುಲಿಯ ಕಥೆ-ಎರಡು ತಲೆಮಾರುಗಳ ನಡುವಣ ಅಂತರವನ್ನು ಜೀವನ ಮೌಲ್ಯಗಳ ಸಂಘರ್ಷವನ್ನೂ ಚಿತ್ರಿಸುವ ಸಾಂಕೇತಿಕ ನಾಟಕ. ಇಲ್ಲೊಂದು ಆರಂಭ ಬಿಂದುವಾಗಿ ಹುಲಿಯ ಕಥೆ ಇದೆ. ಅದು ಗೋಪಾಲಕೃಷ್ಣ ಗೋಖಲೆಯವರು ಹೇಳಿದ ಕಥೆ. ಅಪ್ಪ-ಅಮ್ಮ-ಮಗ ಮೂವರೇ ಇದ್ದಾಗ ಒಂದು ಹುಲಿ ಬರ್ತದೆ. ಅಪ್ಪನ ಕಾಪಾಡಿದರೆ ಅಮ್ಮನ್ನ ತಿಂತದೆ. ಅಮ್ಮನ್ನ ಕಾಪಾಡಿದರೆ ಅಪ್ಪನ್ನ ತಿಂತದೆ. ಮಗ ಏನ್ ಮಾಡಬೇಕು? ಗೋಖಲೆ ಹೇಳ್ತಾರೆ, ಹುಲಿ ಬಾಯಿಗೆ ಮಗ ತನ್ನನ್ನು ಒಡ್ಡಿ ಅಪ್ಪ-ಅಮ್ಮನನ್ನು ರಕ್ಷಿಸಬೇಕು. ಗಾಂಧೀಜಿ ಹೇಳ್ತಾರೆ ಅದು ಆದರ್ಶ ಜೀವನ ಎಂದು. ಶ್ರವಣ ಹಾಗೆ ಬದುಕುತ್ತಿದ್ದ ಎನ್ನುವ ದೃಷ್ಟಾಂತವಿದೆ. ಅಪ್ಪ-ಅಮ್ಮ ಎಂದರೆ ಕೇವಲ ಜನ್ಮ ಕೊಟ್ಟ ಮಾತಾ-ಪಿತೃಗಳ ಮಾತ್ರವಲ್ಲ, ಅವರು ನಮ್ಮ ಸಾಂಸ್ಕೃತಿಕ ಪರಂಪರೆಯ ಕೊಂಡಿ, ಪ್ರತಿನಿಧಿಗಳು ಎಂದೇ ಗೋಖಲೆ ಅವರನ್ನು ರಕ್ಷಿಸಬೇಕು ಎನ್ನುತ್ತಾರೆ. ಗಾಂಧಿ ಅದು ಆದರ್ಶ ಎನ್ನುತ್ತಾರೆ. ಹೀಗಾಗಿ ಇಲ್ಲಿ ಹುಲಿಯ ಕಥೆಯೂ ಒಂದು ರೂಪಕಥೆ.

ಅಪ್ಪ-ಅಮ್ಮನಿಗಾಗಿ ಮಗನೇಕೆ ಸಾಯಬೇಕು? ಹಳತಿನ ಭಾರದಲ್ಲೇಕೆ ಕುಗ್ಗಬೇಕು? ಎಂದು ಹರಿಲಾಲ ಪ್ರಶ್ನಿಸುವದರೊಂದಿಗೇ ಪರಂಪರೆ, ಆದರ್ಶ ಮತ್ತು ಆಧುನಿಕತೆಗಳ ನಡುವೆ ಸಂಘರ್ಷ ಶುರುವಾಗುತ್ತದೆ. ಹಳತಿನ ಭಾರವೆಂದರೆ ಪರಂಪರೆಯ ಭಾರವೆ. ಇದಕ್ಕೆ ಪೂರ್ವಭಾವಿಯಾಗಿ ಹರಿಲಾಲನಿಂದ ಗಾಂಧಿಯ ಒಂದು ಸಣ್ಣ ವಿಚಾರಣೆ ನಡೆಯುತ್ತದೆ. ಅದು ತಂದೆಯಾಗಿ ಗಾಂಧಿಯವರು ಮಗನ ಹಿತ ಕಾಪಾಡಲಿಲ್ಲ ಎನ್ನುವುದಕ್ಕೆ ಸಂಬಂಧಿಸಿದ್ದು. ಲೋಕದ ಕಣ್ಣಲ್ಲಿ ತಮ್ಮ ನೈತಿಕ ಶುದ್ಧತೆ ಕಾಪಾಡಿಕೊಳ್ಳಲು ಹಾಗೆ ಮಾಡಬೇಕಾಯಿತೆಂದು ಸಮಜಾಯಿಷಿ ನೀಡುವ ಗಾಂಧಿ, 'ಐ ಪ್ಲೀಡ್ ಗಿಲ್ಟಿ' ಎಂದು ಒಪ್ಪಿಕೊಳ್ಳುತ್ತಾರೆ. ತಾವು ಶುದ್ಧವಾಗಿರಬೇಕೆಂಬ ಕಾರಣದಿಂದಲೇ, ಹರಿಲಾಲನ ವ್ಯವಹಾರಗಳಿಗೂ ತಮಗೂ ಸಂಬಂಧವಿಲ್ಲವೆಂದು ಬಹಿರಂಗ ಹೇಳಿಕೆ ನೀಡಿರುತ್ತಾರೆ. ಸಾರ್ವಜನಿಕ ವಿಷಯದಲ್ಲಿ ನಾನು ಶುದ್ಧವಾಗಿರಬೇಕಿದೆ. ನಿನ್ನ ಅಪರಾಧಕ್ಕೆ ನಾನು ಪಾಲುದಾರನಾಗಲಾರೆ. ಎಂದು ಗಾಂಧಿ ಹೇಳಿದಾಗ ನಿಮ್ಮ ಅಪರಾಧಗಳಿಗೆ ನಾನು ಪಾಲುದಾರನಾಗಿರಬೇಕೆ? ಎಂದು ಪ್ರಶ್ನಿಸುವ ಹರಿಲಾಲ ಹುಲಿಯ ಕಥೆ ಹೇಳುತ್ತಾನೆ. ಇಲ್ಲಿಂದ ಮುಂದಕ್ಕೆ ಘರ್ಷಣೆಯ ಕೇಂದ್ರದ ವ್ಯಾಪ್ತಿ ವಿಸ್ತಾರಗೊಳ್ಳುತ್ತದೆ. ಗಾಂಧಿಗೆ ಶ್ರೀರಾಮ ಆದರ್ಶ, ರಾಮರಾಜ್ಯ ಆದರ್ಶ. ಹರಿಲಾಲ ಹೇರಾಮ್ ಎನ್ನುವ ನಾಟಕದ ಪ್ರದರ್ಶನಕ್ಕೆ ಗಾಂಧಿಯನ್ನು ಆಮಂತ್ರಿಸಿ ರಾಮನ ಬದುಕಿನ ಮುಖ್ಯ ಘಟನೆಗಳನ್ನು ನಾಟಕದಲ್ಲಿ ನಿರೂಪಿಸುವ ಮೂಲಕ ಅವರ ಆದರ್ಶವನ್ನೂ, ನೈತಿಕತೆ, ಪರಿಶುದ್ಧತೆಗಳನ್ನೂ ನಿಕಶಕ್ಕೊಡ್ಡುತ್ತಾನೆ. ಈ ನಿಕಶನದಲ್ಲಿ ಶ್ರೀರಾಮನ ವ್ಯಕ್ತಿತ್ವದ ಇನ್ನೊಂದು ಮುಖ ಅನಾವರಣಗೊಳ್ಳುತ್ತದೆ. ನಾರದರು ವರ್ಣಿಸಿದ ಸದ್ಗುಣ-ಸಂಪನ್ನ, ಸತ್ಯವಂತ, ಜಿತೇಂದ್ರಿಯ, ಮಹಾ ವೀರ ಇತ್ಯಾದಿ ವರ್ಣನೆಯ ರಾಮ ಇವನಲ್ಲ. ಸೀತೆಯೇ ಈ ಇನ್ನೊಂದು ಮುಖವನ್ನು ಅನಾವರಣಗೊಳಿಸುತ್ತಾಳೆ. ರಾಮ ತನ್ನ ಶೀಲ ಶಂಕಿಸಿದ್ದು, ಅಗಸನ ಆಪಾದನೆಯನ್ನು ನೆಪ ಮಾಡಿಕೊಂಡು ಕಾಡಿಗಟ್ಟಿದ್ದು, ವಾಲ್ಮೀಕಿ ಆಶ್ರಮದಲ್ಲಿ ಲವ-ಕುಶರು ಬೆಳೆದು ರಾಮಾಯಣ ಹಾಡಲು

ಅಯೋಧ್ಯೆಗೆ ಹೋದದ್ದು ಈ ಪ್ರಕ್ರಿಯೆಯಲ್ಲಿ ರಾಮನ ಮುಖವಾಡಗಳೆಲ್ಲ ಕಳಚಿ ಬೀಳುತ್ತದೆ. ವಾಲ್ಮೀಕಿ ಮುನಿಗಳೂ ರಾಮನ ಬಗ್ಗೆ ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲ, ಮನುಷ್ಯ ಸಂಬಂಧ ಬೆಸೆಯುವ ಶಕ್ತಿ ಇರುವುದು ಯಜ್ಞಕ್ಕಲ್ಲ, ಕಾವ್ಯಕ್ಕೆ. ಎಂದು ತಮ್ಮ ಜೀವನದೃಷ್ಟಿಯನ್ನೂ ಬದಲಿಸಿಕೊಳ್ಳುತ್ತಾರೆ. ಆದರೆ ಕಾವ್ಯವೂ ಸೋತರೆ? ಬೇರೆ ಬೇರೆ ಆಗುವುದೇ ಮನುಷ್ಯನ ಪಾಡು ಎಂದು ಕ್ರೌಂಚದ ವಿರಹವನ್ನು ದಾಖಲಿಸಿ ಕಾವ್ಯ ಸುಮ್ಮನಾಗಬೇಕಾಗುತ್ತದೆ. ಲವ-ಕುಶರಿಂದ ವಾಲ್ಮೀಕಿಗಳ ರಾಮಾಯಣ ಕೇಳಿದ ರಾಮ, ಸೀತೆಯನ್ನು ಕಳಂಕಿತೆಯಾದರೂ ಸ್ವೀಕರಿಸಲು ಸಿದ್ಧನಾಗುವುದು ರಾಜಪ್ರತಿಷ್ಠೆಗಾಗಿ, ನಾಡಿನ ಒಳಿತಿಗಾಗಿ. ಇಂಥ ರಾಮನನ್ನು ಧಿಕ್ಕರಿಸಿ ಸೀತೆ, ಅಪರಾಧಿ ನಾನಲ್ಲ ನೀನು ಎಂದು ಘೋಷಿಸಿ ತನಗಾಗಿ ಬಾಯ್ದೆರೆದು ನಿಂತಿರುವ ಶೂದಕದತ್ತ ಬಿರುಗಾಳಿಯಂತೆ ಧಾವಿಸುತ್ತಾಳೆ. ಹೋಗುವ ಮುನ್ನ,

> ನಿನ್ನ ಎದುರು ಹೋರಾಡುವ ದೈತ್ಯ ಶಕ್ತಿ ನನ್ನಲ್ಲಿ
> ಇಲ್ಲದಿರಬಹುದು ಆದರೆ ನೀನು ನಿರಂತರವಾಗಿ
> ಪಶ್ಚಾತ್ತಾಪದಲ್ಲಿ ಸುಟ್ಟುಹೋಗುವಂತೆ ಮಾತ್ರ ಮಾಡಬಲ್ಲೆ
> ಸುಟ್ಟು ನೀನು ಶುದ್ಧನಾಗುವುದಿಲ್ಲ ರಾಮ ಕರಕಲಾಗುತ್ತಿ

ಎಂದು ರಾಮನಿಗೆ ತನ್ನ ಅಪರಾಧಗಳಿಂದ ಮುಕ್ತಿ ಇಲ್ಲ ಎನ್ನುವ ಭರತವಾಕ್ಯ ನುಡಿಯುತ್ತಾಳೆ. ರಾಮನಿಗೆ ರಾಜಕಾರ್ಯ ಕಾದಿದೆ. ಪ್ರಜಾಪಾಲನೆ ಮಾಡಬೇಕು. ರಘುವಂಶ ಬೆಳೆಸಬೇಕು. ಪುತ್ರರೊಂದಿಗೆ ಪುರಪ್ರವೇಶಕ್ಕೆ, ಲೋಕಾಚರಣೆಗೆ ಆಜ್ಞೆ ಮಾಡುತ್ತಾನೆ.

ನಾಟಕ ಮುಗಿಯುತ್ತದೆ. ಸೀತೆ ಹಠಮಾರಿ. ಅವಳು ತನಗಿಂದ ದೊಡ್ಡದಕ್ಕೆ ತನ್ನನ್ನು ಅರ್ಪಿಸಿಕೊಳ್ಳಬೇಕಿತ್ತು ಎನ್ನುವುದು ಗಾಂಧೀಜಿ ಪ್ರತಿಕ್ರಿಯೆ. ಅವಳಿಗೆ ವೈಯಕ್ತಿಕ ಜೀವನವಿಲ್ಲವೆ? ರಾಮನ ನಾಡಿಗಲ್ಲ, ತನ್ನ ಸಂಸಾರಕ್ಕೆ ಮೊದಲ ಪ್ರಾಮುಖ್ಯತೆ ನೀಡಬೇಕಿತ್ತು ಎನ್ನವುದು ಹರಿಲಾಲನ ಪ್ರತಿಕ್ರಿಯೆ. ಸಮಾಜ ಮತ್ತು ವ್ಯಕ್ತಿ ಪರಸ್ಪರ ಸಾಮರಸ್ಯದಲ್ಲಿ ಬೆಳೆಯುತ್ತಾರೆ. ಎನ್ನುವ ಸಮಾಧಾನ ಹೇಳಿ ಗಾಂಧಿ ನಿರ್ಗಮಿಸುತ್ತಾರೆ. ಅಪರಾಧಿ ಯಾರು ಎನ್ನುವ ಪ್ರಶ್ನೆ ಹಾಗೆಯೇ ಉಳಿದುಕೊಳ್ಳುತ್ತದೆ. ನ್ಯಾಯ-ಶಿಕ್ಷೆಗಳ ಸಂಬಂಧ ಸಂಕೀರ್ಣವಾದದ್ದು ಎನ್ನುತ್ತಾನೆ ಹರಿಲಾಲ.

> ಯಾರು ಅಪರಾಧಿ, ಯಾರು ನಿರಪರಾಧಿ, ಯಾರು ಶಿಕ್ಷೆಗೆ ಅರ್ಹ
> ಯಾರು ಶಿಕ್ಷಿಸಲು ಅರ್ಹ? ಕತ್ತಲೆಗೆ ಎಷ್ಟು ಮುಖ ಅಷ್ಟೇ
> ಮುಖ ಸತ್ಯಕ್ಕೆ ಸಹ. ಸತ್ಯ ಕಾಣಿಸಿದ್ದು ಎಷ್ಟೋ ಕಾಣಿಸದೇ
> ಕತ್ತಲಲ್ಲಿ ಉಳಿಸಿದ್ದೂ ಅಷ್ಟೇ ವಿಸ್ತಾರವಾಗಿರುತ್ತದೆ.

ಲೇಖಕರ ಈ ಕಷ್ಟ ಪುರಾಣಗಳ ಹಿಂದಿನ ಸತ್ಯ ಹುಡುಕುವುದಕ್ಕಷ್ಟೇ ಸೀಮಿತವಾಗಿಲ್ಲ. ವರ್ತಮಾನ ಗಾಂಧಿ-ಹರಿಲಾಲರ ನಡತೆ-ವರ್ತನೆಗಳ ಹಿಂದಿನ ಸತ್ಯ ತಿಳಿಯುವುದರಲ್ಲಿ ಇದೇ ಕಷ್ಟ ಎದುರಾಗುತ್ತದೆ. ಗಾಂಧಿಯದು ತಪ್ಪೆ, ಹರಿಲಾಲನದೂ ತಪ್ಪೆ ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ.

ಅಪ್ಪ-ಅಮ್ಮನನ್ನು ಉಳಿಸಲಿಕ್ಕಾಗಿ ಹುಲಿಯ ಬಾಯಿಗೆ ಬೀಳಲು ತಯಾರಿಲ್ಲದ ಹರಿಲಾಲ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುತ್ತಾನೆ. ಮುಂದೆ ಗೆಲ್ಲುವವ ಮೋಹನ್‌ದಾಸ್ ಕರಮ್ ಚಂದ್ ಗಾಂಧಿ ಅಲ್ಲ, ಲೇಖಕ. ನಾನು ಹರಿಲಾಲ್ ಮೋಹನ್‌ದಾಸ್ ಗಾಂಧಿ. ಎಂದು ಕಾಲಜ್ಞಾನ

ನುಡಿದು, ಸೀತೆಯ ಪಾತ್ರಧಾರಿ ಮಹಿಳೆಯೊಂದಿಗೆ ಶರಾಬ್ ಪೀಯಿಯೆ, ಟ್ವಿಸ್ಟ್ ಕೀಜಿಯೆ ಎಂದು ನರ್ತಿಸಲು ತೊಡಗಿದಂತೆ ಹುಲಿಯ ಕಥೆ ನಾಟಕ ಮುಕ್ತಾಯವಾಗುತ್ತದೆ. ಭೋಗದಲ್ಲಿ ಎಲ್ಲ ನರ್ತಿಸತೊಡಗಿದಾಗ ಹಿನ್ನಲೆಯಲ್ಲಿ ವೈಷ್ಣವ ಜನತೋ ತೇನೇ ಕಹಿಯೇ ಹಾಡು ಭಜನೆ ಕೇಳಿಬರುತ್ತೆ. ವೈಷ್ಣವ ಜನತೋದೊಂದಿಗೆ ಹರಿಲಾಲನ ಹಾಡೂ ಮಿಳಿತವಾಗುತ್ತದೆ ಎಂದು ನಾಟಕಕಾರರು ಸೂಚಿಸುತ್ತಾರೆ. ಇದು ವ್ಯಂಗ್ಯವೋ, ದುರಂತವೋ ಇವತ್ತಿನ ಕಾಲಧರ್ಮದ ಮಾರ್ಮಿಕ ಮಾತು ಎನ್ನುವುದರಲ್ಲಿ ಸಂಶಯವಿಲ್ಲ. ಮೌಲ್ಯಗಳು, ಆದರ್ಶಗಳನ್ನು ನಟಿಸುತ್ತ, ಭೋಗವನ್ನು ಆಚರಿಸುತ್ತಿರುವ ಇವತ್ತಿನ ಮನೋಭಾವವನ್ನು ಮಾರ್ಮಿಕವಾಗಿ ಚಿತ್ರಿಸುವ ಭರತವಾಕ್ಯ ಇದಾಗಿದೆ.

೫

ದಂಗೆ-ಪಾಶ್ಚಾತ್ಯ ಅಸಂಗತ (Absurd) ಹಾಗೂ ಸಂದಿಗ್ಧ (Suspense) ನಾಟಕಗಳನ್ನು ನೆನಪಿಗೆ ತರುವಂಥ ಕೃತಿ. ಇದರಲ್ಲಿ ಕ್ರಾಂತಿ ಅಂದರೆ ಬದಲಾಯಿಸುವ-ಮನಃಪರಿವರ್ತನೆ ಮಾಡುವ, ವ್ಯವಸ್ಥೆ ಬುಡಮೇಲಾಗಿಸುವ ಕಳಕಳಿ ಇದೆ. ಅಸಂಗತವೆನ್ನಿಸಬಹುದಾದ ಘಟನೆಗಳಿವೆ ಹಾಗೂ ನಿಗೂಢ ಎನ್ನಿಸುವ ಸಂದಿಗ್ಧತೆ ಇದೆ. ಈ ನಾಟಕ ರಾಮಚಂದ್ರ ದೇವ ಅವರ ದಂಗೆಯ ಪ್ರಕರಣ ಕಥೆಯ ಮುಂದುವರಿದ ಭಾಗದಂತೆ ತೋರುತ್ತದೆ. ದಂಗೆಯ ಪ್ರಕರಣದಲ್ಲಿ ದೇವರು ಇತ್ಯಾದಿ ನಂಬಿಕೆಗಳಲ್ಲಿ ಜಡ್ಡುಗಟ್ಟಿ ಸೃಜನಾತ್ಮಕತೆಯನ್ನು ಕಳೆದುಕೊಂಡ ಸಮಾಜದಲ್ಲಿ ಕ್ರಾಂತಿಯುಂಟು ಮಾಡಲು ಪ್ರಯತ್ನಿಸಿ ಅಸಹಾಯಕತೆಯಿಂದ ಕೈಚೆಲ್ಲಿದ ನಾಯಕ ಈ ನಾಟಕದಲ್ಲಿ ಮತ್ತೆ ಕ್ರಿಯಾಶೀಲನಾಗುತ್ತಾನೆ. ಹೊಸ ಮಾರ್ಗವೊಂದನ್ನು ಕಂಡುಕೊಳ್ಳುತ್ತಾನೆ.

ಪ್ರಜಾಜನರಲ್ಲಿ ಸೋಷಿಯಲ್ ಎವೇರ್‌ನೆಸ್ ಹುಟ್ಟಿಸಿ ಇಂಡುವಿಜುವಲ್ ರೆಸ್ಪಾನ್ಸಿಬಲಿಟಿ ಹೆಚ್ಚಿಸಿ ಒಂದು ಸಫಲ ಸಮಾಜ ಕಟ್ಟಲು ಪ್ರಯತ್ನಿಸಿದ ನಾಯಕ ಗೋವಿಂದ ದೇವರಿಲ್ಲ ಎನ್ನುವ ಮೂಲಕ ಜನರ ಪರಂಪರಾನುಗತ ನಂಬಿಕೆಯನ್ನು ಅಲುಗಾಡಿಸುತ್ತಾನೆ. ಎಲ್ಲವನ್ನೂ ದೇವರ ಮೇಲೆ ಹಾಕಿ ಜಡರಾದ ಜನರಿಗೆ shock treatment ಎಂಬಂತೆ ಮುಖಮುಸುಡಿ ಇಲ್ಲದ ದೇವರ ದೇವಸ್ಥಾನಕ್ಕೆ ಬೆಂಕಿಹಚ್ಚುತ್ತಾನೆ. ದೇವಸ್ಥಾನಕ್ಕೆ ಬೆಂಕಿ ಬಿದ್ದದ್ದೂ ದೈವೇಚ್ಛೆ ಇರಬೇಕೆಂದು ಊರ ಜನ ಸುಮ್ಮನಾಗಿಬಿಡುತ್ತಾರೆ. ಈ ಪರಿಯ ಜನರನ್ನು ಜೀವಂತವನ್ನಾಗಿಸುವುದರಲ್ಲಿ ವಿಫಲನಾಗುವ ನಾಯಕ, ಕಥೆಯಲ್ಲಿ ಅಸಹಾಯಕ ಸ್ಥಿತಿಯಲ್ಲಿ ಬಿದ್ದುಕೊಂಡು ಬಿಡುತ್ತಾನೆ. ಊರು ಮೊದಲಿನ ಹಾಗೇ ಶಾಂತವಾಗಿ ಮಲಗಿ ನಿದ್ರಿಸಿ ಬಿಡುತ್ತದೆ. ನಾಟಕದಲ್ಲಿ ಈ ಕಥೆ ಒಂದು ಹೆಜ್ಜೆ ಮುಂದುವರಿಯುತ್ತದೆ. ಪುರೋಹಿತಶಾಹಿ ಗೋವಿಂದನಿಗೆ ಎದುರುಬೀಳುತ್ತದೆ. ಚಕಮಕಿ ಕಲ್ಲು ಹೊತ್ತಿಕೊಳ್ಳಬೇಕು ಎನ್ನುವ ಹೊತ್ತಿಗೆ ವ್ಯವಸ್ಥೆಯ ಪ್ರವೇಶವಾಗುತ್ತದೆ. ವ್ಯವಸ್ಥೆ ಕ್ರಾಂತಿಕಾರಿಯಾದ ಸದರಿ ಗೋವಿಂದ ಸತ್ತೇ ಹೋಗಿದ್ದಾನೆ ಎಂದು ಡಂಗುರ ಸಾರಿಸುತ್ತದೆ. ಗೋವಿಂದ ಇದನ್ನು ನಿರಾಕರಿಸುತ್ತಾನೆ. ಆದರೆ ದಾಖಲೆಗಳಲ್ಲಿ ಸತ್ತವ ಇದೇ ಗೋವಿಂದ ಎಂಬುದಕ್ಕೆ ಫೋಟೋ ಸಹಿತ ಸಕಲ ಪುರಾವೆಗಳಿರುತ್ತವೆ. ಸತ್ತ ಗೋವಿಂದ ತಾನಲ್ಲ ಎಂದು ಪರಿಪರಿಯಾಗಿ ಹೇಳಿದರೂ ಅಧಿಕಾರಿಗಳು ಒಪ್ಪುವುದಿಲ್ಲ. ವಿಮೆ ಹಣ ಹೊಡೆಯಲು ಹೂಡಿರುವ ಹುನ್ನಾರವಿದು ಎಂದು ಅಧಿಕಾರಿ ಹೇಳುತ್ತಾನೆ. ಕೊನೆಗೆ ಅವರೇ ಸೂಚಿಸುವ ಪರಿಹಾರವೆಂದರೆ,

'ನಿಮ್ಮ ಮಿಸೆಸ್ಸಿಂದ ಒಂದು ಅಫಿಡವಿಟ್ ಮಾಡಿಸಿ-
ನಮ್ಮ ಯಜಮಾನರು ಆರೋಗ್ಯವಾಗಿ, ಜೀವಂತವಾಗಿ

ಇದ್ದಾರೆ. ಅವರು ತೀರಿಕೊಂಡಿದ್ದಾರೆ ಅನ್ನುವುದು
ಸುಳ್ಳು ಅಂತ... ನಿಮ್ಮ ಮಿಸೆಸ್ ಮೇಲಧಿಕಾರಿಗಳ
ಹತ್ತಿರ ಹೋಗಿ ನನ್ನನ್ನು ವಿಧವೆ ಮಾಡಬೇಡಿ ಅಂತ
ಒಂದು ಸಲ ಅತ್ತು ಗೋಳಾಡಿ ಬರ್ಲಿ. ಅದರ
ಎಫೆಕ್ಟೇ ಬೇರೆ ಇರ್ತದೆ...'

ಆದರೆ ಈ ವೇಳೆಗಾಗಲೇ ಗೋವಿಂದ ಸತ್ತ ಎಂದು ಅವನ ಹೆಂಡತಿ ಅಣ್ಣ ಆಸ್ತಿ ಲಪಟಾಯಿಸಲು ಹೊಂಚು ಹಾಕುತ್ತಾನೆ. ಟೆಕ್ನಿಕಲ್ ಪ್ರಾಬ್ಲಮ್ ನೆಪ ಎತ್ತಿ, ಸತ್ತ ವ್ಯಕ್ತಿಯ ಬ್ಯಾಂಕ್ ಇತ್ಯಾದಿ ವ್ಯವಹಾರಗಳನ್ನೆಲ್ಲ ಯಾರೂ ಒಪ್ಪಿಕೊಳ್ಳುವುದಿಲ್ಲ. ತಂಗಿ ಹೆಸ್ರಿಗೆ ಆಸ್ತಿ ಮಾಡಿಬಿಡಿ ಎಂದು ಒತ್ತಾಯಿಸುತ್ತಾನೆ. ಆದರೆ ಹೆಂಡತಿ ಹೆಸರಿಗೆ ಆಸ್ತಿ ಬರೆದರೆ ತಾನು ಸತ್ತಿದೀನಿ ಎಂಬುದು ದೃಢಪಟ್ಟಂತೆಯೇ ಎಂದು ಕ್ರಾಂತಿಕಾರಿ ಗೋವಿಂದನಿಗೆ ಹೊಳೆಯದೇ ಇಲ್ಲ. ಭಾವ-ಭಾವ ಮೈದುನರಿಗೆ ಈ ವಿಷಯದಲ್ಲಿ ಕೈ ಕೈ ಮಿಲಾಯಿಸುವ ಘಟ್ಟ ತಲುಪಿದಾಗ ಈಗ ನಾನು ನಿಮ್ಮನ್ನು ಕೊಂದರೂ ನನಗೆ ಶಿಕ್ಷೆ ಆಗೋದಿಲ್ಲ. ಯಾಕೇಂದ್ರೆ ನೀವು ಈಗಾಗಲೇ ಸತ್ತಿದೀರಿ ಅಂತ ದಾಖಲೆ ಆಗಿಬಿಟ್ಟಿದೆ. ಎನ್ನುವಂಥ ಪರಿಸ್ಥಿತಿ.

ಅಹವಾಲು ಕೇಳಿಸಿಕೊಳ್ಳುವ ಅಧಿಕಾರಿಯೊಬ್ಬ ಆಡುವ ಬ್ಯೂರೋಕ್ರೆಸಿಯ ಸಾಧ್ಯತೆಗಳು ಅನಂತ ಎನ್ನುವ ಮಾತು ಗೋವಿಂದನ ಬುಡಕ್ಕೇ ಬಂದು ನಿಲ್ಲುವುದು ನಮ್ಮ ಅಧಿಕಾರಿಶಾಹಿಯ ಕುತಂತ್ರಗಳ ಮಾರ್ಮಿಕ ವ್ಯಾಖ್ಯೆಯೇ ಆಗಿದೆ. ಲಾಕಪ್ ಡೆತ್‌ನ ಪ್ರಕರಣ ಒಂದರಲ್ಲಿ ಪಾರಾಗಲು ವ್ಯವಸ್ಥೆ ಸತ್ತ ವ್ಯಕ್ತಿ ಸತ್ತೇ ಇಲ್ಲ ಎಂದು ಸಾಬೀತುಗೊಳಿಸಲು ಅವನ ಜಾಗದಲ್ಲಿ ಗೋವಿಂದನನ್ನು ಹಾಜರುಪಡಿಸುವ ಸನ್ನಾಹ ನಡೆಸುತ್ತದೆ. ಸತ್ತ ಗೋವಿಂದನನ್ನು ಬದುಕಿಸಿದಂತೆಯೂ ಆಯಿತು ತಾನು ಪಾರಾದಂತೆಯೂ ಆಯಿತು ಎನ್ನುವುದು ವ್ಯವಸ್ಥೆಯ ಲೆಕ್ಕಾಚಾರ. ಲಾಕಪ್ ಡೆತ್‌ನಲ್ಲಿ ಸತ್ತ ವ್ಯಕ್ತಿಯ ಕಡೆಯವರು ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿ ವಜಾ ಮಾಡಲು ಸಕಲ ಸಿದ್ಧತೆಗಳೂ ಆಗಿವೆ. ಗೋವಿಂದ ಒಪ್ಪಬೇಕಷ್ಟೆ. ಒಪ್ಪಿದಲ್ಲಿ ಸತ್ತ ಎನ್ನಲಾದ ಗೋವಿಂದನಿಗೆ ಹೊಸ ಜನ್ಮ ಸಿಗ್ತದೆ. ಅವನ ಹೆಸರಲ್ಲಿ ನೀವು ಬದುಕ್ತೀರಿ ಎಂಥ ಅಸಂಗತ!

ಹಲ್ಕಟ್ ಸುವ್ವರುಗಳು. ನನ್ನ ಕೊಂದರೆ ಏನೂ ಆಗೋದಿಲ್ಲ ಅಂತಾರೆ. ನಾನು ಇವನ್ನ ಕೊಂದರೆ ಏನೂ ಆಗೋದಿಲ್ಲ. ಹೇಗೂ ನಾನು ಬದುಕಿದ್ದಕ್ಕೆ ದಾಖಲೆ ಇಲ್ವಲ್ಲಾ?

-ಎಂದು ಭಯೋತ್ಪಾದಕ ತಂಡ ಕಟ್ಟಲು ಗೋವಿಂದ ನಿರ್ಧರಿಸುವುದರೊಂದಿಗೆ ನಾಟಕ ಮುಗಿಯುತ್ತದೆ. ಗೋವಿಂದ ಸತ್ತ ಸುದ್ದಿ ಸೃಷ್ಟಿಸಿದವರು ಯಾರು ಎಂಬ ಅನುಮಾನ ಹಾಗೇ ಉಳಿಯುತ್ತದೆ. ಆದರೆ ಅವನ ಸುಳ್ಳು ಸಾವಿನ ಲಾಭ ಪಡೆದುಕೊಳ್ಳಲು ವ್ಯವಸ್ಥೆ ಹವಣಿಸುವುದಂತೂ ನಮ್ಮೊಳಗಣ ತಣ್ಣನೆಯ ಕ್ರೌರ್ಯಕ್ಕೆ ಸಾಕ್ಷಿಯಾಗಿ ನಿಂತುಬಿಡುತ್ತದೆ.

೬

ರಾಮಚಂದ್ರ ದೇವ ಅವರ ಮೇಲಿನ ಮೂರು ನಾಟಕಗಳಲ್ಲಿ ಒಂದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಮಹಾಭಾರತದ ಮೂಲದ್ದು, ಮತ್ತೊಂದು ಗಾಂಧಿ ಯುಗದ್ದು, ಮೂರನೆಯದು ಪ್ರಸ್ತುತ ನಮ್ಮನ್ನು ಕಾಡುತ್ತಿರುವ ನಕ್ಸಲೀಯ ಸಮಸ್ಯೆಗೆ

ಅಂಕುರಪ್ರಾಯವಾಗಬಹುದಾದಂಥ ಸ್ಫೋಟಕ ವಸ್ತುವನ್ನು ಒಳಗೊಂಡಿರುವಂಥಾದ್ದು. ಮೂರರಲ್ಲೂ ಸಮಾನವಾಗಿರುವ ಎಳೆಯೆಂದರೆ ವ್ಯವಸ್ಥೆ ಮತ್ತು ವ್ಯಕ್ತಿ ನಡುವಣ ಸಂಘರ್ಷ.

ಅಶ್ವತ್ಥಾಮ-ರಾಮಚಂದ್ರ ದೇವ ಸೃಷ್ಟಿಸಿರುವ ಅಶ್ವತ್ಥಾಮನ ಪಾತ್ರವಂತೂ ತುಂಬ ಸಂಕೀರ್ಣ. ಅವನು ವ್ಯವಸ್ಥೆಯೂ ಹೌದು, ವ್ಯವಸ್ಥೆ ವಿರುದ್ಧ ಸಿಡಿದು ನಿಂತವನೂ ಹೌದು. ಚಿರಂಜೀವಿಯಾದರೂ ಅವನಿಗೆ ಪಾರ್ಥನ ಅಸ್ತ್ರದ ಆತಂಕ ತಪ್ಪಿಲ್ಲ. ಅವನು ತಾನು ಎಸಗಿದ ಶಿಶುಹತ್ಯೆಯ ಪಾಪಪ್ರಜ್ಞೆಯಿಂದ ಮುಕ್ತನಲ್ಲ. ಆ ಮಕ್ಕಳೋ ಪ್ರೇತವಾಗಿ ಅವನನ್ನು ಕಾಡುತ್ತವೆ. ತಾನು ಮಾಡುವ ಆಯ್ಕೆಗಳ ಮೂಲಕ, ತನ್ನ ನಿರ್ಧಾರಗಳ ಮೂಲಕ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು, ತನ್ನ ಅಸ್ತಿತ್ವವನ್ನು ರೂಪಿಸುತ್ತಾನೆ ಎನ್ನುವ ಆಧುನಿಕ ಅಸ್ತಿತ್ವವಾದಕ್ಕೆ ಹತ್ತಿರವಾದವನು ಅಶ್ವತ್ಥಾಮ. ಅವನ ಆಯ್ಕೆ ದುರ್ಯೋಧನ. ಸ್ವಾಮಿನಿಷ್ಠೆಗಾಗಿ ಉಪಪಾಂಡವರನ್ನು ಕೊಂದು ಕೃಷ್ಣನ ಶಾಪಕ್ಕೆ ಗುರಿಯಾಗಿ ಮೂರು ಸಾವಿರ ವರ್ಷ ಕಾಡುಮೇಡುಗಳಲ್ಲಿ ಅಲೆಯುವಂಥ ಸ್ಥಿತಿ ತಂದುಕೊಳ್ಳುತ್ತಾನೆ. ಇವೆಲ್ಲವೂ ತಾನೇ ತಂದುಕೊಂಡವು. ಮನುಷ್ಯ ತನ್ನ ಕೃತ್ಯಗಳಿಗೆ, ನಿರ್ಣಯಗಳಿಗೆ ತಾನೇ ಹೊಣೆಗಾರ ಎನ್ನುವ ಅಸ್ತಿತ್ವವಾದ ನೆನಪಾಗುವುದು ಇಲ್ಲೇ. ಇಷ್ಟೆಲ್ಲ ಅನಿವಾರ್ಯತೆಗಳೂ ಅವನೇ ಸೃಷ್ಟಿಸಿಕೊಂಡದ್ದು. ಉದ್ದಕ್ಕೂ ಕಾಲನ ಸಾಂಗತ್ಯದಲ್ಲೇ ಸಾಗುವ ರಾಮಚಂದ್ರ ದೇವರ ಅಶ್ವತ್ಥಾಮ ಒಡಲಿನೊಳಗಣ ಬೇಗುದಿಗಳೆಲ್ಲ ಸ್ಫೋಟಿಸಿ ವಿನಾಶಕಾರಿಯಾಗಿಬಿಡುತ್ತಾನೆ. ಸೂಪರ್‌ಮ್ಯಾನ್ ಆಗಿ ಅಟ್ಟಹಾಸಗೈಯುತ್ತ ಯುದ್ಧೋತ್ತರ ಪ್ರಪಂಚದ ಅನಿವಾರ್ಯತೆಗಳಿಗೂ ವಿನಾಶಕಾರಿ ಪ್ರವೃತ್ತಿಗಳಿಗೂ ರೂಪಕವಾಗಿಬಿಡುತ್ತಾನೆ. ದ್ರೌಪದಿ ರಣಚಂಡಿಯಾಗಿ ಸರ್ವಾಧಿಕಾರದ ಪೀಡನೆಗಳಿಂದ ಹಿಡಿದು ನಮ್ಮ ತುರ್ತು ಪರಿಸ್ಥಿತಿಯ ಪ್ರತೀಕಾರ-ಪ್ರಕೋಪಗಳವರೆಗೆ ಪ್ರತೀಕವಾಗಿಬಿಡುತ್ತಾಳೆ. ನಾಟಕದ ಕೊನೆಯಂತೂ ಮಾತು ಮೂಕವಾಗಿ ಕ್ರಿಯೆಯೇ ಮೇಲುಗೈ ಪಡೆದು ಬಾಂಬು ಸ್ಫೋಟ, ಭಯ-ಭೀತಿ-ಸಂಭ್ರಮ-ಸುಗ್ಗಿ ಹೀಗೆ ವೈರುಧ್ಯಗಳ ಗೊಂದಲಪುರವೇ ಸೃಷ್ಟಿಯಾಗಿಬಿಡುತ್ತದೆ. ಇದರಲ್ಲಿ ಎಲ್ಲ ಸೇರಿಕೊಂಡುಬಿಡುತ್ತಾರೆ ಅನಿವಾರ್ಯವೆಂಬಂತೆ. ಕೃಷ್ಣ ಅನಿವಾರ್ಯವಲ್ಲ ಎನ್ನಿಸಿರಬೇಕು ಲೇಖಕರಿಗೆ. ಕೃಷ್ಣನ ಅನುಪಸ್ಥಿತಿಯೂ ಆಧುನಿಕ ಕಾಲದ ಅನಾಥಪ್ರಜ್ಞೆ ಮತ್ತು ಅನಾಯಕತ್ವಗಳನ್ನು ಧ್ವನಿಸುತ್ತದೆಯಲ್ಲವೆ?


ಹುಲಿಯ ಕಥೆ-ಗಾಂಧಿ ಮತ್ತು ಅವರ ಬಂಡಾಯಗಾರ ಪುತ್ರ ಹರಿಲಾಲನ ಮುಖಾಮುಖಿಯಲ್ಲಿ ಬದ್ಧತೆಗಳ ಅನಿವಾರ್ಯತೆ ಒಂದು ಲೋಕವನ್ನೇ ನಮ್ಮ ಮುಂದೆ ಸೃಷ್ಟಿಸಿಬಿಡುತ್ತದೆ. ಗಾಂಧಿಗೆ ಖಾಸಗಿ ಸಂಸಾರಕ್ಕಿಂತ ದೇಶದ ಬಗೆಗಿನ ಅವರ ಬದ್ಧತೆ, ಸತ್ಯನಿಷ್ಠೆ ಧ್ಯೇಯ-ಆದರ್ಶಗಳ ಬದ್ಧತೆಗಳ ಬಗೆಗಿನ ಅನಿವಾರ್ಯತೆ ಮುಖ್ಯವಾಗುತ್ತದೆ. ಗಾಂಧಿಯವರಿಗೆ ವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆ ಇದೆಯಾದರೂ ಸಮುದಾಯ, ಸಮಷ್ಟಿಯ ಹಿತವೇ ಅವರ ಮೊದಲ ಆದ್ಯತೆ. ಅವರು ವಿಶ್ವಕುಟುಂಬಿ. ಇದಕ್ಕಾಗಿ ಅವರು ಸಂಸಾರರಹಿತ, ಸಂಸಾರದ ಬಗೆಗಿನ ಜವಾಬ್ದಾರಿಗಳನ್ನು ತೃಣಸಮಾನವಾಗಿ ಕಾಣುತ್ತಾರೆ. ಇದರ ವಿರುದ್ಧ ಬಂಡೇಳುವ ಹರಿಲಾಲ ಆಧುನಿಕ ಅಸ್ತಿತ್ವವಾದ ಪ್ರತಿಪಾದಿಸುವ angst, freedom, responsibility- ಆತಂಕ, ಸ್ವಾತಂತ್ರ್ಯ, ಹೊಣೆಗಾರಿಕೆಗಳ ಪ್ರತಿರೂಪ. ಹೀಗಾಗಿ ಗಾಂಧಿಗೆ ಪ್ರತಿನಾಯಕನೇ ಆಗಿದ್ದಾನೆ. ಅವನಲ್ಲಿ ಇಪ್ಪತ್ತನೆಯ ಶತಮಾನದ angry youngman ಎಲ್ಲ ಲಕ್ಷಣಗಳೂ ಇವೆ. ತಂದೆಯನ್ನು ಪ್ರಶ್ನಿಸುವ, ವಿಚಾರಣೆಗೆ ಗುರಿಪಡಿಸುವ, ಹುಲಿಯ ಕಥೆಯಲ್ಲಿ ಸಿಕ್ಕಿಸುವ ಅವನ ಎಲ್ಲ ಪ್ರಯತ್ನಗಳಲ್ಲೂ ಬದುಕಿನ ಆಯ್ಕೆಯ ಆತಂಕವಿದೆ. ಸ್ವಾತಂತ್ರ್ಯದ ಆತಂಕವಿದೆ ಹಾಗೂ ಹೊಣೆಗಾರಿಕೆಯ ಆತಂಕವಿದೆ.

ಇದೆಲ್ಲವನ್ನೂ ದಾಟಿಕೊಂಡು, ಅಪ್ಪ-ಅಮ್ಮನನ್ನು ಉಳಿಸಲಿಕ್ಕಾಗಿ ತಾನು ಹುಲಿಗೆ ಆಹಾರವಾಗಲಾರೆ ಎನ್ನುವ ಅವನ ನಿರ್ಧಾರದಲ್ಲಿ ತನ್ನೆಲ್ಲ ಕೃತ್ಯಗಳಿಗೆ ತಾನೇ ಹೊಣೆಗಾರನಾಗುವ ಸಂಕಲ್ಪ ಶಕ್ತಿ ಇದೆ. ಕೊನೆಗೂ ಸ್ವತಂತ್ರನಾಗುವ ಸಾರ್ಥಕತೆ ಇದೆ. ಇದು ಒಂದು ರೀತಿಯಲ್ಲಿ ಗಾಂಧಿಯಿಂದ ಅವನಿಗೆ ಬಿಡುಗಡೆ. ತನ್ನ ಅಸ್ತಿತ್ವದ ಬಯಕೆಗಳ ಅನಿವಾರ್ಯತೆಯಿಂದ ತಾನೇ ಕಂಡುಕೊಂಡ ಸ್ಥಿತಿ ಇದು. ವ್ಯಕ್ತಿಗತ ಸ್ವಾತಂತ್ರ್ಯದ ಈ ಅನಿವಾರ್ಯತೆ ಅವನನ್ನು ಎಲ್ಲಿಗೆ ದೂಡುತ್ತಿದೆ ಎನ್ನುವುದೂ ಅಸ್ತಿತ್ವವಾದ ಮುಖ್ಯ ಅಂಶಗಳಲ್ಲೊಂದಾದ ಆತಂಕವೇ. ಸ್ವತಂತ್ರನಾದ ಅವನ ಮೊದಲ ಹೆಜ್ಜೆ ಭೋಗದತ್ತ. ತಂದೆಗೆ ವಿರುದ್ಧವಾಗಿ ಶುರುವಾಗುವ ಕುಡಿತ, ಸ್ತ್ರೀಮೋಹ ಮೊದಲಾದ ಭೋಗಗಳೆಲ್ಲ ಈಗ ಅವನೇ ಸೃಷ್ಟಿಸಿಕೊಂಡ ಅನಿವಾರ್ಯಗಳಾಗಿಬಿಟ್ಟಿರುವಂತಿದೆ. ನಾಟಕದ ಕೊನೆಯಂತೂ ಹೆಣ್ಣು-ಹೆಂಡ-ನರ್ತನಗಳ ಭೋಗದೊಂದಿಗೆ ವೈಷ್ಣವ ಜನತೊ ಮಿಳಿತಗೊಳ್ಳುವುದು ಮನುಷ್ಯ ಜೀವನದ ವೈರುಧ್ಯಗಳ ಅನಿವಾರ್ಯತೆಯ ವ್ಯಂಗ್ಯವಾಗಿಯೇ ತೋರುತ್ತದೆ.

ದಂಗೆಯೂ ಬದುಕಿನ ಅಸಂಗತತೆ ಮತ್ತು ಅನಿವಾರ್ಯತೆಯನ್ನು ಸ್ಪಷ್ಟವಾಗಿ ಚಿತ್ರಿಸುವ ನಾಟಕ. ಜನರಲ್ಲಿ ಸಾಮಾಜಿಕಪ್ರಜ್ಞೆಯನ್ನು ಜಾಗೃತಗೊಳಿಸಿ ಹೊಸ ಸಮಾಜ ಕಟ್ಟುವ ನಾಯಕನ ನಿರ್ಧಾರವೂ ಆತಂಕ-ಸ್ವಾತಂತ್ರ್ಯ-ಹೊಣೆಗಾರಿಕೆಗಳಿಂದ ಪ್ರೇರಿತವಾದದ್ದೇ. ಆದರೆ ಸಮಾಜವಾದರೋ ದೇವಸ್ಥಾನಕ್ಕೆ ಬೆಂಕಿ ಬಿದ್ದರೂ ಅದು ದೈವೇಚ್ಛೆಯೇ ಇರಬೇಕು ಎಂದು ಸುಮ್ಮನಿದ್ದು ಬಿಡುವ ಜಡ ಸಮಾಜ. ಅಲ್ಲಿ ಚಲನಶೀಲತೆ ಸಾಧ್ಯವೇ ಇಲ್ಲ ಎನ್ನುವಂಥ ಸ್ಥಿತಿಯಲ್ಲೂ ಪುರೋಹಿತಶಾಹಿ ತನ್ನ ಹಿತರಕ್ಷಣೆಗಾಗಿ ಕ್ರಾಂತಿಕಾರಿ ನಾಯಕನಿಗೆ ಸಡ್ಡು ಹೊಡೆಯುತ್ತದೆ. ಇದೇ ಹೊತ್ತಿಗೆ ವ್ಯವಸ್ಥೆ ಪುರೋಹಿತಶಾಹಿಗೆ ಬೆಂಬಲವಾಗಿಯೋ ಎಂಬಂತೆ ರಂಗ ಪ್ರವೇಶ ಮಾಡುತ್ತದೆ. ಕ್ರಾಂತಿಕಾರಿ ಗೋವಿಂದ ಸತ್ತ ಸುದ್ದಿ ಸೃಷ್ಟಿಸುತ್ತದೆ. ಸತ್ತವ ತಾನಲ್ಲ ಎಂದರೂ ಗೋವಿಂದನ ಮಾತನ್ನು ಅದು ನಂಬುವುದಿಲ್ಲ. ಹೀಗಾಗಿ ಕ್ರಾಂತಿಯ ಹುನ್ನಾರದಲ್ಲಿ ತಾನೇ ಸೃಷ್ಟಿಸಿಕೊಂಡ ಅನಿವಾರ್ಯತೆ ಅವನನ್ನು ಸುಲಭವಾಗಿ ವ್ಯವಸ್ಥೆಯ ದುಷ್ಟ ಹುನ್ನಾರದಲ್ಲಿ ಬಂಧಿಯನ್ನಾಗಿಸುತ್ತದೆ. ವ್ಯವಸ್ಥೆಯ ಹುನ್ನಾರದಲ್ಲಿ ಭಾಗಿಯಾಗಿ ಲಾಕಪ್ ಡೆತ್‌ನಲ್ಲಿ ತಾನು ಸತ್ತಿಲ್ಲ ಎಂದು ಹೇಳುವುದಾದಲ್ಲಿ ಗೋವಿಂದನಿಗೆ ಹೊಸಜನ್ಮ ಸಿದ್ಧ. ಆದರೆ ಗೋವಿಂದ ವ್ಯವಸ್ಥೆ ಸೃಷ್ಟಿಸಿದ ತನ್ನ ಸಾವಿನ ಸುದ್ದಿಯನ್ನೇ ಅಸ್ತ್ರ ಮಾಡಿಕೊಳ್ಳುತ್ತಾನೆ. ಹೇಗೂ ನಾನು ಬದುಕಿದ್ದಕ್ಕೆ ದಾಖಲೆ ಇಲ್ಲವಲ್ಲ, ಎಂದು ಭಯೋತ್ಪಾದಕರ ತಂಡ ಕಟ್ಟಲು ನಿರ್ಧರಿಸುತ್ತಾನೆ. ಈ ನಿರ್ಧಾರವೂ ಕೂಡ ವ್ಯಕ್ತಿಯ ಆಯ್ಕೆ, ಸ್ವಾತಂತ್ರ್ಯಗಳಿಂದಲೇ ಪ್ರೇರಿತವಾದದ್ದು. ಸಮಾಜ ಬದಲಾಯಿಸಲು ಕ್ರಾಂತಿ ಅನಿವಾರ್ಯ ಎಂದು ನಂಬಿದ ನಾಯಕನಿಗೆ ಈಗ ದಾಖಲೆಯಲ್ಲಿ ಇಲ್ಲದ ತನ್ನ ಅಸ್ತಿತ್ವ ಉಳಿಸಿಕೊಳ್ಳಲು, ವ್ಯವಸ್ಥೆಯನ್ನು ಹಣಿಯಲು ಭಯೋತ್ಪಾದಕತೆ ಅನಿವಾರ್ಯವಾಗುತ್ತದೆ. ಇದು ದುರಂತ.

ರಾಮಚಂದ್ರ ದೇವ ಅವರದು ಆಧುನಿಕ ಪ್ರಜ್ಞೆ ಎಂದು ನಾನು ಶುರುವಿಗೆ ಹೇಳಿದ್ದಕ್ಕೆ ಮೂರೂ ನಾಟಕಗಳಲ್ಲೂ ಇಂಥ ನಿದರ್ಶನಗಳು ಹೇರಳವಾಗಿ ಕಾಣಸಿಗುತ್ತವೆ. ಅಸ್ತಿತ್ವ-ಆತಂಕ-ಸ್ವಾತಂತ್ರ್ಯ-ಹೊಣೆಗಾರಿಕೆಗಳ ಅನಿವಾರ್ಯತೆಗಳ ಆಧುನಿಕ ಸಂವೇದನೆ ಹಾಗೂ ಮನುಷ್ಯ ಈ ಹಂಬಲಗಳಿಂದಾಗಿ ತಾನೇ ನಿರ್ಮಿಸಿಕೊಂಡ ಜಾಲದಲ್ಲಿ ಸಿಕ್ಕಿ ಬೀಳುವ ಅನಿವಾರ್ಯತೆಯ ಮೂಲವಾದ ಆಧುನಿಕ ಸಂವೇದನೆ ಈ ಮೂರೂ ನಾಟಕಗಳಲ್ಲಿ ಹಾಸುಹೊಕ್ಕಾಗಿದೆ.

'ಸ್ನೇಹ', ನಂ. ೨೬೬, ೩ನೇ ಮೇನ್, ೮ನೇ ಬ್ಲಾಕ್
ಕೋರಮಂಗಲ, ಬೆಂಗಳೂರು – ೫೬೦ ೦೯೫



ನಟರಾಜ ಕೆ.ಎಸ್

ಕೆ.ಎಸ್. ನರಸಿಂಹಸ್ವಾಮಿಯವರ ಸೀತೆಯ ಪುಣ್ಯ: ನನ್ನ ಓದು

ಕೆ.ಎಸ್. ನರಸಿಂಹಸ್ವಾಮಿಯವರ ಬಹುತೇಕ ಕಾವ್ಯಗಳ ಆಶಯ ಆದರ್ಶ ದಾಂಪತ್ಯ (ದಾಂಪತ್ಯದ ಆದರ್ಶ) ಕುರಿತಾಗಿರುವುದು. ಇದರ ಅಸೀಮ ಮೇರೆಗಳನ್ನು ತಮ್ಮ ಕವನಗಳಲ್ಲಿ ವಸ್ತುವಾಗಿ ತರುವುದಲ್ಲದೇ ಇದರ ಒಳಗಡೆ ಪ್ರೀತಿ, ಪ್ರೇಮ, ಪ್ರಣಯ, ವಿರಸಗಳನ್ನು ಅಚ್ಚುಕಟ್ಟಾಗಿಸಿ ಕೌಟುಂಬಿಕ ಜಗತ್ತಿನ ಚೌಕಟ್ಟಿನ ಒಳಗೆ ಇರಬಹುದಾದ ಗಂಡು, ಹೆಣ್ಣಿನ ಸಂಬಂಧದ ವಿನ್ಯಾಸವನ್ನು ತಮ್ಮ ಕವಿತೆಗಳಲ್ಲಿ ವಸ್ತುವಾಗಿ ತರುತ್ತಾರೆ. ಅವರ ಬಹುಪಾಲು ಕವಿತೆಗಳು ಆದರ್ಶೀಕೃತ ಮೌಲ್ಯ ಎಂಬ ಹಣೆಪಟ್ಟಿ ಹಚ್ಚಿಕೊಂಡಿರುತ್ತವೆ. ಹಾಗೇ ಅವುಗಳನ್ನು ಓದಲಾಗಿದೆ. ಕಾವ್ಯದ ಒಳಗೆ ಅಲ್ಲಲ್ಲಿ ಪ್ರತಿರೋಧದ ಅಂಶಗಳಿದ್ದರೂ ಅದು ಪ್ರಕಾಶಿಸುವುದಿಲ್ಲ. ನರಸಿಂಹಸ್ವಾಮಿಯವರ ಕಾವ್ಯಗಳಲ್ಲಿ ಸ್ತ್ರೀ ಕೌಟುಂಬಿಕ ಜಗತ್ತಿನ ನಿಯಮಗಳ ಒಳಗಡೆ ಇರುವ ಸ್ತ್ರೀಯಾಗಿ, ಅವುಗಳ ನೀತಿ-ನಿಯಮ ಮೌಲ್ಯಗಳನ್ನು ಅಚ್ಚುಕಟ್ಟಾಗಿ ಪಾಲಿಸುವವಳಾಗಿ ಬಿಂಬಿತಳಾಗಿದ್ದಾಳೆ. ಗಂಡನ ಸೇವೆಯೇ ಪರದೈವ. ಅತ್ತೆ-ಮಾವಂದಿರ ಯೋಗಕ್ಷೇಮದ ಮೇಲುಸ್ತುವಾರಿ ಅವಳ ಕರ್ತವ್ಯ. ಅವಳ ತಲ್ಲಣ-ಸಂತಾಪ, ಬೇಸರಿಕೆ, ನೋವು, ಮೌನಗಳಿಗೆ ಅಲ್ಲಿ ಬೆಲೆಯಿಲ್ಲ. ಇದು ಅವಳ ಕರ್ಮ ಎಂದು ನಂಬಿರುವ ಪಾತ್ರಗಳೇ ಹೆಚ್ಚಾಗಿ ಬಿಂಬಿತವಾಗಿವೆ. ಗಂಡನಿಗೋಸ್ಕರ ಎಂತಹ ತ್ಯಾಗಕ್ಕೂ ಸಿದ್ಧ ಎನ್ನುವ ಸ್ತ್ರೀಯಾಗಿ ಕವನಗಳಲ್ಲಿ ಕಂಡು ಬರುತ್ತಾರೆ.

ಬಹುಶಃ ನಮಗೆ ಪುರಾಣ, ಚರಿತ್ರೆಗಳಲ್ಲಿನ Shining Characters ಗಳೆಲ್ಲವೂ ಆದರ್ಶೀಕೃತ (Idealistic), ಮೌಲ್ಯಗಳನ್ನು(Values) ಬಿಂಬಿಸುವಂತೆ ರೂಪುಗೊಂಡಿವೆ.

ತಮ್ಮ ಮನಸ್ಸುಗಳೆಲ್ಲವೂ ಅವನ್ನು ಪ್ರಶ್ನಿಸದೇ ಒಪ್ಪಿಕೊಂಡಿವೆ ಎನ್ನುವುದಕ್ಕಿಂತಲೂ ಪ್ರಶ್ನಿಸದೇ ಒಪ್ಪಿಕೊಳ್ಳುವಂತಹ ಮನಸ್ಥಿತಿ ಸಿದ್ಧಗೊಂಡಿದೆ, ಸಿದ್ಧಗೊಳಿಸಿದ್ದಾರೆ. ಅವುಗಳೆಲ್ಲವೂ ಪ್ರಶ್ನಾತೀತ ಪಾತ್ರಗಳು. ಪುರಾಣ, ಚರಿತ್ರೆಯನ್ನು ವಸ್ತುಗಳಾಗಿ ಆರಿಸಿಕೊಂಡು ರಚನೆಯಾದ ಕಾವ್ಯ, ಕಾದಂಬರಿ, ನಾಟಕ, ಕಥೆಗಳಂತಹ ಸೃಜನಶೀಲ ಕೃತಿಗಳಿಗೇನೂ ಕೊರತೆಯಿಲ್ಲ. ಪುರಾಣ - ಚರಿತ್ರೆಯನ್ನು ಅನುಸಂಧಾನ ಮಾಡುವವರಿಗೆ ತಮ್ಮ ಕಾಲದ ಒತ್ತಡಗಳು ಪ್ರಭಾವ ಬೀರುತ್ತವೆ. ತನ್ನ ಕಾಲದ ಆಶಯಗಳು, ಒತ್ತಡಗಳ ನೆಲೆಯಲ್ಲಿ ಓದುವಂತೆ ಒತ್ತಾಯಿಸುತ್ತದೆ.

ಹಾಗಾಗಿಯೇ ರಾಮಾಯಣ, ಮಹಾಭಾರತ ಇತ್ಯಾದಿಗಳನ್ನು ಕಾಲದ ಪ್ರಶ್ನೆಗಳ ಮೂಲಕ ನೋಡುವ ಕ್ರಮವಿದೆ. ಇದು ತಪ್ಪು - ಸರಿಯ ಪ್ರಶ್ನೆಯಲ್ಲ. ಓದುವವರ ದೃಷ್ಟಿಕೋನಕ್ಕೆ ಸಂಬಂಧಿಸಿದುದು. ಅಂತೆಯೇ ರಾವಣ, ಕರ್ಣ, ಏಕಲವ್ಯ, ಸೀತೆ, ದ್ರೌಪದಿ, ಅಮೃತಮತಿಯರ ನೆಲೆಗಳಲ್ಲಿ ಓದುವ ಕ್ರಮಗಳಿವೆ. ಇವೆಲ್ಲವೂ ಪಾರಂಪರಿಕ ಓದಿನ ಮಾದರಿಗಳನ್ನು ಪ್ರಶ್ನಿಸಿ ಹುಟ್ಟಿರುವುಗಳು. ಅಂತೆಯೇ ಕಾವ್ಯಗಳನ್ನು ಮಹಿಳಾ ಪ್ರಶ್ನೆ, ಜಾತಿ ಪ್ರಶ್ನೆ, ಸಾಮಾಜಿಕ ಸಂಘರ್ಷದಂತಹ ತಾತ್ವಿಕ ಪ್ರಶ್ನೆಗಳನ್ನು ಆಧಾರವಾಗಿಸಿಕೊಂಡು ನೋಡಿದಾಗ ಒಂದು ಕಾವ್ಯಕ್ಕಿರಬಹುದಾದ ಹೊಸ ಅರ್ಥಗಳನ್ನು ತೆರೆಯಲು ಸಾಧ್ಯ.

ಕೆ.ಎಸ್. ನರಸಿಂಹಸ್ವಾಮಿಯವರು ತಮ್ಮ ಕಾವ್ಯಕ್ಕೆ ರಾಮಾಯಣದ ವಸ್ತುವನ್ನು ಆಯ್ಕೆ ಮಾಡಿ ಸೀತೆಯನ್ನು ಮುಖ್ಯವಾಗಿಸಿ ಸೀತೆಯ ಪುಣ್ಯವೆಂಬ ಕವಿತೆ ರಚಿಸಿದ್ದಾರೆ. ಕಾವ್ಯದ ವಸ್ತು ಸೀತೆಯು ರಾಮನ ಜೊತೆ ವನವಾಸವನ್ನು ಕಳೆದು ತದನಂತರ ಅಗ್ನಿಪ್ರವೇಶವು ಆದ ನಂತರ, ಮರಳಿ ರಾಜ್ಯಕ್ಕೆ ಬಂದಾಗಿನ ಸಂದರ್ಭ ಕಾವ್ಯದಲ್ಲಿದೆ. ಕಾವ್ಯದಲ್ಲಿ ಸೀತೆಯನ್ನು ಓರ್ವ ಆದರ್ಶ ಸ್ತ್ರೀ, Branded Model, ಪತಿವ್ರತೆಯಂತೆ ಪರಿಭಾವಿಸಿರುವ, ನಿರೂಪಿಸಿರುವ ಕ್ರಮವಿದೆ. ಇದಕ್ಕೆ ಕಾವ್ಯದ ಒಳಗಿರುವ ವಿವರಗಳು ಆಧಾರವನ್ನು ಒದಗಿಸುತ್ತವೆ. ಇದನ್ನು ಗಟ್ಟಿಗೊಳಿಸುತ್ತವೆ. ಕವನವು ಎಲ್ಲಿಯೂ ಪರಂಪರೆಯಲ್ಲಿ ಈಗಾಗಲೇ ಬಿಂಬಿತವಾಗಿರುವ ಮೌಲ್ಯಗಳ ಕುರಿತು ತಕರಾರು ಎತ್ತುವುದಿಲ್ಲ. ಬದಲಾಗಿ ಇಡೀ ಕಾವ್ಯದ ಚೌಕಟ್ಟು ಸೀತೆಗೆ ಪುಣ್ಯವು ಪುರುಷನನ್ನು (ರಾಮನನ್ನು) ಅನುಸರಿಸುವುದರಿಂದ ಬಂದಿರುವುದನ್ನೇ ನಿರೂಪಿಸುತ್ತದೆ ಮತ್ತು ಪ್ರತಿಪಾದಿಸುತ್ತದೆ.

ಇಡೀ ಕವನವನ್ನು ಓದುವಾಗ ಯಾರಿಗೆ ಪುಣ್ಯ? ಯಾರಿಂದ ಪುಣ್ಯ? ಕವನ ಪ್ರತಿಪಾದಿಸುತ್ತಿರುವ ಪುಣ್ಯದ ನೆಲೆ ಯಾವುದು? ಎಂಬ ಪ್ರಶ್ನೆಗಳು ಸಹಜವಾಗಿ ಓದುಗರಿಗೆ ಕಾಡುತ್ತವೆ, ಮುಖಾಮುಖಿ ಯಾಗುತ್ತವೆ. ಕವನದಲ್ಲಿ ವಿವರಗಳು ಸೀತೆಗೆ ಪಡೆದ ಪುಣ್ಯವನ್ನು, ರಾಮನಿಂದ ಸೀತೆಗೆ ಪುಣ್ಯವು ಬಂದುದನ್ನು ಮತ್ತು ಸೀತೆಯ ಪಾತಿವ್ರತ್ಯದ ನೆಲೆಯಿಂದ ಬರುವ ಪುಣ್ಯವನ್ನು ಕವನವು ನಮಗೆ ಕಟ್ಟಿಕೊಡುತ್ತದೆ. ನಮಗೀಗಾಗಲೇ ಗೊತ್ತಿರುವ ಸೀತೆಯ ಬಗೆಗಿನ ನಂಬಿಕೆಯನ್ನು, ಆದರ್ಶ ಸ್ತ್ರೀ ಬಗೆಗಿನ ಸ್ಥಾಪಿತ ನಂಬಿಕೆಯನ್ನು ಕವನವು ಒಡೆದು ಹಾಕುವುದಿಲ್ಲ, ಬದಲಾಯಿಸುವುದಿಲ್ಲ. ಅದರ ಬದಲಾಗಿ ಸೀತೆ ಪಡೆದ ಪುಣ್ಯವನ್ನು ಮತ್ತು ಸೀತೆಯನ್ನು ಓರ್ವ ಆದರ್ಶ ಸ್ತ್ರೀಯನ್ನಾಗಿ ಗಟ್ಟಿಗೊಳಿಸುವ ಕೆಲಸ ಮಾಡುತ್ತದೆ. ಸೀತೆಯ ಮೌನಕ್ಕೆ ಸ್ಥಾನವಿಲ್ಲ. ಅವಳಿಗೆ ಸಹನೆ, ಬಿಸಿಯುಸಿರು ಅಂತಿಮವಾಗಿ ಉಳಿಯುವುದು.

ಪುಣ್ಯ ಎಂಬುದು ಸಬಲರು ದುರ್ಬಲರ ಮೇಲೆ ಸವಾರಿ ಮಾಡಲು ಬಳಸುವ ದೊಡ್ಡ ಪದ ಸೀತೆಗೆ ಪುಣ್ಯವೆಂಬುದು ತಾನು ಶ್ರಮಪಟ್ಟು ಗಳಿಸಿದಂತೆ ಕಾಣುವುದಿಲ್ಲ. ಬದಲಿಗೆ

ಸಮಾಜವು ಆಕೆಯ ಮೇಲೆ ಆರೋಪಿಸಿದಂತೆ ಕಾಣಬರುತ್ತದೆ. ಪುಣ್ಯ ಎಂಬ ಪದವೇ ಸೀತೆ ಕಾಡಿನಲ್ಲಿ ಅನುಭವಿಸಿದ ಎಲ್ಲಾ ನೋವು, ಸಂಕಟಗಳಿಗೆ ಸಾರ್ಥಕತೆ ಎಂಬ ಪೂರ್ಣವಿರಾಮ ಚಿಹ್ನೆಯನ್ನು ಹಾಕಿದೆ. ಸ್ತ್ರೀಗೆ ಸಾರ್ಥಕತೆ ಅಂದರೆ ಅರ್ಧಾಂಗಿಯಾಗಿರುವುದಲ್ಲವೇ ಎಂಬ ಹಿಂಬದಿಯ ಸಮರ್ಥನೆಗಳಿಗೇನು ಕಡಿಮೆ ಇಲ್ಲ. ಭಾವನಾತ್ಮಕ ಸಂಬಂಧವಾಚಕ ಪದಗಳೇ ಅವಳ ಪ್ರತಿರೋಧವನ್ನು ಮಟ್ಟ ಹಾಕಿದೆ. ಕವನವು ಸೀತೆಗೆ ಆಗುತ್ತಿರುವ ದುಃಖ, ತಲ್ಲಣಗಳನ್ನು ಹೇಳಿಕೊಳ್ಳಲಾಗದ ಕೌಟುಂಬಿಕ ಸ್ಥಿತಿಯನ್ನು ಕಟ್ಟಿಕೊಡುತ್ತದೆ. ಇದು ಎಲ್ಲಾ ಕುಟುಂಬಗಳಲ್ಲಿನ ಸ್ತ್ರೀಯರ ಸಾಮಾನ್ಯ ಸ್ಥಿತಿ. ಅವಳ ನೋವುಗಳಿಗೆ ಸ್ಪಂದಿಸುವ ಮನಸ್ಸುಗಳು ಇಲ್ಲ. ಸೀತೆ ರಾಮನ ಜೊತೆ ಕಾಡಿನಲ್ಲಿ ದುಃಖ-ಕಷ್ಟಗಳನುಭವಿಸಿದರೂ ಅದೆಲ್ಲವೂ ಪತ್ನಿಯಾದವಳ ಕರ್ತವ್ಯ. ಎರಡಲ್ಲ ಒಂದು ಎನಿಸಿ ಎಂಬಂತೆ ಜೀವಿಸಿರುವುದರಿಂದಲೇ ಅವಳಿಗೆ ಪುಣ್ಯ ಬಂದುದಕ್ಕೆ ಕಾರಣವೆಂದು ಕವನವು ನಿರೂಪಿಸುತ್ತದೆ.

ಸೀತೆ ತನ್ನ ಮೇಲೆ ಅಪವಾದ (ಶೀಲದ ಬಗ್ಗೆ ಶಂಕೆ) ಬಂದಾಗ ಪತಿ ರಾಮನು ಹೇಳಿದಂತೆ ಪತಿ ಭಕ್ತಿಯಿಂದಗ್ನಿ ಕುಂಡದಲಿ ನೆರಮಿಂದು ಅಗ್ನಿಪ್ರವೇಶ ಮಾಡಿ ತಾನು ಶುದ್ಧಳು ಎಂದು ಸಾಬೀತುಪಡಿಸುವುದು. ರಾಮನ ದೃಷ್ಟಿಕೋನವನ್ನು ತೋರಿಸುತ್ತದೆ. ಕವನವು ಪತಿ-ಪತ್ನಿಯರಲ್ಲಿರಬೇಕಾದ ಪರಸ್ಪರ ನಂಬಿಕೆ, ಹೊಂದಾಣಿಕೆಯನ್ನು ಒತ್ತಿ ಹೇಳುತ್ತದೆ. ಆದರೆ ರಾಮ ಸೀತೆಯರ ವಿಷಯದಲ್ಲಿ ಅಪನಂಬಿಕೆ, ಹೊಂದಾಣಿಕೆಯ ಕೊರತೆ ಬಂದಿರುವುದನ್ನು ಧ್ವನಿಸುತ್ತದೆ. ಇಂತಹ ಸಂದರ್ಭದಲ್ಲೂ ಸೀತೆ ಎಲ್ಲಾ ಪರೀಕ್ಷೆಗಳನ್ನು ದಾಟಿ ಬರುತ್ತಾಳೆ. ಹುಟ್ಟಿದ ಮನೆಗೂ, ಗಂಡನ ಮನೆಗೂ ಕೀರ್ತಿ ತರುತ್ತಾಳೆ. ಇದು ಹೆಣ್ಣಿನ ಮೂಲಭೂತ ಕರ್ತವ್ಯವೆಂದು ಪ್ರತಿಪಾದಿಸುವುದಕ್ಕೆ ಇಂತಹ ಸಂದರ್ಭಗಳು ಇಂದಿಗೂ ಬಳಕೆಯಾಗುತ್ತವೆ.

ತೌರೂರು, ತಾಯ್ತಂದೆ, ತಾಯಡಿಗೆ ತನಗಿಲ್ಲ
ದೊರೆ ಮಗಳು ದೊರೆಯ ಮಡದಿ

ಎಂಬ ಕವನದ ಸಾಲುಗಳು ಸ್ತ್ರೀ ಪರತಂತ್ರಗಳು ಹುಟ್ಟುತ್ತಲೇ ತೌರು ಮನೆಯಲ್ಲಿ, ಮದುವೆಯಾದ ಮೇಲೆ ಗಂಡನಿಗೆ ಅಧೀನಳು. ಸ್ತ್ರೀಯು ಅರಸನ ಮಗಳಾದರೇನು, ಪತ್ನಿಯಾದರೇನು ಬಂದಂತಹ ಕಷ್ಟಗಳನ್ನು ಅನುಭವಿಸಬೇಕು. ಕಷ್ಟಗಳನ್ನು ಸಹಿಸಬೇಕು. ಮಾಧವಿ ಕತೆಯೂ ಹೀಗೆ ಅವಳು ಭೋಗದ ವಸ್ತುವಾಗುತ್ತಾಳೆ, ಅವಕಾಶವಾದಿಗಳಿಗೆ ಸಿಕ್ಕು ಜರ್ಜರಿತವಾಗುತ್ತಾಳೆ. ಅಲ್ಲದೇ ಅಗ್ನಿರಾಜನ ಮಗಳಾದ ಕೃತ್ತಿಕೆ ಅಪ್ಪನ ಕಾಮಾಂಧತೆಗೆ ಬಲಿಯಾಗುತ್ತಾಳೆ. ಇವರೆಲ್ಲರೂ ಪ್ರತಿಷ್ಠಿತ ಮನೆತನ, ದೊರೆಗಳ ಮಕ್ಕಳು. ಆದರೂ ಸ್ತ್ರೀಯಾದ ಕಾರಣದಿಂದ ಇವರು ಭಿನ್ನ ಸನ್ನಿವೇಶಗಳಲ್ಲಿ ಮೌನದಲ್ಲಿಯೇ ಎಲ್ಲಾ ಹಿಂಸೆಗಳನ್ನು ಪ್ರತಿಭಟಿಸುತ್ತಾರೆ. ಬಹಿರಂಗಕ್ಕೆ ತೆರೆದುಕೊಳ್ಳುವುದಿಲ್ಲ. ಸೀತೆ ತನಗಾದ ಎಲ್ಲ ಅವಮಾನ, ನೋವುಗಳನ್ನು ಅಂತರಂಗದಲ್ಲಿಯೇ ಅನುಭವಿಸಿ ಶಮನ ಮಾಡಿಕೊಳ್ಳುತ್ತಾಳೆ. ಕಾರಣ ಅವಳು ಅರಮನೆಯಲ್ಲಿ ಏಕಾಂಗಿ ಪತಿ ರಾಮನಿದ್ದರೂ ಕೂಡ.

ಸೀತೆಯು ಸ್ತ್ರೀಯಾದ ಕಾರಣ ಕುಟುಂಬದಲ್ಲಿ ಎರಡು ಪಾತ್ರಗಳನ್ನು ನಿಭಾಯಿಸಬೇಕು. ಪತಿಯನ್ನು ಮತ್ತು ಅತ್ತೆ ಮಾವಂದಿರ ಸೇವೆ ಮಾಡಬೇಕು. ಸೀತೆ ರಾಮನ ಜೊತೆ ವನವಾಸ ಮಾಡಿ ಪತಿತೆಯಾಗಿದ್ದಾಳೆ. ಆದರೆ ಅವಳಿಗೆ ಅತ್ತೆ ಮಾವಂದಿರನು ಸುತ್ತಿ ಸೇವಿಸಲಿಲ್ಲ, ತುದಿಗಾಲನೊತ್ತಲಿಲ್ಲ

ಎಂಬ ವ್ಯಥೆ ಇದೆ. ಇದು ಅವಳ ಕರ್ತವ್ಯದ ಪ್ರಜ್ಞೆಯ ಭಾಗವಾಗಿ ಬಂದಿದೆ. ರಾಮನ ಜೊತೆ ಕಾಡಿಗೆ ಹೋದ ಕಾರಣ ಅವಳ ಕರ್ತವ್ಯಕ್ಕೆ ಚ್ಯುತಿ ಬಂದಿರುವುದು ಸಣ್ಣ ಕೊರಗಾಗಿ ಸೀತೆಗೆ ಕಾಡಿದೆ. ಕೈಹಿಡಿದ ಗಂಡನಿಗೆ ವನವಾಸ, ತನಗೆ ಬಂದಿರುವ ನಾರು ಸೀರೆಯು ಅವಳಿಗೆ ತೃಪ್ತಿ ನೀಡಿಲ್ಲ, ಸಾಮಾನ್ಯ ಜನರಿಗೆ ಭೂಮಿ ಸ್ವರ್ಗವಾದರೆ ಕಾಡೊಂದು ತನಗೆ ನಾಡು ಎಂಬ ಅತೃಪ್ತ ಭಾವದಲ್ಲಿದ್ದಾಳೆ. ಆದರೂ ಕವನವು ವನವಾಸದನುಭವದ ಸುಖವ ಕಂಡಳು ಸೀತೆ ರಾಘವನ ನೆಳಲ ಹಿಡಿದು ಎಂಬುದಕ್ಕೆ ಸೀತೆ ಅನುಭವಿಸಿರಬಹುದಾದ ಅತೃಪ್ತಿಗೆ, ಯಾತನಾ ಬದುಕಿಗೆ ನಿರೂಪಣೆಯು ಸುಖದ ಸಂತೃಪ್ತ ಭಾವವನ್ನು ನೀಡುತ್ತಿದೆ. ಇದನ್ನು ನಾವು ಒಪ್ಪಲು ಸಾಧ್ಯವಿಲ್ಲ. ಮದುವೆಯಾದ ಹೊಸತರಲ್ಲಿ ಸುಖದಿಂದ ಇರಬೇಕಾದ ಸಂದರ್ಭದಲ್ಲಿ ವನವಾಸವು ಸೀತೆಗೆ ಸುಖದ ಅನುಭವ ನೀಡುವುದಕ್ಕೆ ಸಾಧ್ಯವೇ? ಇಲ್ಲ.

ಇಡೀ ಕವನವನ್ನು ಓದಿದ ಅಂತ್ಯಕ್ಕೆ ನಮಗೆ ಸೀತೆಯಂತಹವಳು ರಾಮನಿಗೆ ಹೆಂಡತಿಯಾದ ಕಾರಣಕ್ಕೆ ರಾಮನಿಗೆ ಪುಣ್ಯ ದೊರಕಿದೆ. ನೈತಿಕತೆಯ ನೆಲೆಗಟ್ಟನ್ನಾಧರಿಸಿ ಪುಣ್ಯವನ್ನು ಕಾವ್ಯ ಪ್ರತಿಪಾದಿಸುತ್ತಿದೆ ಎಂದು ನಮಗನ್ನಿಸದೇ ಇರಲಾರದು. ಸೀತೆಯು ಪತಿ ರಾಮನ ಜೊತೆ ವನವಾಸ ಮಾಡಿದಕ್ಕೆ ಮತ್ತು ಲವ-ಕುಶ ಎಂಬ ಮಕ್ಕಳಿಗೆ ಜನ್ಮ ನೀಡಿ ಸೂರ್ಯವಂಶವನ್ನು ಬೆಳೆಸಿದರ ಪ್ರತಿಫಲವಾಗಿ ಅವಳ ಜೀವನ ಸಾರ್ಥಕ, ಪುಣ್ಯವಂತಳು ಎಂದು ಸಮಾಜವು ಆರೋಪಿಸಿದಂತೆ ಕಾಣಿಸುತ್ತದೆ. ಇದನ್ನು ಕವನವು ಚೆನ್ನಾಗಿ ಹಿಡಿದಿಡುವ ಪ್ರಯತ್ನ ಮಾಡಿದೆ.

ಸ್ತ್ರೀಯಾದ ಸೀತೆಯ ವ್ಯಕ್ತಿತ್ವ, ಅವಳ ನಡತೆಯಿಂದಲೇ ರಾಮನಿಗೆ ಪುಣ್ಯ ಲಭಿಸಿರುವ ಸಾಧ್ಯತೆಯ ಕುರಿತು ಯೋಚಿಸಿದಾಗ ಸೀತೆಯ ಪುಣ್ಯ ಎಂಬ ಶೀರ್ಷಿಕೆಯಲ್ಲಿನ ಕವನವನ್ನು ರಾಮನ ಪುಣ್ಯ ಎಂದು ಓದಿಕೊಳ್ಳುವುದೇ ಸೂಕ್ತವೆಂದು ಅಂತ್ಯದಲ್ಲಿ ತೀರ್ಮಾನಕ್ಕೆ ಬರುವಂತೆ ಹೀಗೆ ಓದುವಂತೆ ಕವನದ ಆಳದಲ್ಲಿನ ಅರ್ಥವು ನಮಗೆ ಒತ್ತಾಯಿಸುತ್ತದೆ.

ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ಡಾ. ಟಿ.ಎಸ್. ವಾಸುದೇವಮೂರ್ತಿ

ಎದೆಗೆ ಬಿದ್ದ ಅಕ್ಷರ
ಒಂದು ವಿಮರ್ಶೆ

ಮೋಕ್ಷ ದ್ವಾರದಲ್ಲಿ ನಿಂತ ಗೌತಮ ಬುದ್ಧ

ಕಟ್ಟಕಡೆಯ ಮನುಷ್ಯನು ಈ ದ್ವಾರವನ್ನು ಪ್ರವೇಶಿಸುವ ತನಕ
ನಾನು ಹೊರಗೇ ನಿಂತಿರುತ್ತೇನೆ

ಯು.ಜಿ. ಕೃಷ್ಣಮೂರ್ತಿ ವ್ಯಾಖ್ಯಾನ:


ಇದು ತಾನು ಹುಡುಕಾಡಿದ ಮೋಕ್ಷ
ಕೊನೆಗೂ ಹುಸಿಯೆಂದು ಸಾಬೀತಾಯಿತು ಎಂಬುದನ್ನು
ರೂಪಕದ ವಿಧಾನದಲ್ಲಿ ನಿರೂಪಿಸುವ ಬಗೆ.

ಕನಸೇ, ಕಲ್ಪನೆಯೇ, ಇಲ್ಲವಾದರೆ ಏನಿದೆ ಇಲ್ಲಿ?
ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆ!

– ಗೋಪಾಲಕೃಷ್ಣ ಅಡಿಗ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಾದ ದೇವನೂರ ಮಹಾದೇವ ಅವರ ಸೃಜನಶೀಲ ಸಾಹಿತ್ಯ ಇನ್ನೂರು ಪುಟಗಳನ್ನೂ ಮೀರುವುದಿಲ್ಲ ಎಂಬ ಮಾತು ನಮ್ಮಲ್ಲಿಂದು ಒಂದು ನಾಣ್ಣುಡಿಯೇ ಆಗಿಬಿಟ್ಟಿದೆ. ಅಚ್ಚರಿ, ಅಣಕ, ಮಾಹಿತಿ, ಹೊಗಳಿಕೆ, ಕುತೂಹಲ – ಹೀಗೆ ನಾನಾ ದನಿಗಳು ಈ ಜನಜನಿತ ನುಡಿಯೊಳಗೆ ಸಮಾಹಿತವಾಗಿವೆ. ಈಚೆಗಂತೂ ಕ್ಲೀಷೆ ಎನ್ನಿಸುವಷ್ಟರ ಮಟ್ಟಿಗೆ ಈ ನಾಣ್ಣುಡಿ ನಮ್ಮ ನಡುವೆ ಚಾಲ್ತಿಯಲ್ಲಿದೆ. ಅದೇನೇ ಇದ್ದರೂ ದೇವನೂರ ಮಹಾದೇವರ ಒಡಲಾಳ ಮತ್ತು ಇತರ ಕತೆಗಳು ಹಾಗು ಕುಸುಮಬಾಲೆ ಎಂಬ ಅಪೂರ್ವ ಸಾಹಿತ್ಯ ಕೃತಿಗಳು ಕನ್ನಡ ಸಾಹಿತ್ಯ ಪರಂಪರೆಗೆ ಅವರು ನೀಡಿರುವ ಸಾರ್ವಕಾಲಿಕವಾದ

ಸಂಚಯ ಸಾಹಿತ್ಯ ಸ್ಪರ್ಧೆ - 2013ರ ಬಹುಮಾನಿತ ಲೇಖನಗಳು



ಕೊಡುಗೆಗಳಾಗಿವೆ ಎಂಬುದು ನಿರ್ವಿವಾದ. ಆದರೆ ಎದೆಗೆ ಬಿದ್ದ ಅಕ್ಷರ ಒಂದು ಸೃಜನಶೀಲ ಸಾಹಿತ್ಯಕೃತಿಯಲ್ಲ ಎಂಬುದನ್ನು ಮರೆಯಬಾರದು. ಎದೆಗೆ ಬಿದ್ದ ಅಕ್ಷರವನ್ನು ದೇವನೂರರ ಹಿಂದಿನ ಎರಡು ಕೃತಿಗಳಿಗೆ ಹೋಲಿಸುವುದು ಬಾಲಿಶತನವಾಗುತ್ತದೆ ಮತ್ತು ಹಾಗೆ ಹೋಲಿಸಿ ವಿಮರ್ಶೆ ಬರೆದರೆ ಅದು ನಿಜಕ್ಕೂ ಆಭಾಸದ್ದಾಗುತ್ತದೆ. ಎದೆಗೆ ಬಿದ್ದ ಅಕ್ಷರ ಅವರು ನಾನಾ ಸಂದರ್ಭಗಳಲ್ಲಿ ಬರೆದ ಹಲವು ಲೇಖನ ಮತ್ತು ಟಿಪ್ಪಣಿಗಳ ಸಂಕಲನವಾಗಿದೆ. ಅದರ ಮುನ್ನುಡಿಯಲ್ಲಿ ತಿಳಿಸಿರುವಂತೆ ಕೆಲವು ಪುಸ್ತಕ ಪ್ರಿಯರ ಮತ್ತು ಪ್ರಕಾಶಕರ ಒತ್ತಾಯದ ಮೇರೆಗೆ ಆ ಎಲ್ಲ ಲೇಖನ ಮತ್ತು ಟಿಪ್ಪಣಿಗಳನ್ನು ಒಂದೇ ಸಂಪುಟದಲ್ಲಿ ಹೊರತರಲಾಗಿದೆಯೇ ವಿನಃ ಇಂದಿನ ಅವರ ಅಭಿಮಾನಿಗಳು ಭಾವಿಸಿರುವಂತೆ ಅದೇನೂ ಅವರ ಜೀವಿತದ ಮಹತ್ಕೃತಿ (ಮ್ಯಾಗ್ನಂಓಪಸ್) ಅಲ್ಲ. ದೇವನೂರರು ಸಾಮಾಜಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಲ್ಲಿ ಇಂದಿಗೂ ಸಕ್ರಿಯವಾಗಿ ತೊಡಗಿರುವ ಕಾರಣ ಈ ಥರದ ಇನ್ನೂ ಹತ್ತು ಹಲವು ಸಂಪುಟಗಳು ಮುಂಬರುವ ದಿನಗಳಲ್ಲಿ ಹೊರಬರಬಹುದು. ಆದರೆ ಎದೆಗೆ ಬಿದ್ದ ಅಕ್ಷರ ಆ ಅರ್ಥದಲ್ಲಿ ಒಂದು ಸೃಜನಶೀಲ ಕಲಾಕೃತಿಯಲ್ಲದ ಕಾರಣ ಅದನ್ನು ಅವರ ಇತರ ಕೃತಿಗಳೊಂದಿಗೆ ಇಟ್ಟು ಹೋಲಿಸಬಾರದು.

ಇಂದಿನ ಕಾಲದಲ್ಲಿ ಸೃಜನಶೀಲ-ಸೃಜನೇತರ, ಗದ್ಯ-ಪದ್ಯ, ವಿಮರ್ಶೆ-ಸಂಶೋಧನೆ ಎಂಬ ವಿಂಗಡಣೆಯೇ ಹುಸಿಯಾದುದು. ಒಬ್ಬ ಸಾಹಿತಿಯ ಪ್ರತಿಯೊಂದು ಬರಹವನ್ನೂ ಅಖಂಡವಾಗಿ ಕಂಡು ಗ್ರಹಿಸಬೇಕು ಎಂಬ ಬೌದ್ಧಿಕ ಉದಾರವಾದವನ್ನು ಪ್ರಚಾರ ಮಾಡುವ ಆಧುನಿಕೋತ್ತರ ವಿಮರ್ಶಾ ಸಿದ್ಧಾಂತಗಳನ್ನು ಒಪ್ಪಿಯೂ ಒಬ್ಬ ಸೂಕ್ಷ್ಮಜ್ಞನಾದ ಸಾಹಿತ್ಯ ವಿಮರ್ಶಕನು ತನ್ನ ಬರವಣಿಗೆಯ ಶಿಸ್ತು ಮತ್ತು ಬದ್ಧತೆಗಳನ್ನು ಪಾಲಿಸಬೇಕಾಗುತ್ತದೆ. ಮತ್ತು ಒಬ್ಬ ಮಹತ್ವದ ಬರಹಗಾರ ಬರೆದುದೆಲ್ಲವೂ ಒಂದು ನಿರ್ದಿಷ್ಟ ತಲೆಮಾರಿನ ಅಭಿಮಾನಿಗಳಿಗೆ ಪಾವನವೆನಿಸುತ್ತದೆ ಎಂಬುದನ್ನು ಅಲಕ್ಷಿಸದೆ ಅವನ ಕೊಡುಗೆಗಳನ್ನು ಅವಲೋಕಿಸಬೇಕಾಗುತ್ತದೆ. ಹಾಗೆ ನೋಡಿದರೆ ಈ ಬೌದ್ಧಿಕ ಉದಾರವಾದ ಮತ್ತು ಭಾವುಕ ಭೋಳೆತನ ಹಿಂದಿನ ಕಾವ್ಯಮೀಮಾಂಸೆಗೆ

ಹೊಸತೇನೂ ಅಲ್ಲ. ಭಾರತೀಯ ಕಾವ್ಯಮೀಮಾಂಸೆಯು ಬಹು ಹಿಂದೆಯೇ ಕವೇಃ ಕೃತಂ ಕಾವ್ಯಂ (ಕವಿಯಾದವನು ಕೈಗೊಂಡುದೆಲ್ಲವೂ ಕಾವ್ಯವೇ) ಎಂದು ನುಡಿದಿದೆ. ಈ ತರಹದ ಸಿದ್ಧಾಂತಗಳನ್ನು ನಂಬಿ ಅವನು ನುಡಿದುದೆಲ್ಲ ಕಾವ್ಯವೇ, ಸೃಷ್ಟಿಸಿದುದೆಲ್ಲವೂ ಕಲಾಕೃತಿಯೇ ಎಂದು ತೀರ್ಮಾನಿಸಿ ವಿಮರ್ಶಿಸಲು ಹೊರಟರೆ ಎದೆಗೆ ಬಿದ್ದ ಅಕ್ಷರದ ವಿಮರ್ಶೆಯೇ ದಾರಿ ತಪ್ಪುತ್ತದೆ.

ಈ ಹಿಂದೆಯೂ ಶಂಬಾ, ಮಾಸ್ತಿ, ಡಿವಿಜಿಯಂತಹ ಸಾಹಿತಿಗಳು ತಮ್ಮ ಸಾಹಿತ್ಯ ಕೃಷಿಯ ಜೊತೆಜೊತೆಗೇ ತಮ್ಮ ಸಮಕಾಲೀನ ಸಮಾಜ-ಸಂಸ್ಕೃತಿಗಳ ಸಮಸ್ಯೆಗಳನ್ನು ಕುರಿತು ಸಂಪಾದಕೀಯ ಬರವಣಿಗೆ, ಪತ್ರಿಕಾ ಲೇಖನ, ಟಿಪ್ಪಣಿ, ಸಂಶೋಧನಾ ಲೇಖನ ಇತ್ಯಾದಿಗಳನ್ನು ಬರೆದಿರುವರು. ಒಂದು ಸಾಹಿತ್ಯಕೃತಿಯ ಸಾರ್ವಕಾಲಿಕ ಗುಣ ಅದರ ಆಕೃತಿಯಲ್ಲಿ ಅಡಗಿರುತ್ತದೆ ಎಂದು ನಂಬಿದ್ದ ನವ್ಯ ಸಾಹಿತಿಗಳೂ ಕ್ರಮೇಣ ತಮ್ಮ ಆಕೃತಿ ನಿಷ್ಠೆಯನ್ನು ತೊರೆದರು. ಲಂಕೇಶರು ಟೀಕೆ-ಟಿಪ್ಪಣಿ, ಮರೆಯುವ ಮುನ್ನ ಮೊದಲಾದ ಅಂಕಣಗಳನ್ನು ಬರೆಯಲಾರಂಭಿಸಿದರು. ಪೂರ್ಣಚಂದ್ರ ತೇಜಸ್ವಿಯಂತಹವರು ಕ್ರಮೇಣ ತಮ್ಮ ಬರವಣಿಗೆಯೊಳಗೆ ಸುತ್ತಣ ಪರಿಸರವನ್ನು, ದೇಶ-ವಿದೇಶಗಳನ್ನು ತಂದರು. ಇಂಥದೇ ಪರಂಪರೆಯ ಮುಂದುವರಿಕೆಯಾಗಿ ಎದೆಗೆ ಬಿದ್ದ ಅಕ್ಷರ ಕೃತಿಯನ್ನು ಕಾಣಬೇಕಾಗಿದೆ.

ಈ ಕೃತಿಯಲ್ಲಿ ಜಾತಿ ಮತ್ತು ಅಸ್ಪೃಶ್ಯತೆಯ ಸಮಸ್ಯೆಗಳು ಪ್ರಧಾನವಾಗಿ ಶೋಧಿತವಾಗಿರುವುದಾದರೂ ಪಂಪ, ಕುಮಾರವ್ಯಾಸರಿಂದ ಹಿಡಿದು ಅನಂತಮೂರ್ತಿ, ಸಿದ್ಧಲಿಂಗಯ್ಯನವರೆಗಿನ ಎಲ್ಲ ಪ್ರಮುಖ ಸಾಹಿತಿಗಳ ಕುರಿತ ಚರ್ಚೆಯನ್ನೂ ಇದು ಒಳಗೊಂಡಿದೆ. ಗಾಂಧಿ, ಅಂಬೇಡ್ಕರರ ಚಿಂತನೆಗಳು, ಕೃಷ್ಣಪ್ಪ, ನಂಜುಂಡಸ್ವಾಮಿಯವರ ಸಾಮಾಜಿಕ ಮತ್ತು ರೈತ ಚಳವಳಿಗಳು, ಎಲ್. ಬಸವರಾಜು ಅವರ ಸಂಶೋಧನೆಯ ವೈಶಿಷ್ಟ್ಯ, ಜಾನಕಿಸರಂತಹ ಕತೆಗಾರರ ವಿಶಿಷ್ಟ ಸಂವೇದನೆ, ಶ್ರೀಕೃಷ್ಣ ಆಲನಹಳ್ಳಿಯಂತಹ ಸಾಹಿತಿಗಳ ಹುಂಬತನ,.. ಹೀಗೆ ಅತ್ಯಂತ ವಿಸ್ತಾರವಾದ ಹರಹುಳ್ಳ ಎದೆಗೆ ಬಿದ್ದ ಅಕ್ಷರ ಸ್ವಾತಂತ್ರ್ಯೋತ್ತರ ಕರ್ನಾಟಕದ ೬೦ ವರ್ಷಗಳ ಸಾಂಸ್ಕೃತಿಕ ಚರಿತ್ರೆಯನ್ನು ಹುದುಗಿಸಿಟ್ಟುಕೊಳ್ಳಬಲ್ಲ ಒಂದು ಪ್ರತಿಭಾಪೂರ್ಣ ದಾಖಲೆಯಾಗಬಹುದಿತ್ತು. ಆದರೆ ಕೆಲವು ನಿರ್ದಿಷ್ಟ ಕಾರಣಗಳಿಂದಾಗಿ ಇದು ಕನ್ನಡಿಗರ ಪಾಲಿಗೆ ಹಾಗಾಗದೆ ಕೆಲವು ಸಾಂದರ್ಭಿಕ ಲೇಖನ-ಟಿಪ್ಪಣಿಗಳ ಸಂಕಲನವಾಗಿ ಮಾತ್ರ ಉಳಿಯುವುದು ಸಾಹಿತ್ಯ ವಿಮರ್ಶಕರು ಮತ್ತು ಸಾಹಿತ್ಯ ಚರಿತ್ರಕಾರರಿಗಂತೂ ನಿಜಕ್ಕೂ ನಿರಾಶಾದಾಯಕ. ಎದೆಗೆ ಬಿದ್ದ ಅಕ್ಷರದ ಸಮಸ್ಯಾ ಕೇಂದ್ರಿತ ಚಿಂತನೆಯೇ ಅಂತಹ ಕಾರಣಗಳಲ್ಲಿ ಪ್ರಮುಖವಾದುದು.

ಸುಮಾರು ಎಂಬತ್ತಕ್ಕೂ ಅಧಿಕ ಬಿಡಿ ಬರಹಗಳನ್ನು ಒಳಗೊಂಡ ಎದೆಗೆ ಬಿದ್ದ ಅಕ್ಷರದ ಪ್ರತಿಯೊಂದು ನಿಲುವು ಮತ್ತು ಚಿಂತನೆಗಳನ್ನೂ ಪ್ರಶ್ನಾತೀತವಾಗಿ ಒಪ್ಪಬಹುದಾದರೂ ಈ ಸಮಸ್ಯಾ ಕೇಂದ್ರಿತ ಚಿಂತನೆಯಿಂದ ತಲೆದೋರುವ ಕೆಲವು ತೊಡಕುಗಳನ್ನು ವಿಶ್ಲೇಷಿಸಲೇ ಬೇಕಾಗುತ್ತದೆ. ಇಲ್ಲಿನ ಶೇಕಡಾ ಎಪ್ಪತ್ತಕ್ಕೂ ಅಧಿಕ ಲೇಖನಗಳು ನಮ್ಮ ಜಾತೀಯತೆ ಮತ್ತು ಅಸ್ಪೃಶ್ಯತೆಯ ಪಿಡುಗುಗಳ ಕುರಿತದ್ದಾಗಿದೆ. ಸಮಾಜದಲ್ಲಿ ನಾನಾ ಬಗೆಯ ಸಮಸ್ಯೆಗಳಿರುವುದಾದರೂ ಒಂದು ನಿರ್ದಿಷ್ಟ ಸಮಸ್ಯೆಯು ಉಳಿದೆಲ್ಲ ಜ್ವಲಂತ ಸಮಸ್ಯೆಗಳ ತಾಯಿಬೇರು ಎಂದು ಲೇಖಕರು ನಿರ್ಣಯಿಸಿಕೊಂಡು ಚಿಂತನೆಗೆ ತೊಡಗುತ್ತಾರೆ. ಚಳವಳಿಕಾರರಿಗೆ ಮತ್ತು ಸಮಾಜ ಸುಧಾರಕನಾದವನಿಗೆ ಇದುವೆ ಸರಿಯಾದ ಕ್ರಮವಿರಬಹುದು, ಏಕೆಂದರೆ ಯಾವುದೇ ಚಳವಳಿಗಾರನು ಒಂದು ನಿರ್ದಿಷ್ಟ ಸಮಸ್ಯೆಯನ್ನು ಮುಖ್ಯ ಗುರಿಯಾಗಿಸಿಕೊಳ್ಳದೆ ಸಮಸ್ಯೆಗಳ ಸುಧಾರಣೆಯತ್ತ ಕಾರ್ಯಪ್ರವೃತ್ತನಾಗಲಾರ. ಹಾಗಾಗಿ ಲೇಖಕರು ತಾವು ಪ್ರತ್ಯಕ್ಷವಾಗಿ

ಕಂಡುಂಡ ಸಾಮಾಜಿಕ ಅನುಭವಗಳ ಪರಿಪ್ರೇಕ್ಷ್ಯದಲ್ಲಿ ಚಿಂತನೆ ನಡೆಸಿರುವುದು ಮತ್ತು ಕಾರ್ಯಪ್ರವೃತ್ತರಾಗಿರುವುದು ಆ ದೃಷ್ಟಿಯಿಂದ ಉಚಿತವೇ ಸರಿ. ಆದರೆ ಜಾತೀಯತೆ, ವರ್ಗಭೇದಗಳನ್ನು ಉಳಿಸಿಕೊಳ್ಳಲೇಬೇಕಾದ ಒಂದು ಜಡ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡು ಅದರಲ್ಲೇ ಬಾಳುತ್ತಿದ್ದೇವೆ. ಇಂಥ ವ್ಯವಸ್ಥೆಯಲ್ಲಿ ಆಮೂಲಾಗ್ರ ಪರಿವರ್ತನೆ ತರದೆ ಅದರೊಳಗಿನ ಜಾತೀಯತೆಯಂತಹ ಕೆಲವು ಸಮಸ್ಯೆಗಳ ಪರವಾಗಿ ಕಾಳಜಿ ತಳೆದರೆ, ಅದು ಎಷ್ಟೇ ಉದಾತ್ತವಾದ ಕಾಳಜಿಯೇ ಆದರೂ ಅಂತಿಮವಾಗಿ ಅದು ವ್ಯಾಮೋಹಗ್ರಸ್ತ ವಿಷಾದ ಯೋಗವೆನಿಸುತ್ತದೆ. ಎಷ್ಟೇ ಹೃದಯ ಪರಿವರ್ತನೆಗಾಗಿ ಪ್ರಯತ್ನಿಸಿದರೂ ಆಳದಲ್ಲಿ ಹಳಹಳಿಕೆಯ ಭಾವವನ್ನೇ ಅದು ಧ್ವನಿಸುತ್ತದೆ. ಆದ್ದರಿಂದಲೇ ಇರಬೇಕು ಬುದ್ಧ, ಗಾಂಧಿ, ಬಸವಣ್ಣ ಮೊದಲಾದವರು ಮೊದಲು ತಮ್ಮ ಕಣ್ಣೆದುರಿನ ಜಡ ವ್ಯವಸ್ಥೆಗೆ ಪರ್ಯಾಯವಾದ ವ್ಯವಸ್ಥೆಗಳನ್ನು ತಮ್ಮ ಸುತ್ತ ಪ್ರಾಯೋಗಿಕವಾಗಿ ಕಟ್ಟಿಕೊಂಡು ತರುವಾಯ ಸಮಾಜದ ಪರಿವರ್ತನೆಗೆ ಮುಂದಾದುದು. ಗಾಂಧಿ, ಬಸವಾದಿಗಳ ಸಂಕಲ್ಪವನ್ನು ಯಾವುದೇ ಒಬ್ಬ ಸಾಹಿತಿಯಲ್ಲಿ ನಿರೀಕ್ಷಿಸುವುದು ಅನುಚಿತ. ಅಥವಾ ಸಮಾಜದಲ್ಲಿ ತತ್‌ಕ್ಷಣವೇ ಆಮೂಲಾಗ್ರ ಪರಿವರ್ತನೆ ಆಗಲೇ ಬೇಕು ಎಂದು ಹಟ ಹಿಡಿಯುವುದು ಹುಂಬತನ. ಅದು ಈ ಬರೆಹದ ಉದ್ದೇಶವೂ ಅಲ್ಲ. ಕೊನೆಗೆ ಒಬ್ಬ ಸಾಹಿತಿ ತನ್ನ ವರ್ತಮಾನದ ಬದುಕಿಗೆ ಏನನ್ನು ಕೊಡುಗೆಯಾಗಿ ಉಳಿಸಿಹೋಗಬಲ್ಲ ಎಂಬುದು ಇಲ್ಲಿನ ಮುಖ್ಯ ಜಿಜ್ಞಾಸೆಯಾಗಿದೆ.

ಅಲ್ಲದೆ ಸಮಸ್ಯಾ ಕೇಂದ್ರಿತ ಚಿಂತನೆಯಿಂದ ಬೇರೆ ಹಲವು ಅನರ್ಥಗಳು ಸಂಭವಿಸುವುದೂ ಉಂಟು. ರಷ್ಯಾದ ಕಮ್ಯುನಿಸ್ಟ್ ಚಿಂತಕರು ಮತ್ತು ನಾಯಕರು ಹೇಗೆ ಮುಂದಿನ ತಲೆಮಾರುಗಳಿಗೆ ಅಪ್ರಸ್ತುತರಾದರು ಎಂಬ ಪಾಠವನ್ನು ಈಗಾಗಲೇ ಇತಿಹಾಸ ನಮಗೆ ಕಲಿಸಿದೆ. ಒಂದು ನಿರ್ದಿಷ್ಟ ಸಾಮಾಜಿಕ ಶತ್ರುವನ್ನು ಗುರುತಿಸಿಕೊಳ್ಳುವ ಸಿದ್ಧಾಂತ ಸುಲಭವಾಗಿ ಸಂವೇದನಾ ಶೂನ್ಯವಾಗುವುದಷ್ಟೇ ಅಲ್ಲ ಕ್ರಮೇಣ ಆಕ್ರಮಣಕಾರಿಯೂ ಆಗುವುದುಂಟು. ಇನ್ನೊಂದೆಡೆ ಲೇಖಕರು ಜಾತಿ-ಜಾತಿಗಳ ನಡುವೆ ನಡೆಯಬಹುದಾದ ಅಂತಹುದೊಂದು ಸಂಭವನೀಯ ಹಿಂಸಾಚಾರದ ಕನಸು ಕಾಣುವರಾದರೂ[1] ಅವರ ಕವಿಸಹಜವಾದ ಮಾನವಪ್ರೀತಿ ಅಂತಹ ಚಳವಳಿಯಿಂದ ವಿಮುಖವಾಗಲು ಬಯಸುತ್ತದೆ. ಬದಲಿಗೆ ದಲಿತರಿಗೂ ಹಾಗೆಯೇ ಕಂದಾಚಾರದ ಬ್ರಾಹ್ಮಣರಿಗೂ ಸಮಾನವಾದ ಅನುಕಂಪ ತೋರಿಸುತ್ತದೆ. ವಿಚಿತ್ರವೆಂದರೆ ಈ ಭೂತದಯೆಯೇ ಸಾಮಾಜಿಕವಾಗಿ ಕ್ರಿಯಾಶೀಲರಾಗಲು ಬಯಸುವ ಅತ್ಯಂತ ಮಾನವೀಯ ಮನಸ್ಸುಗಳನ್ನು ಒಂದು ಹಂತದಲ್ಲಿ ನಿಷ್ಕ್ರಿಯಗೊಳಿಸಿಬಿಡುತ್ತದೇನೋ. ಏಕೆಂದರೆ ರಷ್ಯಾದಲ್ಲೂ ಹೀಗೆಯೇ ಆಯಿತು. ಅತೀವವಾದ ಮಾನವ ಪ್ರೀತಿ ಹೊಂದಿದ್ದ ಲೆನಿನ್ ಸಹ ಒಂದು ಹಂತದಲ್ಲಿ ಕೆಲವು ಕಠೋರವಾದ ಕ್ರಮಗಳನ್ನು ಅನುಷ್ಠಾನಗೊಳಿಸಲಾರದೆ ಹಿಂಜರಿದ. ತತ್ಪರಿಣಾಮವಾಗಿ ಕ್ರೂರಿಗಳ ಕುತಂತ್ರಕ್ಕೆ ಬಲಿಯಾಗಿ ಅವಸಾನವಾಗಿಹೋದ. ಮಹಾ ಮೇಧಾವಿಯಾಗಿದ್ದ ಟ್ರಾಟ್ಸ್ಕಿಯೂ ಸ್ಟಾಲಿನ್‌ನ ಕೈಲಿ ನಿಗೂಢವಾಗಿ ಹತ್ಯೆಯಾದ. ಇದೆಲ್ಲದರ ಪರಿಣಾಮವಾಗಿ ಕಮ್ಯುನಿಸಂನ ತತ್ವಗಳು ಸುಲಭವಾಗಿ ಜೋಸೆಫ್ ಸ್ಟಾಲಿನ್‌ನಂತಹ ಕ್ರೂರಿಯ ಮತ್ತು ಅವಿಚಾರಿಯ ಕೈಸೇರಿ ಹೊಲಬುಗೆಟ್ಟಿತು. ಮಾನವ ಪ್ರೀತಿಯ ಗೈರುಹಾಜರಿಯಲ್ಲಿ ಒಂದು ಉದಾತ್ತ ಮೌಲ್ಯ ಮತ್ತು ಸಮಸ್ಯಾ ಕೇಂದ್ರಿತ ಚಿಂತನೆ ಹೇಗೆ ಮನುಷ್ಯ ಜಾತಿಯ ಮೇಲೆರಗುವ ಶಾಪವಾಗಿ ಪರಿಣಮಿಸುತ್ತದೆ

---

1 ಆಕರ: ವಿಚಾರ ಸಾಹಿತ್ಯ ೨. ಮಾನವೀಯತೆ ಅಂತಾರಲ್ಲಾ ಅದರ ಬಗ್ಗೆ... ದೇವನೂರ ಮಹಾದೇವ. ಸಂ. ಡಾ. ಕೆ.ವಿ. ನಾರಾಯಣ, ಡಾ. ಕಾಳೇಗೌಡ ನಾಗವಾರ. ಪ್ರಸಾರಾಂಗ. ಬೆಂಗಳೂರು ವಿಶ್ವವಿದ್ಯಾಲಯ. ಮರುಮುದ್ರಣ ೧೯೯೯, ಪುಟ ೭೦. (ಎದೆಗೆ ಬಿದ್ದ ಅಕ್ಷರದಲ್ಲಿ ನವರ ಲೇಖನ ಸಂಕ್ಷಿಪ್ತಗೊಂಡಿದೆ).


ಎಂಬುದಕ್ಕೆ ಇವೆಲ್ಲ ನಿದರ್ಶನಗಳಾಗಿವೆ.

ಲೇಖಕರ ರೂಪಕ ಪ್ರತಿಭೆ ಇಲ್ಲಿನ ಎಲ್ಲ ಲೇಖನ ಟಿಪ್ಪಣಿಗಳಲ್ಲೂ ಲೀಲಾಜಾಲವಾಗಿ ಮೈದಾಳಿದೆಯಾದರೂ ಲೇಖಕರು ತಮ್ಮ ಆ ಸಮಸ್ತ ಪ್ರತಿಭೆಯನ್ನೂ ಉಳ್ಳವರ ಹೃದಯ ಪರಿವರ್ತನೆಗಾಗಿ ದುಡಿಸಿಕೊಂಡಿರುವುದು ಎದ್ದುತೋರುತ್ತದೆ. ಇದು ಕವಿಯಾದವನು ತನ್ನ ವಿಶಿಷ್ಟ ಪ್ರತಿಭೆಗೆ ಒಂದು ನಿರ್ದಿಷ್ಟ ಕರ್ತವ್ಯವನ್ನು ನಿಯೋಜಿಸಿದಂತೆ. ದೇವನೂರರ ಕಾಳಜಿಗಳು ಆಳದಲ್ಲಿ ನಮ್ಮ ಅನುಭಾವ ಪರಂಪರೆಯೊಂದಿಗೆ ಬೆಸೆದುಕೊಳ್ಳಲು ಬಯಸುವುದೇ ಹೀಗಾಗಲು ಕಾರಣ. ಏಕೆಂದರೆ ವೇದಕಾಲದ ಋಷಿಮುನಿಗಳ ಅರಣ್ಯವಾಸವನ್ನು ಈ ಅಸಮಾನತೆಯ ನಡುವೆ ಬಾಳಲೊಲ್ಲದೆ ಆ ಋಷಿಮುನಿಗಳು ಕಾಡು ಮೇಡುಗಳಿಗೆ ಹೋಗಿ ಸ್ವತಂತ್ರವಾಗಿ ಜೀವಿಸಲಾರಂಭಿಸಿದರು ಎಂದು ಅವರು ವ್ಯಾಖ್ಯಾನಿಸುತ್ತಾರೆ. ತಮ್ಮ ದ್ವಂದ್ವವನ್ನು ನಿರ್ವಚಿಸಿಕೊಳ್ಳುತ್ತ ಅದಿಪುರಾಣದಲ್ಲಿ ಬರುವ ಮಹಾರಸಿಕನಾದ ದೊರೆಯು ಕನ್ನಡಿಯಲ್ಲಿ ತನ್ನ ಬಿಳಿಗೂದಲನ್ನು ಕಂಡು ವಿರಕ್ತಿ ಹೊಂದಿದ್ದನ್ನು ಮತ್ತು ಮಹಾತಪಸ್ವಿಯೊಬ್ಬನು ನದಿಯಲ್ಲಿ ಅಜ್ಞಾತ ಚೆಲುವೆಯೊಬ್ಬಳ ಕೂದಲನ್ನು ಕಂಡು ವ್ಯಾಮೋಹವಶನಾದುದನ್ನು ಅವರು ತಾದಾತ್ಮ್ಯದಿಂದ ನೆನೆಯುತ್ತಾರೆ. ಅನುಭಾವದೊಂದಿಗೆ ಬೆಸೆದುಕೊಳ್ಳಲು ಹಂಬಲಿಸುವ ಎಲ್ಲ ಚಿಂತನೆಗಳೂ ಕೊನೆಗೆ ಹೀಗೆಯೇ ದ್ವಂದ್ವಗಳ ನಡುವೆ ನವೆಯುತ್ತವೆ. ಅನುಭಾವದ ಕಡೆಗಿನ ಸೆಳೆತ ಸಾಹಿತಿಯಾದವನಲ್ಲಿ ಅನಿವಾರ್ಯವಾಗಿ ಒಂದು ಬಗೆಯ ನಿಷ್ಕ್ರಿಯ ಸ್ಥಿತಿಯನ್ನು ಮತ್ತು ಆತ್ಮರತಿಯನ್ನು ಉಂಟುಮಾಡುತ್ತದೆ. ಅದ್ದರಿಂದಲೇ ಲಂಕೇಶ್‌ರಂಥವರು ಪ್ರಾರಂಭದಿಂದಲೂ ವೇದಾಂತದಿಂದ ಮೊದಲ್ಗೊಂಡು, ಜಾನಪದವರೆಗಿನ ನಮ್ಮ ಸಮಸ್ತ ಅನುಭಾವ ಪರಂಪರೆಯನ್ನು – ಅದು ಎಷ್ಟೇ ಉದಾತ್ತವಾಗಿದ್ದರೂ - ಸಾರಾಸಗಟಾಗಿ ನಿರ್ಲಕ್ಷಿಸುತ್ತ ಬಂದುದು. ಯಾರಾದರೂ ಅವರೆದುರು ಅನುಭಾವದ ವಿಷಯವನ್ನು ಎತ್ತುತ್ತಿದ್ದಂತೆಯೇ ಸಿಡಿಮಿಡಿ ಗೊಳ್ಳುತ್ತಿದ್ದರಂತೆ. ಅಡಿಗರೊಂದಿಗೆ ಅವರಿಗೆ ಅಭಿಪ್ರಾಯಭೇದಗಳಿದ್ದುದೂ ಮುಖ್ಯವಾಗಿ ಈ ನೆಲೆಗಳಲ್ಲಿಯೇ. ಏಕೆಂದರೆ ಅನುಭಾವವು ವ್ಯಕ್ತಿಗೆ -ಅದ್ವೈತದ ಪರಿಭಾಷೆಯಲ್ಲಿ ನುಡಿಯುವುದಾದರೆ- ನೈಷ್ಕರ್ಮ್ಯ ಸಿದ್ಧಿ ಉಂಟುಮಾಡುತ್ತದೆ.

ಅನುಭಾವದ ಸೆಳೆತವನ್ನು 'ಕೃತಕ ದಾಳಿ'* ಎಂದು ವ್ಯಾಖ್ಯಾನಿಸುವ ಮತ್ತು ಅದನ್ನು ಕುರಿತು ತುರೀಯದ ತವಕವನೇನೆಂಬೆನಯ್ಯಾ!"[2] ಎಂದು ಸೋಜಿಗಪಡುವ ಅಲ್ಲಮನಲ್ಲೋ ಇಂತಹ ನೈತಿಕ ದ್ವಂದ್ವವನ್ನು ಮತ್ತು ನೈಷ್ಕರ್ಮ್ಯ ಸಿದ್ಧಿಯನ್ನು ೧೨ನೆಯ ಶತಮಾನದ ಶರಣರಲ್ಲಿ ಕಂಡಿದ್ದಿರಬೇಕು. ಬಸವಣ್ಣ ಪ್ರಾರಂಭಿಸಿದ ಚಳವಳಿ ನಿಷ್ಕ್ರಿಯಗೊಳ್ಳಲು ಬಹುಶಃ ಅವನ ತೇಲಲೀಯದ ಮುಳುಗಲೀಯದ ಇದೇ ಬಗೆಯ ದ್ವಂದ್ವಮಯ ಸೆಳೆತ ಕಾರಣವಿರಬಹುದು. ಒಟ್ಟಿನಲ್ಲಿ ತಮ್ಮ ಪ್ರತಿಭಾಶಕ್ತಿಯಿಂದ ಒಳಜಗತ್ತಿನಲ್ಲಿ ಬೆಳಕಿನ ಕಿಡಿ ಹೊತ್ತಿಸಿ ಅದರ ಕಾವು ಹೊರಜಗತ್ತಿನವರೆಗೂ ಪಸರಿಸುವ ನಿರೀಕ್ಷೆಯೊಂದಿಗೆ ಚಿರಕಾಲ ಕಾಯುವುದೇ ಸಾಮಾಜಿಕ ಕಳಕಳಿಯುಳ್ಳ ಎಲ್ಲ ಕವಿ, ಕಲಾವಿದರ ಮತ್ತು ಅನುಭಾವಿಗಳ ಹಿರಿಮೆ ಮತ್ತು ಮಿತಿ ಎನಿಸುತ್ತದೆ.

ನಂ. ೧೯೯, ಟೀಚರ್ಸ್ ಕಾಲೋನಿ, ಕೋರಮಂಗಲ,
ಬೆಂಗಳೂರು ೫೬೦ ೦೩೪ ದೂರವಾಣಿ: ೦೮೦-೨೫೫೩೫೫೦೦

2 ಅಲ್ಲಮನ ವಚನ ಚಂದ್ರಿಕೆ, ವಚನ ಸಂ. ೬೦೧, ಸಂ. ಎಲ್. ಬಸವರಾಜು, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೧



ಎಂ. ಕೃಷ್ಣಮೂರ್ತಿ

ಇತ್ತೀಚಿನ ಕನ್ನಡ ಪುಸ್ತಕಲೋಕ ಬೇಕಾದ್ದೆಷ್ಟು, ಬೇಡದ್ದೆಷ್ಟು?

ಗ್ರಂಥ ಎಂಬುದಕ್ಕೆ ಪುಸ್ತಕ, ಹೊತ್ತಿಗೆ ಎಂಬ ಪದಗಳು ಬಳಕೆಯಲ್ಲಿವೆ. ಪುಸ್ತಕದ ತದ್ಭವ ಹೊತ್ತಿಗೆ. ಸಾಮಾನ್ಯವಾಗಿ, ದೊಡ್ಡ ಆಕಾರದ ಪ್ರಕಟಣೆಗಳನ್ನು ಗ್ರಂಥ ಎಂದು, ಸಣ್ಣ ಆಕಾರದ ಪ್ರಕಟಣೆಗಳನ್ನು ಪುಸ್ತಕ ಎಂದು ಕರೆಯುವುದುಂಟು. ಸಂಸ್ಕೃತದಲ್ಲಿ 'ಗ್ರಥ್' ಎಂದರೆ ಕಟ್ಟುವುದು ಅಥವಾ ಗಂಟು ಹಾಕುವುದು. ಆದ್ದರಿಂದ ಗ್ರಂಥ, ಗ್ರಂಥಿ ಇಂತಹ ಪದಗಳು ಹುಟ್ಟಿಕೊಂಡಿವೆ. ತಾಳೆಯ ಗರಿಗಳ ಮೇಲೆ ಅಥವಾ ತಾಮ್ರದ ಹಾಳೆಗಳ ಮೇಲೆ ಬರೆದು ಅವುಗಳನ್ನು ಪೋಣಿಸಿ ಗಂಟು ಹಾಕಿ ಇಡುವುದರಿಂದ ಅವುಗಳಿಗೆ ಗ್ರಂಥ ಎಂದು ಹೆಸರಾಗಿದೆ. ಆದರೆ ಗ್ರಂಥಗಳನ್ನೊಳಗೊಂಡಂತೆ ಎಲ್ಲಾ ಬಗೆಯ ಪ್ರಕಟಣೆಗಳನ್ನು ಪುಸ್ತಕ ಎಂದು ಕರೆಯುವುದುಂಟು.

ಮನುಷ್ಯನ ಜೀವನದಲ್ಲಿ ಪುಸ್ತಕಗಳ ಪಾತ್ರ ಮಹತ್ವದ್ದು. ವರ್ಷಗಳಿಂದ ವರ್ಷಕ್ಕೆ ಮನುಷ್ಯ ತಾನು ಕಂಡುಕೊಂಡ ಅನುಭವದಿಂದ, ತನ್ನ ಆಲೋಚನೆಯಿಂದ, ವಿವೇಚನೆಯಿಂದ ಸಂಪಾದಿಸಿದ ತಿಳುವಳಿಕೆಯನ್ನು ಬರವಣಿಗೆಯ ಮೂಲಕ ಸಂಗ್ರಹಿಸುತ್ತಾ ಬಂದಿದ್ದಾನೆ. ಮನುಕುಲದ ಮುನ್ನಡೆಯ ದೃಷ್ಟಿಯಿಂದ ಅಸಾಧಾರಣ ವಿಷಯಗಳು ತಲೆಮಾರುಗಳಿಂದ ತಲೆಮಾರುಗಳಿಗೆ ಸಾಗಿ ಬಂದು ಬಗೆಬಗೆಯ ಪುಸ್ತಕಗಳ ರೂಪದಲ್ಲಿ ಮೈವೆತ್ತಿನಿಂದು ನಮ್ಮ ಬದುಕಿನ ಹಾದಿಯಲ್ಲಿ ದಾರಿದೀಪಗಳಾಗಿವೆ.

ಕ್ಲಾರೆನ್ಸ್ ಡೇ ಎಂಬ ವಿದ್ವಾಂಸ ಪುಸ್ತಕದ ಬಗ್ಗೆ ಹೀಗೆ ಹೇಳುತ್ತಾನೆ : 'ಭಯಂಕರವಾದ ಪರ್ವತಗಳು ನುಚ್ಚುನೂರಾಗುತ್ತವೆ, ಸಾಮ್ರಾಜ್ಯಗಳು ತಲೆ ಎತ್ತಿ ಮರೆಯಾಗುತ್ತವೆ, ನಾಗರಿಕತೆ ಮಿಂಚಿ ಮಾಯವಾಗುತ್ತದೆ, ಆಧಾರ ಗ್ರಂಥಗಳು ಕಾಲಗರ್ಭದಲ್ಲಿ ನಡೆದುದನ್ನು ಹೊಚ್ಚ ಹೊಸದಾಗಿ ನಮಗೆ ತಿಳಿಯಪಡಿಸುತ್ತವೆ. ಕಾಲಕಾರ್ಯ ಪದತಲದಲ್ಲಿ ನುಚ್ಚುನೂರಾಗಿ ಹೋದ ಹೃದಯಾಂತರಾಳವನ್ನು ಅನಂತಕಾಲ ಬಿಚ್ಚಿ ತೋರಿಸಬಲ್ಲ ಅಮರಜೀವಿಗಳೆಂದರೆ ಪುಸ್ತಕಗಳು.'

ಬರಹಗಾರ ಅಥವಾ ಲೇಖಕ, ಪ್ರಕಾಶಕ, ವಿತರಕ ಅಥವಾ ಮಾರಾಟಗಾರ, ಓದುಗ – ಈ ನಾಲ್ವರು ಪುಸ್ತಕ ಲೋಕದ ಆಧಾರ ಸ್ತಂಭಗಳು. ಜನಸಂಖ್ಯೆ ಜಾಸ್ತಿಯಾಗಿದೆ, ಆದರೆ ಓದುಗರ ಸಂಖ್ಯೆ

ಜಾಸ್ತಿಯಾಗಿಲ್ಲ. ಹೊಸ ಓದುಗರು ಬರ್ತಾಯಿಲ್ಲ. ಆದರೆ ವಿಶೇಷವೆಂದರೆ ಪುಸ್ತಕಗಳ ಪ್ರಕಟಣೆಯ ಸಂಖ್ಯೆ ವರ್ಷದಿಂದ ವರ್ಷಕ್ಕೆ ಆಶ್ಚರ್ಯವಾಗುವ ರೀತಿಯಲ್ಲಿ ಹೆಚ್ಚಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ವರ್ಷಕ್ಕೆ ೬೦೦೦ ಪುಸ್ತಕಗಳನ್ನು ಗ್ರಂಥಾಲಯಗಳಲ್ಲಿ ನೋಂದಾಯಿಸುತ್ತಿದ್ದಾರೆ. ನೋಂದಾಯಿಸದೇ ಇರುವ ಪುಸ್ತಕಗಳೂ ಸೇರಿದರೆ ಸುಮಾರು ೭೦೦೦ಕ್ಕೆ ದಾಟುತ್ತದೆ. ಸಿನಿಮಾ, ಟಿ.ವಿ., ಕಂಪ್ಯೂಟರ್, ಅಂತರ್‌ಜಾಲಗಳ ಭರಾಟೆಗಳ ನಡುವೆಯೂ ಕನ್ನಡದಲ್ಲಿ ಪುಸ್ತಕ ಲೋಕ ವರ್ಷದಿಂದ ವರ್ಷಕ್ಕೆ ವಿಸ್ತರಿಸುತ್ತಲೇ ಇದೆ. ಟಿ.ವಿ., ರೇಡಿಯೊ(FM) ಬಂದ ಮೇಲೆ ಪುಸ್ತಕ ಓದುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಒಂದು ಕಾಲದಲ್ಲಿ ಕಥೆ, ಕಾದಂಬರಿಗಳನ್ನು ಓದುತ್ತಿದ್ದ ನಮ್ಮ ಹೆಣ್ಣುಮಕ್ಕಳು ಹಾಗೂ ಕಥೆ ಪುಸ್ತಕ, ಕಾಮಿಕ್ಸ್ ಪುಸ್ತಕವನ್ನು ಓದುತ್ತಿದ್ದ ಮಕ್ಕಳು - ದೂರದರ್ಶನಗಳಲ್ಲಿ ಪ್ರಸಾರವಾಗುವ ವಿವಿಧ ಚ್ಯಾನೆಲ್‌ಗಳ ಕಡೆ ಆಕರ್ಷಿತರಾಗುತ್ತಿದ್ದಾರೆ. ಇನ್ನು ಕಂಪ್ಯೂಟರ್, ಇಂಟರ್‌ನೆಟ್, ಐ-ಪಾಡ್, ನೋಟ್‌ಪ್ಯಾಡ್, ಟ್ಯಾಬ್ ಮತ್ತು ವಿವಿಧ ಮೊಬೈಲ್‌ಗಳು ಕನ್ನಡ ಪುಸ್ತಕಲೋಕಕ್ಕೆ ಆತಂಕವನ್ನುಂಟುಮಾಡುತ್ತಿವೆ. ಟಿ.ವಿ. ಬಂದಮೇಲೆ ಓದುವ ಅಭಿರುಚಿ ಕಡಿಮೆಯಾಗುತ್ತಿದೆ. ಆದರೆ ಪುಸ್ತಕ ಓದಿದಾಗ ಸಿಗುವ ತೃಪ್ತಿ ಟಿ.ವಿ. ನೋಡಿದಾಗ ಸಿಗುವುದಿಲ್ಲ, ಅದು ಕಾಲ್ಪನಿಕ. ಆದರೆ ಇದು ಅರಗಿಸಿಕೊಳ್ಳಬಹುದಾದ ಸತ್ವಭರಿತ ಆಹಾರ. ಹಾಗಾಗಿ ಓದು ಒಳ್ಳೆಯ ಹವ್ಯಾಸ. ನಾವು ಓದಿ ಬೇರೆಯವರನ್ನು ಓದುವಂತೆ ಪ್ರೇರೇಪಿಸಬೇಕು. ಓದುವುದು ಮನುಷ್ಯನ ಅಂತರಂಗದ ಅವಶ್ಯಕತೆಯಾಗಿದೆ, ಓದುವ ಸುಖಕ್ಕೆ ಸಾಟಿ ಬೇರೆ ಯಾವುದೂ ಇಲ್ಲ. ಅದು ನಮ್ಮ ಏಕಾಂತತೆಯನ್ನು, ಧ್ಯಾನವನ್ನು ಏಕಕಾಲಕ್ಕೆ ಉಳಿಸಿಕೊಳ್ಳುವ ಸಾಧನ. ಪುಸ್ತಕ ಓದಿಗೆ ಯಾವ ಕಟ್ಟುಪಾಡುಗಳೂ ಇಲ್ಲ. ಕೂತು ಓದಬಹುದು, ಮಲಗಿ ಓದಬಹುದು, ಪಯಣ ಮಾಡುತ್ತ ಓದಬಹುದು, ಒಮ್ಮೆ ಓದಿದ ಪುಟಗಳನ್ನು ಮತ್ತೆ ಓದಬಹುದು, ಬೇಕೆಂದಾಗ ಬೇಕಾದ ಪುಟಗಳನ್ನು ಓದಬಹುದು. ಈ ಸಾಧ್ಯತೆಯನ್ನು ಬೇರಾವ ಮಾಧ್ಯಮಗಳೂ ಒದಗಿಸಲಾರವು. ಇತರ ಜ್ಞಾನ ಸಾಧನಗಳಿಗೂ ಪುಸ್ತಕಗಳಿಗೂ ಇರುವ ಒಂದು ಮುಖ್ಯ ವ್ಯತ್ಯಾಸವೆಂದರೆ ಅವು ಒದಗಿಸುವ ವೈಯಕ್ತಿಕತೆ ಹಾಗೂ ಏಕಾಂತ ಸುಖ ಇತರ ಮಾಧ್ಯಮಗಳಿಗೆ ಇಲ್ಲ. ಇವುಗಳನ್ನು ವೈಯಕ್ತಿಕವಾಗಿ ಗ್ರಹಿಸಿ ಆನಂದಪಡುವುದಕ್ಕಿಂತ ಸಾಮೂಹಿಕವಾಗಿ ಆಸ್ವಾದಿಸುವವರು, ಆರಾಧಿಸುವವರು ಹೆಚ್ಚು ಮಂದಿ. ಆದರೆ ಪುಸ್ತಕ ಹಾಗಲ್ಲ. ಇತ್ತೀಚಿನ ದಿನಗಳಲ್ಲಿ ಕನ್ನಡ ಅಧ್ಯಾಪಕರಲ್ಲೂ ಪುಸ್ತಕ ಓದುವ ಆಸಕ್ತಿ ಅಭಿರುಚಿಗಳು ಕ್ಷೀಣಿಸುತ್ತಿವೆ. ವಿದ್ಯಾರ್ಥಿಗಳ ಬದುಕನ್ನು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಲು ಸಾಹಿತ್ಯ ಕೃತಿಗಳನ್ನು ಓದಬೇಕಾಗಿರುವುದರಿಂದ ಅಧ್ಯಾಪಕರು ತಮ್ಮ ಪಾತ್ರವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗಿದೆ. ತಾವು ಓದಿ ವಿದ್ಯಾರ್ಥಿಗಳನ್ನು ಓದುವಂತೆ ಪ್ರೇರೇಪಿಸಬೇಕು. ಇದಲ್ಲದೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಗೆದ್ದ ವಿದ್ಯಾರ್ಥಿಗಳಿಗೆ ಪುಸ್ತಕವನ್ನು ಉಡುಗೊರೆಯಾಗಿ ಕೊಟ್ಟು ಅವರನ್ನು ಹುರಿದುಂಬಿಸಬೇಕಾಗಿದೆ. ಗ್ರಂಥಗಳು ಇಲ್ಲದೇ ಹೋದರೆ ದೇವರು ಮುನಿಯಾಗುವನು, ನ್ಯಾಯ ದೇವತೆ ನಿದ್ರಿಸುವಳು, ಸೃಷ್ಟಿ ವಿಜ್ಞಾನ ಸ್ಥಗಿತಗೊಳ್ಳುವುದು, ತತ್ವಜ್ಞಾನ ಕುಂಟುವುದು, ಅಕ್ಷರಗಳು ಅರ್ಥಹೀನವಾಗುವುವು. ಸಚರಾಚರಗಳೆಲ್ಲ ಕತ್ತಲೆಯಲ್ಲಿ ಅಡಗುವುವು. ಅಂದರೆ ಮನುಷ್ಯನ ದೈನಂದಿನ ಬೌದ್ಧಿಕ ವ್ಯಾಪಾರಗಳೆಲ್ಲ ಶೂನ್ಯವಾಗುವುವು ಎಂಬುದು ಉತ್ಪ್ರೇಕ್ಷೆಯ ಮಾತಲ್ಲ ಎಂದು ಬಾರ್ತೋಲಿನಿ ಎಂಬಾತನು ಹೇಳಿದ್ದಾನೆ.

ಪ್ರಸ್ತುತ ಪ್ರಕಾಶನ ಮಾಡುವುದು ತುಂಬಾ ಸುಲಭವಾದ ಸಂಗತಿಯೇನಲ್ಲ. ಇತ್ತೀಚಿನ ದಿನಗಳಲ್ಲಿ ಮುದ್ರಣಕ್ಕೆ ಬೇಕಾದಷ್ಟು ಹಣವಿದ್ದರೆ ಪ್ರಕಾಶಕರಾಗಬಹುದು. ಆ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಸರಬರಾಜು ಮಾಡಿ ಲಾಭ ಮಾಡಬಹುದು. ಪ್ರಕಾಶನ ಒಂದು ಉದ್ಯಮದ ಜೊತೆಗೆ ಅದು ಸಾಹಿತ್ಯ ಪರಿಚಾರಕ ಕೂಡ. ಬಹುತೇಕ ಪ್ರಕಾಶಕರಿಗೆ ಲೇಖಕರೇ ಮುದ್ರಣವೆಚ್ಚ ಕೊಡುವ ಪರಿಪಾಟ ಬೆಳೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ ಪುಸ್ತಕಗಳನ್ನು ಸರಿಯಾಗಿ ಕರಡು ತಿದ್ದಿರುವುದಿಲ್ಲ, ಬಹಳಷ್ಟು ತಪ್ಪುಗಳು ಉಳಿದುಕೊಂಡಿರುತ್ತವೆ. ಪ್ರಕಾಶಕರು ಲೇಖಕರಿಗೆ ಕರಡು ತಿದ್ದುವ ಜವಾಬ್ದಾರಿಯನ್ನು ವರ್ಗಾಯಿಸುತ್ತಾರೆ. ಎಷ್ಟೋ ಹೊಸ ಲೇಖಕರಿಗೆ ಕರಡು ತಿದ್ದಲು ಬರುವುದಿಲ್ಲ. ಕರಡು ತಿದ್ದುವುದಕ್ಕೆ ಬೇರೆಯದೇ ಆದ ವಿಶೇಷ ಪರಿಣತಿ ಬೇಕಾಗುತ್ತದೆ. ಪುಸ್ತಕ ಪ್ರಕಾಶನ ಕೇವಲ ವ್ಯಾಪಾರವಾಗಬಾರದು. ಅದರ ಹಿಂದೆ ಶುದ್ಧ ಅಭಿರುಚಿ, ಸಾಮಾಜಿಕ ಸ್ವಾಸ್ಥ್ಯದಂತಹ ಜವಾಬ್ದಾರಿಗಳು ಇರುತ್ತವೆ.

ಗ್ರಂಥಾಲಯದ ಸಗಟು ಖರೀದಿ (Bulk Purchase) ಪುಸ್ತಕೋದ್ಯಮಕ್ಕೆ ನೆರವಾಗುತ್ತಿದೆ. ಆದರೆ ಇದು ವಾಸ್ತವವಾಗಿ ಪುಸ್ತಕ ಸಂಸ್ಕೃತಿಗೆ ಅಪಕಾರವಾಗಿದೆ. ಬಹುಮಟ್ಟಿಗೆ ಪ್ರಕಾಶಕರು, ಪುಸ್ತಕ ಮಾರಾಟಗಾರರು ಪುಸ್ತಕಗಳನ್ನು ಓದುಗರಿಗಾಗಿ ಮುದ್ರಿಸುವ ಪ್ರಯತ್ನ ಮಾಡದೆ ಗ್ರಂಥಾಲಯಗಳಿಗೆ ತುಂಬಿ ಕೃತಾರ್ಥರಾಗುತ್ತಿದ್ದಾರೆ. ಸರ್ಕಾರದ ಸಗಟು ಖರೀದಿಯ ಮೇಲಷ್ಟೇ ಕಣ್ಣು ಇರಿಸಿ, ಲಾಭ ಮಾಡಿಕೊಳ್ಳಲು ಹೊಂಚುಹಾಕುವ ಎಷ್ಟೋ ಮಂದಿ ಗಂಭೀರವಾಗಿ ಓದಿಕೊಳ್ಳದೆ, ಚಿಂತನೆ ನಡೆಸದೆ, ರಚಿಸಿದ ಕೃತಿಯನ್ನು ಹಿರಿಯ ಬರಹಗಾರರಿಗೆ ಕೊಟ್ಟು ಪರಿಶೀಲಿಸಿಕೊಳ್ಳದೆ, ಹೊಸ ಲೇಖಕರ ಹಸ್ತಪ್ರತಿಗಳನ್ನು ಡಿ.ಟಿ.ಪಿ.ಮಾಡಿಸಿ ಸರಿಯಾಗಿ ಕರಡನ್ನೂ ತಿದ್ದದೆ ಪ್ರಕಟಿಸುತ್ತಿರುವ ಕೃತಿಗಳು ಕನ್ನಡ ಪುಸ್ತಕಲೋಕಕ್ಕೆ ಭಾರವೆನಿಸುತ್ತಿವೆ. ಮೂಗಿಗಿಂತ ಮೂಗುತಿ ಭಾರವೆನ್ನುವಂತೆ ಅಪ್ರಬುದ್ಧತೆ, ಅವಿವೇಕಗಳ ಗೊಂದಲದ ಗೂಡಾದ ಕೃತಿಗಳು ಪುಸ್ತಕ ಓದದೆಯೇ ಮುನ್ನುಡಿ ಬರೆದವರ ಕೃಪಾಕಟಾಕ್ಷದಿಂದ ಮೆರೆಯಲು ಹವಣಿಸುತ್ತಿವೆ. ಸರ್ಕಾರದ ಸಗಟು ಖರೀದಿಯ ಮೊತ್ತ ಒಂದು ಲಕ್ಷ ಅಥವಾ ಮುನ್ನೂರು ಪ್ರತಿಗಳಿಗೆ ನಿಗದಿಯಾಗಿರುವುದರಿಂದ ಒಬ್ಬನೇ ಪ್ರಕಾಶಕ ಬೇರೆಬೇರೆ ಹೆಸರುಗಳಲ್ಲಿ ಪುಸ್ತಕವನ್ನು ಪ್ರಕಟಿಸಿ, ಗ್ರಂಥಾಲಯಗಳಿಗೆ ತುಂಬಿ ಲಾಭಗಳಿಸುತ್ತಿದ್ದಾನೆ. ಇನ್ನು ಪ್ರಮುಖ ಪ್ರಕಾಶಕರು ತಮ್ಮ ಪ್ರಕಾಶನದಲ್ಲಿ ಮಾರಾಟವಾಗದೇ ಉಳಿದ ಪುಸ್ತಕಗಳನ್ನು ಮಾತ್ರ ಗ್ರಂಥಾಲಯಗಳಿಗೆ ಕೊಡುತ್ತಿದ್ದಾರೆ. ಇದರಿಂದ ಗ್ರಂಥಾಲಯಗಳಲ್ಲಿ ಒಳ್ಳೆಯ ಪುಸ್ತಕಗಳ ಅಭಾವ ಎದುರಾಗುತ್ತಿದೆ. ಗ್ರಂಥಾಲಯಗಳಿಗೆ ಸರಬರಾಜಾದ ಹೊಸ ಲೇಖಕರ ಎಷ್ಟೋ ಒಳ್ಳೆಯ ಪುಸ್ತಕಗಳು ಮಾರುಕಟ್ಟೆಗೆ ಬರುವುದೇ ಇಲ್ಲ. ಇದರಿಂದ ಓದುಗರು ಒಳ್ಳೆಯ ಪುಸ್ತಕಗಳಿಂದ ವಂಚಿತರಾಗುತ್ತಿದ್ದಾರೆ. ಉತ್ತಮ ಎನ್ನಬಹುದಾದ ಪುಸ್ತಕಗಳಿಗೆ ಪ್ರಕಾಶಕರೇ ಲಭ್ಯವಾಗದೆ ಅಂತಹವು ಕತ್ತಲಿನಲ್ಲಿ ಕೊಳೆಯುತ್ತಿವೆ. ಸರ್ಕಾರವು ಸಗಟು ಖರೀದಿಯ ಮೊತ್ತವನ್ನು ಇನ್ನಷ್ಟು ಹೆಚ್ಚಿಸಿ, ಸೂಕ್ತ ಕಡ್ಡಾಯ ನಿಯಮಗಳನ್ನು ಅಳವಡಿಸಿ ಪುಸ್ತಗಳನ್ನು ಖರೀದಿ ಮಾಡುವುದು ಸೂಕ್ತ. ಗ್ರಂಥಾಲಯಗಳಿಗೆಂದೇ ಪ್ರಕಟವಾಗುವ ಹೂರಣವಿಲ್ಲದ ಹೋಳಿಗೆಯಂತಹ ಪುಸ್ತಕಗಳನ್ನು ಉನ್ನತಮಟ್ಟದ ಸಮಿತಿಯು ಯಾವುದೇ ಆಮಿಷಗಳಿಗೆ ಒಳಗಾಗದೇ ಒಳ್ಳೆಯ ಪುಸ್ತಕಗಳನ್ನು ಮಾತ್ರ ಶಿಫಾರಸ್ಸು ಮಾಡಬೇಕು. ಗ್ರಂಥಾಲಯದ ವಿಳಂಬನೀತಿಯಿಂದಾಗಿ ಕಾಲಕಾಲಕ್ಕೆ ನಿಯತವಾಗಿ ಪುಸ್ತಕ ಆಯ್ಕೆ ಸಮಿತಿ ಸಭೆಗಳು ನಡೆಯದೆ, ಒಳ್ಳೆಯ ಪುಸ್ತಕಗಳು ಮಾರುಕಟ್ಟೆಗೆ ಬಂದು ವರ್ಷ ಕಳೆದರೂ ಗ್ರಂಥಾಲಯಗಳಲ್ಲಿ ಲಭ್ಯವಾಗದೆ ಗ್ರಂಥಾಲಯ ಓದುಗರಿಗೆ ನಿರಾಸೆಯಾಗುತ್ತಿದೆ.

ಒಂದು ಪಕ್ಷ ಪುಸ್ತಕಗಳು ಆಯ್ಕೆಯಾದರೂ ಅನುಧಾನ ಬಿಡುಗಡೆಯಾಗದೆ ಲೇಖಕರ ಅಥವಾ ಪ್ರಕಾಶಕರಿಗೆ ಹಣ ತಲುವುದರಲ್ಲಿ ಬಹಳ ವಿಳಂಬವಾಗುತ್ತಿರುವುದು ಉದಾಹರಣೆಗಳಿವೆ. ಇದರಿಂದಾಗಿ ಲೇಖಕರು ಅಥವ ಪ್ರಕಾಶಕರು ತಮ್ಮ ಪ್ರಕಟಣೆಗಳನ್ನು ಗ್ರಂಥಾಲಯ ಇಲಾಖೆಗೆ ಸಲ್ಲಿಸಲು ಹಿಂದೇಟು ಒಡೆಯುತ್ತಿರುವುದುಂಟು.

ಓದುಗರ ಆಯ್ಕೆಗಳನ್ನು ಕನ್ನಡ ಪುಸ್ತಕಗಳು ಪೂರೈಸುತ್ತಿವೆಯೊ ಅಥವಾ ಪ್ರಕಟಗೊಂಡಿರುವ ಪುಸ್ತಕಗಳಲ್ಲೇ ಕೆಲವನ್ನು ಆಯ್ಕೆಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆಯೊ ಎಂದು ನೋಡಿದರೆ ಎರಡನೇ ಅಂಶವೇ ಸದ್ಯ ಜಾರಿಯಲ್ಲಿದೆ. ಪುಸ್ತಕ ರಚನೆ ಮತ್ತು ಮುದ್ರಣ ಹಾಗೂ ಮಾರಾಟಕ್ಕಾಗಿ ಬರುತ್ತಿರುವ ಪುಸ್ತಕಗಳು ಓದುಗರ ಸಾಮಾನ್ಯ ಅಗತ್ಯಗಳೇನು, ಆಯ್ಕೆಗಳೇನು ಎಂಬುದನ್ನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ತಮ್ಮನ್ನು ಅಕ್ಷರ ಲೋಕದಲ್ಲಿ ದಾಖಲಿಸಿಕೊಳ್ಳಬೇಕು ಎಂಬ ಹಂಬಲಕ್ಕಾಗಿ, ಹೆಚ್ಚು ಪುಸ್ತಕಗಳು ಬರಲಿ ಎಂಬ ಉದ್ದೇಶಕ್ಕಾಗಿ ಬರಹಗಾರರು ಪುಸ್ತಕಗಳನ್ನು ಬರೆದರೆ, ಅವುಗಳ ಮುದ್ರಣ ಮತ್ತು ಮಾರಾಟದಿಂದ ಲಾಭ ಮಾಡಿಕೊಳ್ಳಲು ಪ್ರಕಾಶಕರು ಮತ್ತು ಮಾರಾಟಗಾರರು ಮುಂದಾಗಿದ್ದಾರೆ. ಓದುಗರು ಈ ಇಬ್ಬರ ನಡುವೆ ಸಿಕ್ಕಿ ಕಾಣದಂತೆ ಒದ್ದಾಡುತ್ತಿದ್ದಾರೆ. ಪರಿಣಾಮವಾಗಿ ಒಂದು ಕಡೆ ಬರಹಗಾರರು ಮತ್ತೊಂದು ಕಡೆ ಪ್ರಕಾಶಕರು ಹಾಗೂ ಮಾರಾಟಗಾರರು ಓದುಗರ ಆಸಕ್ತಿಯನ್ನು ಪ್ರಭಾವಿಸುತ್ತಿದ್ದಾರೆ ಮತ್ತು ನಿಯಂತ್ರಿಸುತ್ತಿದ್ದಾರೆ. ಇತ್ತೀಚಿನ ಕೆಲವು ವರುಷಗಳಲ್ಲಿ ಮಾಹಿತಿಗಳನ್ನು ಒದಗಿಸುವ ಪುಸ್ತಕಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಕಟವಾಗುತ್ತಿವೆ; ಮಾರಾಟವೂ ಆಗುತ್ತಿವೆ. ಮತ್ತೊಂದು ಕಡೆ ಸೃಜನಶೀಲ ಎಂದು ಗುರುತಿಸಲಾಗುವ ಪ್ರಕಾರದ ಪುಸ್ತಕಗಳೂ ಮುದ್ರಣವಾಗುತ್ತಿವೆ, ಮಾರಾಟವಾಗುತ್ತಿವೆ. ಇವೆರಡೂ ಓದುಗರ ಸೀಮಿತ ಅಗತ್ಯಗಳನ್ನು ಮತ್ತು ತಕ್ಷಣದ ಉದ್ದೇಶಗಳನ್ನು ತಣಿಸಲು ಇಲ್ಲವೇ ಈಡೇರಿಸಲು ಪ್ರಯತ್ನಿಸುತ್ತಿವೆ. ಆದರೆ ಪುಸ್ತಕ ಓದುವವರಿಗೆ ಅವರ ಸೃಜನಶೀಲ ಕುತೂಹಲಗಳನ್ನು ವಿಸ್ತರಿಸುವುದು ಮತ್ತು ವ್ಯವಸ್ಥೆಯು ಒಪ್ಪಿಕೊಂಡಿರುವ ಯಾಂತ್ರಿಕ ಮಾಹಿತಿಗಳನ್ನು ಕೊಡುವುದು ಮಾತ್ರವೇ ಪ್ರಧಾನ ಉದ್ದೇಶವಾಗಬಾರದು. ಓದುಗರ ದೃಷ್ಟಿಕೋನಗಳನ್ನು ಮರುರೂಪಿಸುವಂತಹ ಪುಸ್ತಕಗಳು ಬೇಕಾಗುತ್ತವೆ. ಈ ದೃಷ್ಟಿಯಿಂದ ನೋಡಿದರೆ ಈ ಪ್ರಕಾರದ ಕೆಲವು ಪುಸ್ತಕಗಳು ಪ್ರಕಟವಾಗುತ್ತಿವೆ. ಆದರೆ ಅಂತಹ ಪುಸ್ತಕಗಳ ಬಗ್ಗೆ ಚರ್ಚೆ ನಡೆಯುತ್ತಿಲ್ಲ, ಓದುಗರು ಮೌಖಿಕವಾಗಿಯಾದರೂ ಅಂತಹ ಪುಸ್ತಕಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿಲ್ಲ. ಈ ಎಲ್ಲಾ ಪರಿಣಾಮಗಳಿಂದಾಗಿ ಓದುಗರ ಲೋಕದೃಷ್ಟಿಯನ್ನು ನಿರ್ಮಾಣ ಮಾಡುವ ಇಲ್ಲವೆ ಸಮಾಜವನ್ನು ನೋಡುವ ದೃಷ್ಟಿಕೋನಗಳನ್ನು ತಿದ್ದುವ, ಅದರಲ್ಲೂ ಶೋಷಿತರ, ಅಪಮಾನಿತರ ನೆಲೆಯಿಂದ ಆಲೋಚಿಸಲು ಹಚ್ಚುವ ಪುಸ್ತಕಗಳು ನಮಗಿಂದು ಬೇಕಾಗಿವೆ. ಇಂತಹ ಪುಸ್ತಕಗಳು ಒಂದು ತಲೆಮಾರನ್ನು ಸೃಜನಶೀಲವಾಗಿಯೂ, ವೈಚಾರಿಕವಾಗಿಯೂ ಪ್ರಭಾವಿಸುತ್ತವೆ ಮತ್ತು ಸಮಾಜದ ಬಗೆಗೆ ಒಂದು ಬಗೆಯ ಎಚ್ಚರಿಕೆಯನ್ನು ಕೊಡುತ್ತವೆ.

ಬಹಳಷ್ಟು ಮಂದಿ ಕನ್ನಡ ಪುಸ್ತಕ ಕೊಳ್ಳಲು ಅಂಗಡಿಗಳಿಗೆ ಹೋದಾಗ ಪುಸ್ತಕದ ಬೆಲೆಯನ್ನು ನೋಡಿ ಇಂಗ್ಲಿಷ್ ಪುಸ್ತಕದ ಬೆಲೆಗೆ ಹೋಲಿಸುವುದುಂಟು. ಇಂಗ್ಲಿಷ್ ಪುಸ್ತಕಗಳ ಬೆಲೆ ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಪುಸ್ತಕದ ಬೆಲೆ ನಿಗದಿ ಮಾಡುವಾಗ ಪುಸ್ತಕ ಸಿದ್ಧವಾಗಲು ಆದ ಒಟ್ಟು ಖರ್ಚನ್ನು ಮುದ್ರಿಸುತ್ತಿರುವ ಪ್ರತಿಗಳ ಸಂಖ್ಯೆಯಿಂದ ಭಾಗಿಸಿ ಬಂದ ಮೊತ್ತವನ್ನು ತ್ರಿಗುಣಗೊಳಿಸಿ ಇಡುವುದು ವಾಡಿಕೆ. ಪುಸ್ತಕ ಮಾರಾಟಗಾರರಿಗೆ ಶೇಕಡ ೧/೩ ಅಥವಾ ೪೦% ವಿನಾಯಿತಿಯನ್ನು

ನೀಡಬೇಕಾಗುತ್ತದೆ. ಕೆಲವು ಸಲ ಅದಕ್ಕೂ ಹೆಚ್ಚಿಗೆ ನೀಡಬೇಕಾದ ಸಂದರ್ಭಗಳೂ ಇವೆ. ಮಾರಾಟಗಾರರು ಗ್ರಾಹಕರನ್ನು ಆಕರ್ಷಿಸಲು ೧೦-೧೫% ಅಥವಾ ಹೆಚ್ಚು ರಿಯಾಯಿತಿಯನ್ನು ನೀಡಬೇಕಾಗುತ್ತದೆ. ಪುಸ್ತಕ ಮುದ್ರಣವಾಗುವಾಗ ಡಿ.ಟಿ.ಪಿ., ಪ್ಲೇಟ್ ತಯಾರಿಕೆ, ಮುಖಪುಟ ವಿನ್ಯಾಸ, ಪಾಸಿಟಿವ್, ಮುಖಪುಟದ ಪ್ಲೇಟ್ - ಇವುಗಳ ವೆಚ್ಚ ೧೦೦೦ ಪ್ರತಿಗಳಿಗೆ ಎಷ್ಟು ಆಗುತ್ತದೋ ಅದಕ್ಕಿಂತ ಹೆಚ್ಚು ಹೆಚ್ಚು ಪ್ರತಿಗಳನ್ನು ಮುದ್ರಿಸಿದರೂ ಅಷ್ಟೇ ಇರುತ್ತದೆ. ಇಂಗ್ಲಿಷ್‌ನ ಪುಸ್ತಕಲೋಕದ ಮಾರುಕಟ್ಟೆ ಪ್ರಪಂಚವ್ಯಾಪಿ ಹರಡಿರುವುದರಿಂದ ಅವರು ಹೆಚ್ಚು ಹೆಚ್ಚು ಪ್ರತಿಗಳನ್ನು ಮುದ್ರಿಸುತ್ತಾರೆ. ಕನ್ನಡ ಪುಸ್ತಕಲೋಕವು ಕನ್ನಡಿಗರಿಗಷ್ಟೇ ಸೀಮಿತವಾಗಿರುವುದರಿಂದ ಕಡಿಮೆ ಪ್ರತಿಗಳು ಮುದ್ರಣವಾಗಿರುತ್ತವೆ. ಇದರಿಂದ ಕನ್ನಡ ಪುಸ್ತಕದ ಬೆಲೆ ಸ್ವಲ್ಪ ಹೆಚ್ಚಾಗಿರುತ್ತದೆ. ಅದರಲ್ಲೂ ಪ್ರಕಾಶಕರು ಕನ್ನಡ ಪುಸ್ತಕಗಳಿಗೆ ಆದಷ್ಟು ಕಡಿಮೆ ಬೆಲೆ ಇರಿಸಿ ಓದುಗರಿಗೆ ಉತ್ತೇಜನ ನೀಡುವುದರಿಂದ ಕನ್ನಡ ಪುಸ್ತಕ ಲೋಕ ಬೆಳೆಯುತ್ತದೆ. ಇದಲ್ಲದೆ ಸರ್ಕಾರ ಮಧ್ಯಸ್ಥಿಕೆ ವಹಿಸಿ ಕನ್ನಡ ಪುಸ್ತಕಗಳಿಗೆ ಬೇಕಾದ ಉತ್ತಮ ಕಾಗದದ ಮೇಲೆ ಇರುವ ತೆರಿಗೆಯನ್ನು ಸ್ಥಗಿತಗೊಳಿಸಿ ಕಡಿಮೆ ಬೆಲೆಯಲ್ಲಿ ಕಾಗದವನ್ನು ಸರಬರಾಜು ಮಾಡಿದರೆ ಕನ್ನಡ ಪುಸ್ತಕಗಳ ಬೆಲೆಯನ್ನು ಸುಧಾರಿಸಬಹುದು. ಈ ಅಂಶವನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಪ್ರಕಾಶಕರು ಒಗ್ಗಟ್ಟಾಗಿ ಮುಂದಾಗಬೇಕು.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಹೆಚ್ಚಾಗಿ ಬರೆಯುತ್ತಿದ್ದಾರೆ. ಅವರ ಪುಸ್ತಕಗಳ ಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿದೆ. ಅಲ್ಲಿ ಸ್ತ್ರೀ ಸಂವೇದನೆಯ ಹಲವಾರು ಮುಖಗಳನ್ನು ಕಾಣಬಹುದಾಗಿದೆ. ಅವರು ಬರೆದ ಪುಸ್ತಕಗಳ ಪ್ರಕಾಶಕರ ಅಥವಾ ಮಾರಾಟದ ಸಮಸ್ಯೆ ಉಳಿದವರಿಗಿದ್ದಂತೆ ಇವರಿಗೂ ಕೂಡ ಇದೆ. ಅವರಿಗೆ ಸಾರ್ವಜನಿಕ ಸಂಪರ್ಕ ಕಡಿಮೆ. ಇನ್ನು ಕೆಲವರ ಹಸ್ತಪ್ರತಿಗಳಿಗೆ ಪ್ರಕಾಶಕರೇ ಸಿಗದೆ ಮೂಲೆಗುಂಪಾಗಿವೆ. ಇಂಥವರನ್ನು ಪ್ರಕಾಶಕರು, ಪುಸ್ತಕ ಮಾರಾಟಗಾರರು ಪ್ರೋತ್ಸಾಹಿಸಬೇಕಾಗಿದೆ. ಬೇರೆ ಭಾಷೆಗಳಿಗೆ ಹೋಲಿಸಿದರೆ ನಿಘಂಟು, ಆರೋಗ್ಯ, ಭಾಷಾ ಕಲಿಕೆ ಪುಸ್ತಕಗಳು, ಮಕ್ಕಳ ಪುಸ್ತಕಗಳು, ತಂತ್ರಜ್ಞಾನ, ವಿಜ್ಞಾನ, ಗಣಿತ, ಭೌತಶಾಸ್ತ್ರ ಸಿನಿಮಾ, ಕಂಪ್ಯೂಟರ್ ಮತ್ತು ಇತರ ಪುಸ್ತಕಗಳು ಬೆರಳೆಣಿಕೆಯಷ್ಟೇ ಬರುತ್ತಿವೆ. ಇದರ ಬಗ್ಗೆಯೂ ಪ್ರಕಾಶಕರು ಚಿಂತಿಸಿ ಲೇಖಕರಿಂದ ಹೆಚ್ಚುಹೆಚ್ಚು ಪುಸ್ತಕಗಳನ್ನು ಬರೆಸುವಂತಾಗಬೇಕು. ಇಂಗ್ಲಿಷಿನಲ್ಲಿ ಬರುವಂತಹ ಮಕ್ಕಳ ಪುಸ್ತಕಗಳು ಬಹಳ ಆಕರ್ಷಕವಾಗಿರುತ್ತವೆ. ಉದಾಹರಣೆಗೆ ಪ್ರಾಣಿಗಳ ವಿಷಯದ ಪುಸ್ತಕಗಳಲ್ಲಿ ಒಂದು ಬದಿಯಲ್ಲಿ ಪ್ರಾಣಿಯ ಚಿತ್ರವನ್ನು ಮತ್ತು ವಿಷಯವನ್ನು ಬಹುವರ್ಣದಲ್ಲಿ ಮುದ್ರಿಸಿ ಇನ್ನೊಂದು ಬದಿಯಲ್ಲಿ ಒಂದು ಗುಂಡಿಯನ್ನು ಕೊಟ್ಟಿರುತ್ತಾರೆ. ಆ ಗುಂಡಿಯನ್ನು ಒತ್ತಿದರೆ ಆ ಪ್ರಾಣಿಯ ಕೂಗಿನ ಧ್ವನಿಯೋ, ಆ ಪ್ರಾಣಿಯ ವಿಷಯವೋ ಹೊರಹೊಮ್ಮುತ್ತದೆ. ಇದರಿಂದ ಮಕ್ಕಳು ಇಂತಹ ಪುಸ್ತಕಗಳ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ನಮ್ಮ ಕನ್ನಡ ಪುಸ್ತಕಲೋಕದಲ್ಲೂ ಇಂಥ ಪುಸ್ತಕಗಳ ಅವಶ್ಯಕತೆ ಇದೆ. ಇಂತಹ ಕನ್ನಡ ಪುಸ್ತಕಗಳು ಇಂಗ್ಲಿಷ್ ಪುಸ್ತಕಗಳಿಗೆ ಹೋಲಿಸಿದರೆ ಸ್ವಲ್ಪ ದುಬಾರಿ ಎನ್ನಿಸುತ್ತವೆ. ಆದರೂ ಪೋಷಕರು ಮಕ್ಕಳಿಗೆ ಇಂತಹ ಕನ್ನಡ ಪುಸ್ತಕಗಳನ್ನೇ ಕೊಡಿಸಿ ಕನ್ನಡ ಪುಸ್ತಕಲೋಕವನ್ನು ಪ್ರೋತ್ಸಾಹಿಸಬೇಕಾಗಿದೆ.

ಕನ್ನಡ ಪುಸ್ತಕಗಳು ಪ್ರಮಾಣದಲ್ಲಿ ಬೃಹತ್ ಗಾತ್ರದಲ್ಲಿ ಬರುತ್ತಿವೆ. ಆದರೆ ಅವುಗಳ ಓದಿನ ಪರಿಣಾಮ ಓದುಗ ವಲಯದಲ್ಲೊ, ಸಾಮಾಜಿಕ ಜೀವನದಲ್ಲೊ ಏನಾಗಿದೆ ಎಂದು ಕೇಳಿದರೆ ಏನೂ ಆಗಿಲ್ಲವೆಂದೇ ಹೇಳಬೇಕು. ಓದುಗರ ದೃಷ್ಟಿಕೋನದ ಮೇಲಾಗಲಿ, ಅವರ ಗ್ರಹಿಕೆಯ

ಮೇಲಾಗಲಿ ಯಾವುದೆ ಪರಿಣಾಮ ಬೀರದ ಪುಸ್ತಕಗಳ ಅಗತ್ಯ ಇದೆಯೇ ಎಂಬ ಮುಖ್ಯವಾದ ಪ್ರಶ್ನೆಯನ್ನು ಕೇಳಬೇಕಾಗಿದೆ. ಕೇವಲ ಮಾಹಿತಿಗಳನ್ನೊ, ಅಂಕಿಅಂಶಗಳನ್ನೊ ಒದಗಿಸುವುದು ಮಾತ್ರವೇ ಪುಸ್ತಕಗಳ ಉದ್ದೇಶ ಎನ್ನುವುದಾದರೆ ಆ ಮಾತು ಬೇರೆ. ಆದರೆ ಪುಸ್ತಕಗಳು ಒಂದು ಸಮಾಜದ ಬೌದ್ಧಿಕ ಸಂಪತ್ತೇ ಹೊರತು, ಅವುಗಳ ಮಾರಾಟದಿಂದ ಬರುವ ಹಣಕಾಸಿನ ಲಾಭವೇ ಸಂಪತ್ತಲ್ಲ. ಆದರೆ ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟ ವ್ಯಾಪಾರೀ ದಾರಿಯನ್ನು ಹಿಡಿದು, ಅದೊಂದು ಉದ್ಯಮವಾಗಿರುವುದು ಬಹಳ ಹಳೆಯ ಮಾತು.

ಪುಸ್ತಕಗಳು ಬರೆದವರ ಹೆಸರನ್ನು ಖ್ಯಾತಿಗೊಳಿಸಬೇಕೊ, ಅದು ಭಾರೀ ಪ್ರಮಾಣದ ಹಣಕಾಸಿನ ಲಾಭವನ್ನು ತರಬೇಕೊ ಇಲ್ಲವೆ ಓದುಗರ ಬೌದ್ಧಿಕ, ವೈಚಾರಿಕ, ತಾತ್ವಿಕ ಹಾಗೂ ಭಾವನಾತ್ಮಕ ಅಗತ್ಯಗಳನ್ನು ಈಡೇರಿಸಬೇಕೊ. ಓದುಗರ ನೆಲೆಯಲ್ಲಿ ನಿಂತು ಹೇಳುವುದಾದರೆ ಪುಸ್ತಕಗಳು ಯಾವುದೇ ನಾಡಿನ ಬೌದ್ಧಿಕ ಸಂಪನ್ಮೂಲಗಳು ಹಾಗೂ ಬೌದ್ಧಿಕ ಸಂಪತ್ತು. ಈ ಬಗೆಯ ಪುಸ್ತಕಗಳು ಕನ್ನಡದಲ್ಲಿ ಬರಬೇಕು. ಇಂತಹ ಪ್ರಕಾರದಲ್ಲಿ ಬಂದಿರುವ ಪುಸ್ತಕಗಳು ಪ್ರಚಾರಕ್ಕೆ ಬರಬೇಕು.

ಕನ್ನಡ ಪುಸ್ತಕ ಲೋಕದಲ್ಲಿ ಪುಸ್ತಕ ಮುದ್ರಣ ಮತ್ತು ಅವುಗಳ ಮಾರಾಟ ಮುಂಚೂಣಿಯಲ್ಲಿದೆ. ಓದುಗರು ಕೊನೆಯ ಸ್ಥಾನದಲ್ಲಿದ್ದಾರೆ. ಓದುಗರ ಮೊದಲ ಸ್ಥಾನಕ್ಕೆ ಬರಬೇಕಾದರೆ ಹಣಕಾಸಿನ ಲಾಭದ ದಾಹ ಹಿಂದಕ್ಕೆ ಹೋಗಿ ಜ್ಞಾನ ದಾಹ ಮುಂದಕ್ಕೆ ಬರಬೇಕು. ಆ ಮೂಲಕ ಸಮಾಜವನ್ನು ಬದಲಿಸಲು, ಪರಿವರ್ತಿಸಲು ಯಾವುದೇ ರೂಪದಲ್ಲಾದರೂ ಸಹಾಯ ಮಾಡುವ, ದಾರಿ ತೋರಿಸುವ ಪುಸ್ತಕಗಳು ನಮಗೆ ಬೇಕಾಗಿವೆ.

ಇತ್ತೀಚೆಗೆ ಪುಸ್ತಕದ ಅಂಗಡಿಗಳಿಗೆ ಹೋದಾಗ ಅಲ್ಲಿ ಇರುವ ಕನ್ನಡ ಪುಸ್ತಕಗಳನ್ನು ನೋಡಿದರೆ ಒಂದಕ್ಕಿಂತ ಒಂದು ವರ್ಣಮಯವಾಗಿ ಕಂಗೊಳಿಸುತ್ತಿರುತ್ತವೆ. ನೋಡಿದ ಎಲ್ಲಾ ಪುಸ್ತಕಗಳನ್ನು ಕೊಳ್ಳುವ ಆಸೆಯಾಗುತ್ತದೆ. ಇಂಗ್ಲಿಷಿನ ಪುಸ್ತಕಗಳಲ್ಲಿದ್ದ ಸ್ಪಾಟ್ ಲ್ಯಾಮಿನೇಷನ್, ಬಾಕ್ಸ್ ಬೈಂಡಿಂಗ್, ಫಾಯಿಲ್ ಪ್ರಿಂಟಿಂಗ್, ಜಾಕೆಟ್, ಮ್ಯಾಟ್ ಲ್ಯಾಮಿನೇಷನ್, ವೆಲ್ವೆಟ್ ಲ್ಯಾಮಿನೇಷನ್, ಎಂಬೋಸಿಂಗ್, ತ್ರಿಡಿ ಲ್ಯಾಮಿನೇಷನ್, ಉತ್ತಮ ಕಾಗದ - ಇವುಗಳ ಬಳಕೆ ಕನ್ನಡ ಪುಸ್ತಕಗಳಲ್ಲೂ ಹೆಚ್ಚುಹೆಚ್ಚಾಗಿ ಕಂಡುಬರುತ್ತಿರುವುದು ಹೆಮ್ಮೆಯ ವಿಷಯ. ಇದೇ ರೀತಿ ಪುಸ್ತಕದ ಶೀರ್ಷಿಕೆ, ಪುಸ್ತಕದ ಮುಖಪುಟ ಸಹ ಆಕರ್ಷಕವಾಗಿ ಗ್ರಾಹಕರ ಗಮನ ಸೆಳೆಯುತ್ತಿವೆ. ಪುಸ್ತಕದ ಅಂಗಡಿಗಳಲ್ಲಿ ಗ್ರಾಹಕರು ಪುಸ್ತಕವನ್ನು ಕೈಗೆತ್ತಿಕೊಂಡರೆ ಸಾಕು, ಪ್ರಕಾಶಕರ ಅರ್ಧ ಪುಸ್ತಕಗಳು ಮಾರಾಟವಾದಂತೆ. ಒಳ್ಳೆಯ ಗುಣಮಟ್ಟದ ಮುದ್ರಣದ ಪುಸ್ತಕಗಳಿಗೆ ಗ್ರಾಹಕರು ಸ್ವಲ್ಪ ಹೆಚ್ಚಿನ ಬೆಲೆಯನ್ನು ಕೊಡಲು ಹಿಂಜರಿಯುವುದಿಲ್ಲ. ಈ ವಿಷಯದ ಬಗ್ಗೆ ಚಂದ್ರಶೇಖರ ಕಂಬಾರರು ದೂರದರ್ಶನ ಸಂದರ್ಶನವೊಂದರಲ್ಲಿ ವಿಶ್ವ ಮಾರುಕಟ್ಟೆಯಲ್ಲಿ ಕನ್ನಡ ಪುಸ್ತಕವನ್ನು ಎತ್ತಿ ತೋರಿಸುವ ರೀತಿಯಲ್ಲಿ ಕನ್ನಡ ಪುಸ್ತಕಗಳು ಬರುತ್ತಿವೆ ಎಂದು ಮೆಚ್ಚಿಗೆಯ ಮಾತನಾಡಿದ್ದಾರೆ. ಮಾರಾಟಗಾರರು ಪುಸ್ತಕ ಮಳಿಗೆಗಳಿಗೆ ಬಂದ ಗ್ರಾಹಕರಿಗೆ ಬೇಕಾಗಿರುವ ಪುಸ್ತಕಗಳ ಅಥವಾ ವಿಷಯಗಳ ಬಗ್ಗೆ ತಿಳಿದು ಅವರಿಗೆ ಪುಸ್ತಕಗಳನ್ನು ಹುಡುಕುವಲ್ಲಿ ನೆರವಾಗಬೇಕು ಮತ್ತು ಹೊಸದಾಗಿ ಬಂದಿರುವ ಒಳ್ಳೆಯ ಪುಸ್ತಕಗಳನ್ನು ತೋರಿಸಿ ಅವರಿಗೆ ಪುಸ್ತಕಗಳನ್ನು ಕೊಳ್ಳುವ ಆಸಕ್ತಿಯನ್ನು ಹುಟ್ಟಿಸಬೇಕಾಗಿದೆ. ಗ್ರಾಹಕರು ಕೇಳಿದ ಪುಸ್ತಕ ಇಲ್ಲದೇ ಹೋದಲ್ಲಿ ಅವರ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಪಡೆದು ಪುಸ್ತಕಗಳನ್ನು ತರಿಸಿ ಅವರಿಗೆ ತಿಳಿಸುವ ಅಥವಾ

ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಪ್ರಕಾಶಕರೇ ಪುಸ್ತಕ ಮಾರಾಟಗಾರರು ಹೆಚ್ಚು ಇರುವುದರಿಂದ ಅವರು ತಮ್ಮ ಪುಸ್ತಕಗಳ ಮಾರಾಟಕ್ಕೆ ಆದ್ಯತೆ ಕೊಡುವುದರ ಜೊತೆಗೆ ಬೇರೆ ಬೇರೆ ಪುಸ್ತಕಗಳಿಗೂ ಆದ್ಯತೆ ಕೊಡಬೇಕಾಗಿದೆ. ಬೇರೆ ಬೇರೆ ಪ್ರಕಾಶಕರ ಪುಸ್ತಕಗಳನ್ನು ತರಿಸಿ ಆಕರ್ಷಕ ರೀತಿಯಲ್ಲಿ ಪ್ರದರ್ಶನ ಮಾಡುವುದರೊಂದಿಗೆ ಆ ಪ್ರತಿಗಳು ಮುಗಿದ ತಕ್ಷಣ ತರಿಸುವ ವ್ಯವಸ್ಥೆಯಾಗಬೇಕು. ಪ್ರಕಾಶಕರು ಇದೇ ರೀತಿ ಪುಸ್ತಕದ ಗುಣಮಟ್ಟದ ಬಗ್ಗೆ ಹೆಚ್ಚು ಹೆಚ್ಚಿನ ಗಮನ ಕೊಡಬೇಕಾಗಿದೆ, ಏಕೆಂದರೆ ಪುಸ್ತಕಗಳು ಒಂದು ಸಲವಷ್ಟೆ ಬಳಕೆಯಾಗಿ ಮುಗಿಯುವಂಥವಲ್ಲ. ಅವು ಹಲವು ಬಾರಿ ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ಕೈಯಿಂದ ಕೈಗೆ ಬದಲಾಗುತ್ತಲೂ ಇರುತ್ತವೆ. ಇದರಿಂದ ವಿನ್ಯಾಸ ಮತ್ತು ಗುಣಮಟ್ಟ ಮೇಲ್ಮಟ್ಟದಲ್ಲಿ ಇರಬೇಕಾಗುತ್ತದೆ. ಕನ್ನಡ ಪುಸ್ತಕ ಮಾರಾಟ ಮಾಡುವ ಮಳಿಗೆಗಳು ಬೆರಳೆಣಿಕೆಯಷ್ಟು ಇವೆ. ಕೆಲವು ಖ್ಯಾತ ಪುಸ್ತಕ ಮಾರಾಟಗಾರರು ಬೆಂಗಳೂರಿನಲ್ಲಿ ಅಲ್ಲದೆ ವಿವಿಧ ಜಿಲ್ಲೆಗಳಲ್ಲಿ ಶಾಖೆಗಳನ್ನು ತೆರೆಯುತ್ತಿದ್ದಾರೆ ಮತ್ತು ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರವು ಎರಡು ಮೂರು ಜಿಲ್ಲೆಗಳಲ್ಲಿ ಮಾತ್ರ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಿದೆ. ಇದು ತ್ವರಿತವಾಗಿ ಎಲ್ಲಾ ಜಿಲ್ಲೆಗಳಿಗೂ ಹಾಗೂ ತಾಲ್ಲೂಕುಗಳಿಗೂ ವಿಸ್ತರಣೆಯಾಗಬೇಕಾಗಿದೆ.

ಅಂತಾರರಾಷ್ಟ್ರೀಯ ವಿಮಾನ ನಿಲ್ದಾಣದ ಪುಸ್ತಕ ಅಂಗಡಿಯಲ್ಲಿ ಪುಸ್ತಕಗಳನ್ನು ಇಡಲು ಪ್ರಕಾಶಕರೇ ಬಾಡಿಗೆ ಕೊಡಬೇಕಾದ ಪ್ರಸಂಗವಿದೆ. ಕನ್ನಡ ಪುಸ್ತಕ ಪ್ರಾಧಿಕಾರ ಇವರ ಬಗ್ಗೆ ಗಮನ ಹರಿಸಿ, ಸರ್ಕಾರದಿಂದ ರಿಯಾಯಿತಿ ದರದಲ್ಲಿ ಮಳಿಗೆಯನ್ನು ಪಡೆದು ವಿಮಾನ ನಿಲ್ದಾಣದಲ್ಲಿ ಕನ್ನಡ ಪುಸ್ತಕಗಳು ದೊರೆಯುವಂತೆ ಮಾಡಬೇಕಾಗಿದೆ.

ಪ್ರತಿ ತಿಂಗಳು ಹೊರಬರುತ್ತಿರುವ ಪುಸ್ತಕಗಳ ಪಟ್ಟಿ ಪುಸ್ತಕದ ಹೆಸರು, ಲೇಖಕರು, ಪುಟಗಳು, ಬೆಲೆ, ಪ್ರಕಾಶಕರ ವಿಳಾಸ, ದೂರವಾಣಿಗಳನ್ನು ಒಳಗೊಂಡಂತಹ ಒಂದು ಸಂಚಿಕೆಯನ್ನು ಆ ತಿಂಗಳಲ್ಲೇ ತರಬೇಕಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರವು ರಿಯಾಯಿತಿ ದರದ ಪುಸ್ತಕ ಮಾರಾಟದ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಆಯೋಜಿಸುತ್ತಿದೆ. ಈ ಕಾರ್ಯಕ್ರಮ ಯಶಸ್ವಿಯಾಗಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಮೆಚ್ಚಿಗೆ ಬಂದಿದೆ. ಇದರಿಂದ ಈ ಯೋಜನೆಯನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಆಯೋಜಿಸಿದರೆ ಒಳ್ಳೆಯದು. ಇಂತಹ ಕಾರ್ಯಕ್ರಮಗಳಲ್ಲಿ ಮುದ್ರಕರಿಗೆ, ಡಿ.ಟಿ.ಪಿ., ಪುಸ್ತಕ ವಿನ್ಯಾಸ, ಮುಖಪುಟ ವಿನ್ಯಾಸ, ರೇಖಾಚಿತ್ರಕಾರರು, ಕಾಗದ ಮಾರಾಟಗಾರರಿಗೂ ಮಳಿಗೆಗಳನ್ನು ನೀಡಿ ಅವರುಗಳು ಅಲ್ಲಿಗೆ ಬರುವ ಪ್ರಕಾಶಕ ಲೇಖಕರಿಗೆ ಅವರವರ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳನ್ನು, ಹೊಸ ಹೊಸ ಆವಿಷ್ಕಾರಗಳ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಚರ್ಚಿಸಲು ಅನುವು ಮಾಡಿಕೊಡಬೇಕು.

ಪುಸ್ತಕ ಬಿಡುಗಡೆ ಕಾರ್ಯಕ್ರಮಗಳು, ಪುಸ್ತಕದ ಬಗ್ಗೆ ಚರ್ಚೆ, ವಿಚಾರ ಸಂಕಿರಣಗಳು, ಕಮ್ಮಟಗಳು ನಡೆಯುತ್ತಿವೆಯಾದರೂ ಇನ್ನೂ ಹೆಚ್ಚು ಹೆಚ್ಚು ರಾಜ್ಯದ ಎಲ್ಲಾ ಭಾಗಗಳಲ್ಲಿ ನಡೆಯಬೇಕಾಗಿದೆ. ಇಂತಹ ಕಾರ್ಯಕ್ರಮಗಳಲ್ಲಿ ಸಭಿಕರ ಅಭಾವದ ಬಗ್ಗೆ ಅಲ್ಲಲ್ಲಿ ಕೇಳಿ ಬರುತ್ತಿದೆ. ಕನ್ನಡಾಭಿಮಾನಿಗಳು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿದೆ. ಇದೇ ರೀತಿ ಆಯೋಜಕರು ಕೂಡ ಸಭಿಕರನ್ನು ಆಕರ್ಷಿಸುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

ಹೊಸ ಪ್ರಕಾಶಕರಿಗೆ ಪುಸ್ತಕ ಪ್ರಕಾಶನದ ತರಬೇತಿ ನೀಡುವಂತಹ ಕಾರ್ಯಕ್ರಮಗಳು ನಡೆಯಬೇಕಿದೆ. ಪ್ರಕಾಶಕರಿಗಾಗಿ ಪುಸ್ತಕ ಪ್ರಕಟಣೆಗೆ ಸಂಬಂಧಿಸಿದ ವಿವಿಧ ವಿಷಯಗಳಾದ ಹಸ್ತಪ್ರತಿ ಪರಿಶೀಲನೆ, ಭಾಷೆಯ ಬಳಕೆ, ಕರಡಚ್ಚು ತಿದ್ದುವುದು, ಪುಸ್ತಕ ವಿನ್ಯಾಸ, ಮುಖಪುಟ ವಿನ್ಯಾಸ, ಮುದ್ರಣ, ಕಾಗದ, ಲೇಖಕ-ಪ್ರಕಾಶಕರ ನಡುವಿನ ಸಂಬಂಧ, ಗ್ರಂಥಸ್ವಾಮ್ಯ, ನಿಯಮಗಳನ್ನು ಕುರಿತು ಸರಿಯಾಗಿ ತರಬೇತಿ ನೀಡುವಂತಹ ಡಿಪ್ಲೊಮಾ ಕೋರ್ಸ್ ಆರಂಭಿಸುವ ಅವಶ್ಯಕತೆ ಇದೆ.

ಕನ್ನಡ ಸಾಹಿತ್ಯವನ್ನು ಜನಪ್ರಿಯಗೊಳಿಸುವಲ್ಲಿ ದಿನಪತ್ರಿಕೆಗಳು, ವಾರಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಪಾತ್ರ ಮಹತ್ವಪೂರ್ಣವಾದುದ್ದು. ಇತ್ತೀಚಿನ ದಿನಗಳಲ್ಲಿ ನಿಯತಕಾಲಿಕಾ ಪತ್ರಿಕೆಗಳಲ್ಲಿ ಹಾಗೂ ಬ್ಲಾಗ್‌ಗಳಲ್ಲಿ ಹಲವರು ಉತ್ಸಾಹದಿಂದ ಅಂಕಣಗಳನ್ನು ಬರೆಯುತ್ತಿದ್ದಾರೆ. ಹೊಸ ನೀರು ಅಚ್ಚರಿ ಹುಟ್ಟಿಸುವಷ್ಟು ರಭಸವಾಗಿ ಚೆನ್ನಾಗಿ ಹರಿದುಬರುತ್ತಿದೆ ಎಂಬಂತೆ ಜಾಗತೀಕರಣ, ಆಧುನಿಕ ತಂತ್ರಜ್ಞಾನ, ವಿದ್ಯುನ್ಮಾನ ಮಾಧ್ಯಮಗಳು ತಂದು ಸುರಿಯುತ್ತಿರುವ ಸಂಗತಿಗಳ ಪರಿಣಾಮವಾಗಿ ಮನುಷ್ಯಲೋಕದಲ್ಲಿ ಉಂಟಾಗುತ್ತಿರುವ ಬದಲಾವಣೆ ತವಕ ತಲ್ಲಣಗಳನ್ನು ಹೊಸ ಲೇಖಕರು ಅದ್ಭುತವಾಗಿ ಚಿತ್ರಿಸುತ್ತಿದ್ದಾರೆ. ಬದುಕಿನ ದಟ್ಟ ಮತ್ತು ವಿಶಿಷ್ಟ ಅನುಭವಗಳನ್ನು ಸೆರೆಹಿಡಿಯುವಲ್ಲಿ ಲೇಖಕರು ಯಶಸ್ವಿಯಾಗುತ್ತಿದ್ದಾರೆ. ಇದಲ್ಲದೆ ನಿವೃತ್ತ ಅಧಿಕಾರಿಗಳು ತಮ್ಮ ಆಡಳಿತಾವಧಿಯ ಅನುಭವಗಳನ್ನು ಅದ್ಭುತವಾಗಿ ಚಿತ್ರಿಸುತ್ತಿದ್ದಾರೆ. ಇಂಥ ಅಂಕಣ ಬರಹಗಳು, ಪುಸ್ತಕ ವಿಮರ್ಶೆಗಳು ಮುಂದೆ ಪುಸ್ತಕರೂಪದಲ್ಲಿ ಹೊರಬರುತ್ತಿರುವುದು ಸಂತೋಷದ ಸಂಗತಿ. ಅನೇಕ ಧಾರ್ಮಿಕ ಮಠಗಳು ಹಾಗೂ ಸಂಸ್ಥೆಗಳು ಹೊರತರುವ ಪುಸ್ತಕಗಳು ಓದುಗರಲ್ಲಿ ಜನಪ್ರಿಯವಾಗುತ್ತಿವೆ. ಪಿಎಚ್.ಡಿ ಪದವಿಗಾಗಿ ಸಿದ್ಧಗೊಂಡ ಪ್ರಬಂಧಗಳೂ ಪುಸ್ತಕಗಳಾಗಿ ಹೊರಬರುತ್ತಿವೆ. ಇಂತಹ ಪ್ರಬಂಧಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಧನವನ್ನು ನೀಡುತ್ತಿರುವುದು ಪುಸ್ತಕಸಂಸ್ಕೃತಿಯ ಬೆಳವಣಿಗೆಗೆ ಪೂರಕವಾಗಿದೆ.

ಲೇಖಕ-ಲೇಖಕರ ನಡುವೆ, ಪ್ರಕಾಶಕ-ಪ್ರಕಾಶಕರ ನಡುವೆ, ಅನಾರೋಗ್ಯಕರವಾದ ಸ್ಪರ್ಧೆ ಪೈಪೋಟಿ ದ್ವೇಷ ಅಸೂಯೆಗಳನ್ನು ಅಭಿವ್ಯಕ್ತಿಸುವ ಹಂತ ತಲುಪಿದೆ. ಸಂಪ್ರದಾಯವಾದಿಗಳು-ಪ್ರಗತಿಪರರು, ಎಡಪಂಥಿಯರು-ಬಲಪಂಥಿಯರು ಒಬ್ಬರನ್ನೊಬ್ಬರು ವಿಶ್ವಾಸದಿಂದ ಅಭಿಮಾನದಿಂದ ನೋಡುವುದಿರಲಿ, ಹತ್ತಿರ ಹೋಗಲು ಬರಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಿಸಿದೆ. ಪಂಥಗಳ ವಿಚಾರ ಬಂದಾಗ ಪರಸ್ಪರ ವಿರೋಧಿಗಳೆಂದು ಭಾವಿಸಿದವರಿಗೆ ಪರಸ್ಪರ ಕೃತಿಗಳಲ್ಲಿ ಕೇವಲ ದೋಷಗಳೇ ಕಂಡು ಅಬ್ಬರದ ಖಂಡನೆಗೆ ಮುಂದಾಗುತ್ತಿದ್ದಾರೆ. ಪ್ರಕಾಶಕರು ಲೇಖಕರನ್ನು, ಮಾರಾಟಗಾರರು ಪ್ರಕಾಶಕರಿಗೆ ಗೌರವಧನ, ಲೇಖಕರ ಸಂಭಾವನೆ ಗೌರವ ಪ್ರತಿಗಳನ್ನು ಪುಸ್ತಕ ಮಾರಾಟವಾದರೂ ಹಣ ಕೊಡದಿರುವುದು ಶೋಚನೀಯ ಮಾತ್ರವಲ್ಲ, ಪುಸ್ತಕಲೋಕದ ಬೆಳವಣಿಗೆಗೆ ಮಾರಕ. ಲೇಖಕ-ಪ್ರಕಾಶಕರ ಸಂಬಂಧ ಈ ಮೊದಲು ವ್ಯವಹಾರಿಕವಾಗಿರಲಿಲ್ಲ, ಈಗ ಕನ್ನಡ ಪುಸ್ತಕ ಪ್ರಕಾಶನದಲ್ಲಿ ವ್ಯವಹಾರ ಲಾಭ ತಲೆಹಾಕಿದ್ದರಿಂದ ಲೇಖಕ ಪ್ರಕಾಶಕರ ಸಂಬಂಧ ಅನುಮಾನಗಳಿಂದ ಕೂಡಿದೆ. ಒಬ್ಬರಿಗೊಬ್ಬರು ತಮ್ಮ ತಮ್ಮ ವಯುಕ್ತಿಕ ಲಾಭಕ್ಕಾಗಿ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ತೋರಿಸಬೇಕಾಗಿದೆ. ಲೇಖಕರ-ಪ್ರಕಾಶಕರ ಬಾಂಧವ್ಯ ಮಧುರವಾದಾಗಲೇ ಉತ್ತಮ ಪುಸ್ತಕಗಳು ಬರಲು ಸಾಧ್ಯವಾಗುವುದು.

ಲೇಖಕರ ಕಮ್ಮಟಗಳನ್ನು ಹೆಚ್ಚು ಹೆಚ್ಚು ಆಯೋಜಿಸಿ ಹೊಸ ಲೇಖಕರಿಗೆ ಹಸ್ತಪ್ರತಿ ತಯಾರಿಕೆ,

ಸಂಪಾದನೆ, ಭಾಷೆಯ ಬಳಕೆ, ಅನುವಾದ, ಕರಡಚ್ಚು ತಿದ್ದುವಿಕೆ, ಪುಸ್ತಕವಿನ್ಯಾಸ, ಮುಖಪುಟ ವಿನ್ಯಾಸ, ಮುದ್ರಣ, ಕಾಗದ, ಲೇಖಕ ಪ್ರಕಾಶಕರ ನಡುವಿನ ಸಂಬಂಧ ಇತರ ವಿಷಯಗಳ ಬಗ್ಗೆ ತರಬೇತುಗೊಳಿಸಬೇಕು. ಕೆಲವು ಪ್ರಕಾಶಕರು ಸಿದ್ಧ ಪ್ರಸಿದ್ಧ ಕೃತಿಗಳ ಪ್ರಕಟಣೆ ಬಗ್ಗೆ ತೋರುವ ಉತ್ಸಾಹವು ಸಮರ್ಥವಾಗಿದ್ದರು. ಹೊಸಲೇಖಕರ ಕೃತಿ ಪ್ರಕಟಣೆಯ ಬಗ್ಗೆ ಉತ್ಸಾಹ ತೋರುತ್ತಿಲ್ಲ. ಹೊಸ ಲೇಖಕರಿಗೆ ಪ್ರೋತ್ಸಾಹಿಸಲೆಂದೇ ಹುಟ್ಟಿಕೊಂಡ ಪ್ರಕಾಶನ ಸಂಸ್ಥೆಗಳು ಅಲ್ಲೊಂದು ಇಲ್ಲೊಂದು ಸಿಗುತ್ತವೆ. ಮತ್ತು ಕೆಲ ಪ್ರಕಾಶಕರು ಹೊಸ ಲೇಖಕರಿಗಾಗಿಯೇ ಮಾಲಿಕೆಗಳನ್ನು ಆರಂಭಿಸಿದ್ದಾರೆ.

ದಿನಪತ್ರಿಕೆಗಳಲ್ಲಿ ಪುಸ್ತಕಗಳನ್ನು ಕುರಿತು ವಿಮರ್ಶೆ, ಪುಸ್ತಕದ ಮುಖಪುಟದೊಂದಿಗೆ ಕಿರು ಪರಿಚಯಗಳು ಪ್ರಕಟವಾಗುತ್ತಿವೆ. ಇದರ ಉಪಯೋಗವನ್ನು ಲೇಖಕರು, ಪ್ರಕಾಶಕರು ಹೆಚ್ಚುಹೆಚ್ಚಾಗಿ ಬಳಸಿಕೊಳ್ಳಬೇಕು. ದೂರದರ್ಶನದಲ್ಲಿ ನಾ. ಸೋಮೇಶ್ವರ ನಡೆಸಿಕೊಡುವ ಥಟ್ ಅಂತ ಹೇಳಿ ''ಕಾರ್ಯಕ್ರಮ ಬಿಟ್ಟರೆ, ದೃಶ್ಯ ಮಾಧ್ಯಮದಲ್ಲಿ ಪುಸ್ತಕ ಪರಿಚಯಿಸುವಂತಹ ಕಾರ್ಯಕ್ರಮಗಳೇ ಅತಿ ವಿರಳ.

ಹಿರಿಯ ಪ್ರಕಾಶಕರ ಅಭಿಪ್ರಾಯದಂತೆ ಇಂಗ್ಲಿಷ್, ಹಿಂದಿ, ತೆಲುಗು, ಮರಾಠಿ, ತಮಿಳು, ಮಲಯಾಳಂ ಭಾಷೆಗಳಿಂದ ಗಣನೀಯ ಪ್ರಮಾಣದ ಕೃತಿಗಳು ಕನ್ನಡಕ್ಕೆ ಅನುವಾದವಾಗುತ್ತಿವೆ. ಅದರ ಪ್ರಮಾಣಕ್ಕೆ ಹೋಲಿಸಿದರೆ ಕನ್ನಡದಿಂದ ಅನ್ಯಭಾಷೆಗಳಿಗೆ ಆಗಿರುವ ಅನುವಾದ ತೀರ ಕಡಿಮೆ. ಈ ಅಸಮತೋಲ ಸುಧಾರಿಸಬೇಕಾದರೆ ಕನ್ನಡದ ಶ್ರೇಷ್ಠ ಕೃತಿಗಳು ಹೆಚ್ಚುಹೆಚ್ಚು ಸಂಖ್ಯೆಯಲ್ಲಿ ಅನ್ಯಭಾಷೆಗಳಿಗೆ ಅನುವಾದಗೊಳ್ಳಬೇಕಾಗಿದೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡ ಪುಸ್ತಕಲೋಕಕ್ಕೆ ಅನೇಕ ರೀತಿಯಲ್ಲಿ ನೆರವಾಗುತ್ತಿವೆ. ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ನಡೆಯುವ ಸಮ್ಮೇಳನಗಳಲ್ಲಿ ಆ ಜಿಲ್ಲೆಯ ಲೇಖಕರಿಗೆ ಪ್ರಾತಿನಿಧ್ಯ ನೀಡಿ ಅನೇಕ ಸಾಹಿತ್ಯಿಕ ಚರ್ಚೆಗಳು, ವಿಚಾರ ಸಂಕಿರಣಗಳು ಮತ್ತು ಹಲವು ಪುಸ್ತಕಗಳನ್ನು ಬಿಡುಗಡೆ ಮಾಡಿ, ಲೇಖಕರನ್ನು ಸನ್ಮಾನಿಸುತ್ತಾರೆ. ಇದಲ್ಲದೆ ಖಾಸಗಿ ಪ್ರಕಾಶಕರು ಕೂಡ ಸಮ್ಮೇಳನಕ್ಕಾಗಿಯೇ ಎಷ್ಟೋ ಹೊಸ ಪುಸ್ತಕಗಳನ್ನು ತರುತ್ತಾರೆ. ಇಂಥ ಕನ್ನಡ ಸಾಹಿತ್ಯಜಾತ್ರೆಗಳಲ್ಲಿ ಪುಸ್ತಕ ಮಾರಾಟಕ್ಕೆ ಪ್ರತ್ಯೇಕವಾಗಿ ಸಾಲುಸಾಲು ಮಳಿಗೆಗಳ ವ್ಯವಸ್ಥೆ ಇರುತ್ತದೆ. ನಾಡಿನ ನಾನಾ ಭಾಗಗಳಿಂದ ಪ್ರಕಾಶಕರು, ಮಾರಾಟಗಾರರು ಬಂದು ಬಂದೆಡೆ ಸೇರಿರುತ್ತಾರೆ. ಓದುಗರಿಗೆ ಒಂದೇ ತಾಣದಲ್ಲಿ ಹಲವಾರು ಮಂದಿ ಪ್ರಕಾಶಕರ ಪುಸ್ತಕದಂಗಡಿಗಳಿಗೆ ಭೇಟಿ ನೀಡುವ ಅವಕಾಶ ದೊರೆಯುತ್ತದೆ. ತಮಗೆ ಬೇಕಾದ ಪುಸ್ತಕವೇ ಅಲ್ಲದೆ ತಮ್ಮ ಆಸಕ್ತಿಯನ್ನು ಹೆಚ್ಚಿಸಬಹುದಾದ ಇತರ ನೂರಾರು ಪುಸ್ತಕಗಳನ್ನು ನೋಡಲು ದೊರೆಯುತ್ತವೆ. ಸ್ಪರ್ಧಾತ್ಮಕ ರೀತಿಯ ಬೆಲೆಯಲ್ಲಿ ಕೆಲವು ಬಾರಿ ಶೇಕಡ ೫೦ ರಷ್ಟು ರಿಯಾಯ್ತಿಯಲ್ಲಿ ಪುಸ್ತಕಗಳು ಲಭ್ಯವಾಗುತ್ತವೆ. ಇಂತಹ ಕಾರ್ಯಕ್ರಮಗಳಲ್ಲಿ ಗ್ರಾಹಕರಿಗೆ ಇಷ್ಟವಾಗುವಂತಹ ಎಷ್ಟೋ ಲೇಖಕರನ್ನು ನೋಡುವ ಭಾಗ್ಯ ಲಭ್ಯವಾಗುತ್ತದೆ. ಅವರೊಂದಿಗೆ ಮಾತನಾಡುವ, ಅವರ ಹಸ್ತಾಕ್ಷರ ಪಡೆಯುವ, ಅವರ ಜೊತೆಗೂಡಿ ಫೋಟೋ ತೆಗೆಸುವ ಮತ್ತು ಮುಂದಿನ ಬರವಣಿಗೆಯ ಬಗ್ಗೆ ತಿಳಿಯುವ ಅವಕಾಶಗಳು ಸಿಗುತ್ತವೆ. ಬೆಂಗಳೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಮಾರಾಟವು ಒಂದು ಐತಿಹಾಸಿಕ ದಾಖಲೆಯಾಯಿತು. ಇದಲ್ಲದೆ ಸಾಹಿತ್ಯಾಸಕ್ತರ ಒತ್ತಾಯದ ಮೇರೆಗೆ ಪುಸ್ತಕ ಮಾರಾಟವನ್ನು ಮತ್ತೂ ಎರಡು ದಿನಗಳ ಕಾಲ ಮುಂದುವರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಇಂತಹ ಸಮ್ಮೇಳನಗಳಲ್ಲಿ ಪುಸ್ತಕ ಮಾರಾಟಗಾರರಿಗೆ ಅಲ್ಲಿನ ವ್ಯವಸ್ಥೆಗಳ ಬಗ್ಗೆ ಬೇಸರವಿದೆ - ಈ ಸಮಸ್ಯೆಗಳ ಬಗ್ಗೆ ಚಿಂತಿಸಿ ಬಗೆಹರಿಸಬೇಕಾಗಿದೆ. ಇದೇ ರೀತಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸಮ್ಮೇಳನಗಳಲ್ಲಿ ಸಣ್ಣ ಪ್ರಮಾಣದಲ್ಲಾದರೂ ಪುಸ್ತಕಗಳು ಮಾರಾಟವಾಗುತ್ತವೆ.

ಕನ್ನಡ ಪುಸ್ತಕ ಓದುಗರು ಆನ್‌ಲೈನ್ ಮೂಲಕ ಕೂತಲ್ಲೆ ಪುಸ್ತಕಗಳನ್ನು ಪಡೆಯುವ ಅವಕಾಶವನ್ನು ಅಮೆಜಾನ್.ಕಾಮ್, ಗೂಗಲ್ ಸರ್ಚ್ ಇಂಜಿನ್ ಮತ್ತು ಫ್ಲಿಪ್‌ಕಾರ್ಟ್ ಸಂಸ್ಥೆಗಳು ಕಲ್ಪಿಸುತ್ತಿವೆ. ಅವರ ಜಾಲತಾಣಗಳಿಗೆ ಹೋಗಿ ನಮಗೆ ಬೇಕಾದ ಪುಸ್ತಕಗಳನ್ನು ಹುಡುಕಿ ಅವುಗಳ ಮುಖಪುಟ, ಬೆಲೆ, ಬೆನ್ನುಡಿ, ಮುನ್ನುಡಿ, ಪುಸ್ತಕದ ಕಿರು ಪರಿಚಯ ಓದಿ, ಪುಸ್ತಕ ಬೇಕಾದಲ್ಲಿ ಆನ್ ಲೈನ್ ಮುಖಾಂತರ ಹಣವನ್ನು ನಮ್ಮ ಖಾತೆಯಿಂದ ಅವರ ಖಾತೆಗೆ ವರ್ಗಾಯಿಸಿದರೆ ಎರಡು ಮೂರು ದಿನಗಳಲ್ಲಿ ಪುಸ್ತಕಗಳು ನಮ್ಮ ಮನೆ ಬಾಗಿಲಿಗೆ ಬಂದು ತಲುಪುತ್ತವೆ. ಈ ವ್ಯವಸ್ಥೆಯನ್ನು ಪ್ರಕಾಶಕರೇ ಅಳವಡಿಸಿಕೊಂಡು ಈಗಿನ ಪರಿಸರದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಪುಸ್ತಕಗಳನ್ನು ತಲುಪಿಸುವ ಯೋಜನೆಗಳು ಹೆಚ್ಚಾಗಿ ರೂಪುಗೊಳ್ಳಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ಮೂವತ್ತೈದು ವರ್ಷ ಮೇಲ್ಪಟ್ಟವರೇ ಪುಸ್ತಕಗಳನ್ನು ಕೊಳ್ಳುತ್ತಿರುವುದು ಹಾಗೂ ಓದುತ್ತಿರುವುದು. ಮಕ್ಕಳು ಹಾಗೂ ಯುವಜನಾಂಗ ಕನ್ನಡ ಪುಸ್ತಕಗಳ ಕಡೆ ಆಕರ್ಷಿತರಾಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಇಂಗ್ಲಿಷ್ ಶಾಲೆಗಳು ನಾಯಿಕೊಡೆಯಂತೆ ತಲೆಯೆತ್ತುತ್ತಿರುವುದರಿಂದ ಮಕ್ಕಳು ಹಾಗೂ ಪೋಷಕರು ಆ ಕಡೆ ಹೆಚ್ಚು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಅವರು ಅಲ್ಲಿ ಕನ್ನಡವನ್ನು ಮೂರನೇ ಭಾಷೆಯಾಗಿ ಓದುತ್ತಿದ್ದಾರೆ. ಇಂಗ್ಲಿಷ್ ಭಾಷೆಯಲ್ಲೇ ಶಿಕ್ಷಣ ಪಡೆಯುತ್ತಿರುವ ಅವರಿಗೆ ಕನ್ನಡ ಪುಸ್ತಕಗಳ ಬಗ್ಗೆ ಆಸಕ್ತಿ ಇಲ್ಲದಂತಾಗಿದೆ. ಪ್ರೌಢಶಾಲೆಯ ವರೆಗಾದರೂ ಕನ್ನಡವನ್ನು ಮೊದಲ ಭಾಷೆಯಾಗಿ ಕಲಿಸುವ ಅಗತ್ಯವಿದೆ. ಅಲ್ಲದೆ ಹೊಸ ಹೊಸ ಪುಸ್ತಕಗಳನ್ನು ರಾಜ್ಯದ ಪ್ರತಿ ಶಾಲಾ ಕಾಲೇಜುಗಳಲ್ಲಿ ಇಡುವ ವ್ಯವಸ್ಥೆಯಾಗಬೇಕು. ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳಿಗೆಂದೇ ಒಂದು ಪಿರಿಯಡ್ ಕಡ್ಡಾಯವಾಗಿ ಆಗಬೇಕು. ಪಠ್ಯಪುಸ್ತಕ ಅಲ್ಲದೇ ಬೇರೆ ಪುಸ್ತಕಗಳು ಇವೆ, ಅವು ನಮಗೆ ಕಲಿಸಬಲ್ಲವು, ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ತರಬಲ್ಲವು ಎಂಬುದು ಮಕ್ಕಳಿಗೆ ತಿಳಿಯುವಂತಾಗಬೇಕು. ಮಕ್ಕಳು ಹೆಚ್ಚು ಹೆಚ್ಚಾಗಿ ಪುಸ್ತಕಗಳನ್ನು ಓದುವ ಮೂಲಕ ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಪೋಷಕರು ಮಕ್ಕಳಿಗೆ ಉತ್ತಮವಾದ ಪುಸ್ತಕಗಳನ್ನು ತಂದುಕೊಡುವ ಹಾಗೂ ಗ್ರಂಥಾಲಯಗಳಿಗೆ ಕರೆದುಕೊಂಡು ಹೋಗುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವಂತೆ ಸಲಹೆ ನೀಡಬೇಕು.

ಇನ್ನು ಕೆಲವೇ ವರ್ಷಗಳಲ್ಲಿ ಪುಸ್ತಕಗಳ ಸ್ವರೂಪವೇ ಬದಲಾಗುತ್ತದೆ ಎನ್ನಿಸುತ್ತದೆ. ಕಾಗದರಹಿತ ಪುಸ್ತಕಗಳು, 'ಇ-ಪುಸ್ತಕ' ಅಥವಾ 'ಕೇಳು' ಪುಸ್ತಕಗಳು ಈಗಾಗಲೇ ಬಂದುಬಿಟ್ಟಿವೆ. ಇತ್ತೀಚಿನ ವರ್ಷಗಳಲ್ಲಿ ಯುವಜನತೆ ಕಂಪ್ಯೂಟರ್, ವಿಭಿನ್ನ ಮೊಬೈಲ್, ನೋಟ್‌ಪ್ಯಾಡ್, ಈ-ಮೇಲ್, ಗೂಗಲ್‌ಗಳತ್ತ ಆಕರ್ಷಿತರಾಗುತ್ತಿದ್ದಾರೆ. ಇಂಥವರ ಗಮನ 'ಇ-ಪುಸ್ತಕ' ಅಥವಾ 'ಕೇಳು' ಪುಸ್ತಕಗಳ ಕಡೆ ಹರಿಯುತ್ತಿದೆ. ಕಾಗದದಿಂದಾದ ಪುಸ್ತಕಗಳಿಗೆ ಹೋಲಿಸಿದರೆ ಇಂಥ ಪುಸ್ತಕಗಳ ಬೆಲೆ ಅತ್ಯಂತ ಕಡಿಮೆಯಾಗಿರುತ್ತದೆ ಮತ್ತು ಅವುಗಳನ್ನು ಕೊಳ್ಳುವುದು ಬಹಳ ಸುಲಭ. ರಿಯಾಯಿತಿ ದರದಲ್ಲಿ ಇಂತಹ ಪುಸ್ತಕಗಳನ್ನು ಒದಗಿಸುವ ಸಾಕಷ್ಟು ಆನ್‌ಲೈನ್ ಮಾರಾಟಗಾರರು ಹುಟ್ಟಿಕೊಂಡಿದ್ದಾರೆ. ವಿಭಿನ್ನ ಮೊಬೈಲ್ ಅಥವ ಟಾಬ್‌ಲೈಡ್‌ಗಳಲ್ಲಿ (ಬ್ಲಾಕ್‌ಬೆರಿ ಆ್ಯಪ್ ವರ್ಲ್ಡ್, ಗೂಗಲ್ ಇ-ಬುಕ್ಸ್, ಐ.ಬಿ.ಎಸ್. ಐ-ಬುಕ್ಸ್, ಆಂಡ್ರಾಯ್ಡ್) ಇ-ಪುಸ್ತಕಗಳು ಸುಲಭವಾಗಿ ಸಿಗುತ್ತಿವೆ. ಇವುಗಳಲ್ಲಿ

ಫಾಂಟ್ ಗಾತ್ರ, ಬ್ರೈಟ್‌ನೆಸ್ ಕಣ್ಣಿಗೆ ಹೆಚ್ಚು ಒತ್ತಡ ಬೀಳದಂತಿರಲು ಡೇ ಮತ್ತು ನೈಟ್ ರೀಡಿಂಗ್ ಮೋಡ್ ಹಿನ್ನೆಲೆಯ ಬಣ್ಣ ಬದಲಾಯಿಸಿಕೊಳ್ಳುವ ಆಯ್ಕೆಗಳಿವೆ. ಆಲ್ದಿಕೋ ಬುಕ್ ರೀಡರ್, ಆ್ಯಪ್, ಇ-ಫಬ್, ಮತ್ತು ಪಿ.ಡಿ.ಎಫ್ ಪಾರ್‌ಮಾಟ್‌ಗಳನ್ನು ಇವು ಬೆಂಬಲಿಸುತ್ತವೆ. ಟ್ಯಾಗ್‌ಗಳ ಮೂಲಕ ಪುಸ್ತಕಗಳನ್ನು ವಿಂಗಡಿಸಲು ಅನುವು ಮಾಡಿಕೊಡುತ್ತದೆ. ಬುಕ್‌ಶೆಲ್ಫ್ ರೀತಿಯಲ್ಲಿಯೇ ಪುಸ್ತಕಗಳ ಸಂಗ್ರಹವನ್ನು ಅವು ತೋರಿಸುತ್ತವೆ. ಇವಕ್ಕೆಲ್ಲಾ ತಮ್ಮದೇ ಆದ ಬಿಲ್ಟ್-ಇನ್-ಇ-ಬುಕ್ ಸ್ಟೋರ್‌ಗಳಿವೆ. ಇದಕ್ಕೆ ಸೈನ್‌ಇನ್ ಆಗಿ ನೇರವಾಗಿ ನಮ್ಮ ಸಾಧನೆಗಳಿಗೆ ಉಚಿತವಾದ ಅಥವಾ ಹಣ ಪಾವತಿಸಬೇಕಾದ ಪುಸ್ತಕಗಳನ್ನು ಕೂತಲ್ಲೇ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಬಹಳ ಮಂದಿ ಪುಸ್ತಕದ ಅಂಗಡಿಗಳಲ್ಲಿ ಪುಸ್ತಕಗಳನ್ನು ನೋಡಿ ಎಲ್ಲವನ್ನೂ ಕೊಳ್ಳಬೇಕು ಅನ್ನಿಸುತ್ತದೆ, ಆದರೆ ಮನೆಯಲ್ಲಿ ಇವುಗಳನ್ನು ಜೋಡಿಸಲು ಜಾಗವಿಲ್ಲವೆಂದು ನಿರಾಶೆಗೊಳ್ಳುತ್ತಾರೆ. ಆದರೆ ''ಇ-ಪುಸ್ತಕ''ಗಳನ್ನು ಕಂಪ್ಯೂಟರ್‌ನಲ್ಲಿ ಅಥವಾ ನೋಟ್‌ಪ್ಯಾಡ್‌ನಲ್ಲಿ ಮೂರು ಸಾವಿರ ಅಥವಾ ಅದಕ್ಕಿಂತ ಹೆಚ್ಚುಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿಟ್ಟುಕೊಳ್ಳಬಹುದಾಗಿದೆ. ಪುಸ್ತಕಗಳು ಬೇಕಾದಾಗ ಅವುಗಳನ್ನು ಹುಡುಕುವುದೇ ಒಂದು ಕೆಲಸ. ಕೆಲವು ಬಾರಿ ದಿನಗಟ್ಟಲೆ ಹುಡುಕಿದರೂ ಸಿಗದೇ ಅಂಗಡಿಗಳಿಗೆ ಹೋಗಿ ಮತ್ತೆ ಹೊಸ ಪುಸ್ತಕಗಳನ್ನು ಕೊಳ್ಳುವ ಪ್ರಸಂಗಗಳು ಹೆಚ್ಚು. ಆದರೆ ''ಇ-ಪುಸ್ತಕ''ಗಳು ಹುಡುಕುವುದು ಬಹಳ ಸುಲಭ. ಪುಸ್ತಕದ ಹೆಸರೋ, ಲೇಖಕರ ಹೆಸರೋ, ಪ್ರಕಾಶಕರ ಹೆಸರೋ ಕೊಟ್ಟು ಹುಡುಕು ಎಂದು ಹೇಳಿದರೆ ಸಾಕು ಕ್ಷಣಾರ್ಧದಲ್ಲಿ ನಮಗೆ ಬೇಕಾದ ಪುಸ್ತಕ ನಮ್ಮ ಕಣ್ಮುಂದೆ ಹಾಜರಾಗುತ್ತದೆ. ಆದ್ದರಿಂದ ಯುವಜನತೆ ಇಂಥ ಪುಸ್ತಕಗಳ ಕಡೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಲೇಖಕರು ಅವರ ಸ್ವಂತ ಪುಸ್ತಕವನ್ನು ಪ್ರಕಟಿಸಬೇಕಾದರೂ ಉಚಿತವಾಗಿಯೇ ಪುಸ್ತಕವನ್ನು ಪ್ರಕಟಿಸಬಹುದು. ಒಂದು ಪುಸ್ತಕ ಮಾರಾಟವಾದರೆ ಇಂತಿಷ್ಟು ಗೌರವಧನ ಅವರಿಗೆ ಸಿಗುತ್ತದೆ.

ಕನ್ನಡ ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಶ್ವವಿದ್ಯಾಲಯಗಳು, ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಸರ್ಕಾರದ ಕನ್ನಡ ಸಂಸ್ಥೆಗಳು ಹೆಚ್ಚುಹೆಚ್ಚು ಪುಸ್ತಕಗಳನ್ನು ಅತ್ಯಂತ ಕಡಿಮೆ ಬೆಲೆಗೆ ಹೊರತರುತ್ತಿದ್ದಾರೆ. ಕನ್ನಡ ಸಾಹಿತ್ಯದ ಬಗ್ಗೆ ಚರ್ಚೆ, ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತಿದ್ದಾರೆ. ಲೇಖಕ, ಪ್ರಕಾಶಕರಿಗಾಗಿಯೇ ಅನೇಕ ಪ್ರಶಸ್ತಿಗಳನ್ನು ನೀಡುತ್ತಿದ್ದಾರೆ. ಉದಾಹರಣೆಗೆ ಬೃಹತ್ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಂದು ದೊಡ್ಡ ಮೊತ್ತವನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿಯಾಗಿ ಇರಿಸಿ, ಇದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಒಬ್ಬ ಸಾಹಿತಿಗೆ ನೃಪತುಂಗ ಸಾಹಿತ್ಯ ಪ್ರಶಸ್ತಿಯನ್ನು ಏಳು ಲಕ್ಷ ರೂ. ನಗದು ರೂಪದಲ್ಲಿ ನೀಡಿ ಸನ್ಮಾನಿಸಲಾಗುತ್ತದೆ. ಇದೇ ಸಮಾರಂಭದಲ್ಲಿ ಹತ್ತು ಹೊಸ ಲೇಖಕರಿಗೂ ಅರಳು ಪ್ರಶಸ್ತಿಯನ್ನು ಹದಿನೈದು ಸಾವಿರ ರೂ. ನಗದನ್ನು ನೀಡಿ ಸನ್ಮಾನಿಸಲಾಗುತ್ತಿದೆ. ಇಂತಹ ಅವಕಾಶಗಳನ್ನು ಬಳಸಿಕೊಂಡು ಲೇಖಕರು ಪ್ರಕಾಶಕರು ಹೆಚ್ಚು ಹೆಚ್ಚು ಮೌಲಿಕ ಪುಸ್ತಕಗಳನ್ನು ಹೊರತಂದು ಕನ್ನಡ ಪುಸ್ತಕಲೋಕವನ್ನು ಶ್ರೀಮಂತಗೊಳಿಸಬೇಕಾಗಿದೆ.

ಸ್ಕ್ಯಾನ್ ಪ್ರಿಂಟರ್ಸ್, ನಂ. ೧೩೪/೯/೫, ೨ನೇ ಮುಖ್ಯರಸ್ತೆ
೧೦ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮, ಮೊಬೈಲ್ : ೯೭೪೦೦ ೭೪೫೫೫

ಎಸ್.ಎಸ್.ಶ್ರೀಧರ ಮೂರ್ತಿ

ಸಂಚಯ ಕವಿತೆಗಳ ಕುರಿತು

'**ಯಾ**ವುದು ಕವಿತೆ?' ಎನ್ನುವ ಕಾವ್ಯ ಮೀಮಾಂಸೆಯ ಪ್ರಶ್ನೆಗೇನು ನಾನು ಇಲ್ಲಿ ಹೋಗುವುದಿಲ್ಲ. ಇಂತಹ ಪ್ರಶ್ನೆಗಳು ಮತ್ತು ಅದಕ್ಕೆ ಸಿಗುವ ಉತ್ತರಗಳು ಎರಡೂ ಸಾಪೇಕ್ಷವಾಗಿರುತ್ತವೆ. ಸಂಚಯ ಕಾವ್ಯಸ್ಪರ್ಧೆಗೆ ಬಂದ ಕವಿತೆಗಳ ಕುರಿತ ನನ್ನ ಅನಿಸಿಕೆಗಳಿಗೆ ಮಾತ್ರ ಈ ಟಿಪ್ಪಣಿಯನ್ನು ಸೀಮಿತಗೊಳಿಸುತ್ತೇನೆ. ಇಲ್ಲಿನ ಅನಿಸಿಕೆಗಳು ಸಹಜವಾಗಿಯೇ ಈ ಮಿತಿಯನ್ನು ದಾಟಿ ಸಾರ್ವತ್ರಿಕ ನೆಲೆಗಳನ್ನು ತಲುಪಿವೆ.

ಈ ಸ್ಪರ್ಧೆಗೆ ಸೀಮಿತಗೊಳಿಸದೆ ಯೋಚಿಸಿದರೆ, ಈ ಕಾಲದಲ್ಲಿ ಬರೆಯುತ್ತಿರುವ ಕವಿಗಳೆಲ್ಲರೂ ತಮ್ಮ ಕವಿತೆಯ ಆಕೃತಿ ಹೇಗಿರ ಬೇಕು ಎನ್ನುವುದರ ಬಗ್ಗೆ ಗೊಂದಲವನ್ನು ಎದುರಿಸುತ್ತಿದ್ದಾರೆ. ನವ್ಯ ಸಾಹಿತ್ಯದಿಂದ ಬಂದ ರೂಪಕಗಳ ಪರಿಭಾಷೆ ಒಂದು ಕಡೆ ಇದ್ದರೆ ನವೋದಯವೂ ಸೇರಿದಂತೆ ಬಂಡಾಯ, ದಲಿತ ಚಳುವಳಿಗಳು ಕಟ್ಟಿ ಕೊಟ್ಟ ಸರಳತೆ ಇನ್ನೂ ವಿಸ್ತರಿಸಿದರೆ ಗೇಯತೆ ಇನ್ನೊಂದು ಆಯ್ಕೆಯಾಗಿದೆ. ಇನ್ನೂ ಕೆಲವರು 'ಚಿತ್ರಗೀತೆಗಳಿಗೆ ದೊರಕುತ್ತಿರುವ ಜನಪ್ರಿಯತೆ ಕವಿತೆಗಳಿಗೆ ಏಕೆ ದೊರಕುತ್ತಿಲ್ಲ' ಎಂದು ಚಿಂತಿಸುತ್ತಿದ್ದಾರೆ. ಆಕೃತಿಯ ಬಗ್ಗೆ ಇರುವ ಗೊಂದಲ ಆಶಯದ ಬಗ್ಗೆ ಇರದಿರುವುದು ಕುತೂಹಲಕಾರಿಯಾದ ಸಂಗತಿ ಕೂಡ ಹೌದು. ಗಮನಿಸ ಬೇಕಾದ ಸಂಗತಿ ಎಂದರೆ, ಕವಿತೆಯ ಜೀವಾಳವಾಗುವುದು ಅದು ಬಿಂಬಿಸುವ ತಾತ್ವಿಕತೆ. ಅದು ಗಟ್ಟಿಯಾಗಿದ್ದರೆ ಆಕೃತಿ ತಾನಾಗಿಯೇ ದೊರಕುತ್ತದೆ. ಕವಿಯ ನಿಜವಾದ ಸವಾಲು ಇರುವುದು ತನ್ನ ತಾತ್ವಿಕತೆಯನ್ನು ಹರಳುಗಟ್ಟಿಸುವುದರಲ್ಲಿ. ಅದು ಸಾಧ್ಯವಾದರೆ ತನ್ನದೇ ಆದ ವಾಕ್ಯ- ವ್ಯಾಕರಣಗಳು ದೊರಕುತ್ತವೆ. ಈ ಸ್ಪರ್ಧೆಯಲ್ಲಿ ನಾನು ಮುಖ್ಯವಾಗಿ ಗಮನಿಸಿದ್ದು ಈ ಗಟ್ಟಿತನವನ್ನು. ಇದು ಕೆಲವಾದರೂ ಕವಿತೆಗಳಲ್ಲಿ ದೊರಕಿದೆ ಎನ್ನುವುದು ನಮ್ಮ ಕಾವ್ಯ ಭವಿಷ್ಯದ ಬಗ್ಗೆ ನಿರೀಕ್ಷೆ ಇಟ್ಟು ಕೊಳ್ಳುವಂತೆ ಮಾಡಿದೆ. ವಸ್ತುವನ್ನು ಆಯ್ಕೆ ಮಾಡಿಕೊಳ್ಳುವಾಗ ಅದು ಸಮಕಾಲೀನ ತಲ್ಲಣಗಳಿಂದ ದೂರವಾಗಬಾರದು.

'ನಿಜಾಕಾರ ನನ್ನ ಕವಿತೆ' ಎನ್ನುತ್ತಾರೆ ಕೆ.ಎಸ್.ನರಸಿಂಹ ಸ್ವಾಮಿ. ಸೃಜನಶೀಲತೆ ಎನ್ನುವದು ವಾಸ್ತವದಿಂದ ದೂರ ಹೋಗಬೇಕಾಗಿಲ್ಲ. ಕವಿತೆಯನ್ನು ಕನ್ನಡಿಗೆ ಹೋಲಿಸುವುದೂ ಈ ಕಾರಣಕ್ಕಾಗಿಯೇ! ಕನ್ನಡಿಗಿರುವ ಎರಡು ಮುಖ್ಯವಾದ

ಸಂಚಯ ಸಾಹಿತ್ಯ ಸ್ಪರ್ಧೆ - 2013ರ
ಬಹುಮಾನಿತ ಕವಿತೆಗಳು

ಗುಣ ಸ್ವಚ್ಚತೆ ಮತ್ತು ಪ್ರತಿಬಿಂಬಿಸುವ ಸಾಮರ್ಥ್ಯ. ಪ್ರತಿಬಿಂಬವೆಂದರೆ ಬಿಂಬವಲ್ಲ. ಆದರೆ ಅದು ಬಿಂಬವನ್ನು ಅನುಸರಿಸುತ್ತದೆ. ಇಲ್ಲಿ ದೊರಕುವುದು ವಾಚ್ಯಾರ್ಥ ಮಾತ್ರವಲ್ಲ. ಹೀಗಾದರೆ ಕವಿತೆಯ ಪ್ರಕ್ರಿಯೆ ಪೂರ್ತಿಯಾಗಿಲ್ಲವೆಂದೇ ಅರ್ಥ. ವಾಚ್ಯಾರ್ಥವು ಸ್ವಭಾವೋಕ್ತಿಯನ್ನು ಹಿಡಿಯಬೇಕು. ಹೀಗಾದರೆ ಮಾತ್ರ ಸಾಂಸ್ಕೃತಿಕ ಚಿಕ್ಕಟ್ಟನ್ನು ಕವಿತೆ ಹಿಡಿಯುತ್ತದೆ. ಈ ಸ್ಪರ್ಧೆಯೂ ಸೇರಿದಂತೆ ಇಂದಿನ ಬಹುತೇಕ ಕವಿತೆಗಳು ವಾಚ್ಯಾರ್ಥದಿಂದ ಆಚೆಗೆ ಬೆಳೆಯುತ್ತಿಲ್ಲ. ಚಿಕ್ಕ ಮಟ್ಟಿಗಿನ ಸೂಕ್ಷ್ಮ ಆಲೋಚನೆಯಾಗಲಿ, ಸಾಮಾಜಿಕ ಚಿಂತನೆಯಾಗಲಿ ಕಾಣುತ್ತಿಲ್ಲ. ಇನ್ನೊಂದು ಕಡೆ ಭಾವವನ್ನು ರಸವಾಗಿಸುವ ಅನುಭವ ಜನ್ಯ ಗುಣವೂ ಕಾಣುವುದಿಲ್ಲ. ನನ್ನ ಆಯ್ಕೆಯಲ್ಲಿ ಇಂತಹ ಪ್ರಯತ್ನವನ್ನು ಮಾಡಿರುವ ಕವಿತೆಗಳನ್ನು ಆರಿಸಿ ಕೊಂಡಿದ್ದೇನೆ.


ಇನ್ನೊಂದು ಮುಖ್ಯವಾದ ಅಂಶವೆಂದರೆ ಅನುಕರಣೆಯ ಅಪಾಯ. ಇಲ್ಲಿನ ಬಹುತೇಕ ಕವಿತೆಗಳಲ್ಲಿ ಪರಂಪರೆಯಲ್ಲಿ ಈಗಾಗಲೇ ಬಂದಿರುವ ವಸ್ತು, ರೂಪಕ, ತಂತ್ರಗಳು ಕಾಣಿಸಿಕೊಂಡಿವೆ. ಕವಿಗಳು ತಮ್ಮ ಧ್ವನಿಯಲ್ಲಿಯೇ ಮಾತನಾಡುವುದನ್ನು ಕಲಿಯುವುದು ಪ್ರಾಥಮಿಕ ಅಗತ್ಯ. ಕವಿತೆಯನ್ನು ಓದುಗನು ಕಣ್ಣಿನಿಂದ ನೋಡುತ್ತಾನೆ. ನಂತರ ಅದರೊಳಡಗಿದ ಮಾತುಗಳನ್ನು ಕೇಳಿಸಿ ಕೊಳ್ಳುತ್ತಾನೆ. ಈ ಕೇಳಿಸಿ ಕೊಳ್ಳುವ ಕ್ರಿಯೆ ನಿರಂತರವಾಗಿ ನಡೆಯುತ್ತದೆ. ಈ ಕಾಲಾವಧಿಯನ್ನು ಯಾರೂ ನಿರ್ಧರಿಸುವುದು ಸಾಧ್ಯವಿಲ್ಲ. ಮೂರು ಶತಮಾನದ ಹಿಂದೆ ರಚಿತವಾದ ಕವಿತೆಯ ಧ್ವನಿ ಈ ಕಾಲದ ಸಹೃದಯನೊಬ್ಬನಿಗೆ ನಿಖರವಾಗಿ ಕೇಳಿಸಿ ಬಿಡ ಬಹುದು. ಈ ಕೇಳುವಿಕೆ ಕಾಣ್ಕೆಯಾಗುವುದರಲ್ಲಿಯೇ ಕಾವ್ಯದ ಯಶಸ್ಸಿರುತ್ತದೆ. ಇದು ಅನುಕರಣೆಯಿಂದ ಸಾಧ್ಯವಾಗುವುದಿಲ್ಲ. ನನ್ನ ಆಯ್ಕೆಯಲ್ಲಿ ಇಂತಹ ಮಹತ್ವಾಕಾಂಕ್ಷೆಯ ಕುರುಹುಗಳನ್ನು ಹುಡುಕಿದ್ದೇನೆ. ಮುಖ್ಯವಾಗಿ ಹೇಳಲೇ ಬೇಕಾದ ಅಂಶವೆಂದರೆ ಯಾವುದೇ ಸ್ಪರ್ಧೆಯೂ ತನ್ನಷ್ಟಕ್ಕೆ ತಾನೇ ಪರಂಪರೆಯನ್ನು ಸೃಷ್ಟಿಸುವುದಿಲ್ಲ. ಅದಕ್ಕೆ ಚಾಲನೆಯನ್ನು ಮಾತ್ರ ದೊರಕಿಸುತ್ತದೆ. ಹೀಗೆ ದೊರಕಿದ ಚಾಲನೆಯನ್ನು ನಿರಂತರವಾಗಿ ಉಳಿಸಿ ಕೊಳ್ಳುವಲ್ಲಿ ಕವಿಗಳ ಅಸ್ತಿತ್ವ ಉಳಿದಿರುತ್ತದೆ. ಇದನ್ನು ಬಹುಮಾನಿತರೆಲ್ಲರೂ ಗಮನಿಸುತ್ತಾರೆ ಎನ್ನುವ ಆಶಯ ನನ್ನದು.

ಪುರವಣಿ ಸಂಪಾದಕರು, ವಿಜಯ ವಾಣಿ ದಿನ ಪತ್ರಿಕೆ
24, ಸಾಯಿರಾಂ ಟವರ್ಸ್, 5ನೇ ಮುಖ್ಯ ರಸ್ತೆ,
ಚಾಮರಾಜ ಪೇಟೆ, ಬೆಂಗಳೂರು-560 018

'ಸಂಚಯ' ಸಾಹಿತ್ಯ ಸ್ಪರ್ಧೆಗೆ ತೀರ್ಪುಗಾರರಾಗಿ ಸಹಕರಿಸಿದ
ಎನ್ ಎಸ್. ಶ್ರೀಧರಮೂರ್ತಿ ಮತ್ತು ಎಸ್ ಹೇಮ ಅವರಿಗೆ ಧನ್ಯವಾದಗಳು - ಸಂ.

ಅಂತರಿಕ್ಷದಲಿ ತೇಲಾಡುವ ನೀನು

■ ಇಂದ್ರಕುಮಾರ್ ಎಚ್.ಬಿ.




ಇಬ್ಬರಿಗೂ ಗೊತ್ತಿತ್ತಲ್ಲವೇ ಗೆಳೆಯಾ..
ಬಡತನ ಜಾತಿ ಮೋಸ ಅಂತಸ್ತುಗಳೆಂಬ
ಕಪಿ ಗುಳಿಗೆಗಳು ಜಗವನ್ನಾಳುತ್ತಿದೆ ಎಂಬುದು..
ಮೋಸ ಅನ್ಯಾಯ ದುಷ್ಟತನಕಿತ್ತಲ್ಲವೆ
ನಮ್ಮ ಸ್ನೇಹದ ಸೆಡ್ಡು
ಜಗವನ್ನು ನಗುವಂತೆ ನೋಡ ಬಯಸುವ
ನಮ್ಮ ಜೀವಗಳು ಯಾವ ಕ್ಷಣದಲ್ಲಿ ಕಲೆತವೋ..

ಜೊತೆಯಲ್ಲಿ ಕಳೆದದ್ದು ಅಪೂರ್ವ ಕ್ಷಣಗಳು
ಬದುಕು ಹೀಗೆ ನಿಶ್ಚಿಂತೆಯಾಗಿ
ಸಖ್ಯದ ಸುಖದಲ್ಲಿ ಬಹುಕಾಲ ತೇಲುತ್ತದೆ
ಅಂದುಕೊಳ್ಳುವಷ್ಟರಲ್ಲಿ.. ಕೆಟ್ಟ ಕನಸ್ಸಿನಿಂದ
ಎಚ್ಚೆತ್ತೆ! ಹಾಳಾದ್ದು ಕನಸೇ ಆಗಬಾರದಿತ್ತಾ?
ನಿಜವಾಗಿಹೋಯ್ತು.

ಬದುಕ ಪ್ರೀತಿಸುವ ನೀನು
ಸಾವಿನ ಪ್ಲಾನನ್ನು ಬಚ್ಚಿಟ್ಟಿದ್ದಾದರೂ ಎಲ್ಲಿ?
ಮಳೆಹನಿ ಹೂಗಿಡ ಕೊಳಲು ಹುಡುಕುತಿವೆ ನಿನ್ನ..
ಅವೆನೆಲ್ಲಿ ಎಲ್ಲಿ ಎಲ್ಲಿ?

ಒದೆಂಬ ರಸ್ತೆಯಲ್ಲಿ ಚಪ್ಪಲಿ ಸವೆಸಿದೆವು
ನಿನ್ನ ಚಪ್ಪಲಿ ಬೇಗ ಸವೆದಿತ್ತು..
ಬರಿಗಾಲಾಗುವ ಮುನ್ನ ಬಂಗಾರದ ಶೂಸು
ನಿನ್ನ ಪಾದಗಳ ಮುತ್ತುವುದ ನೋಡುವ
ಕನಸಿತ್ತು ನನ್ನ ಕಣ್ಣಿಗೆ..



ಹೇಳಿದರೆ ನೀನು ಹೊಟ್ಟೆ ಹಿಡಿದು ನಗುತ್ತಿದ್ದೆ..
ಭಿಕ್ಷೆ ಬೇಡುವವರ ಹೆಗಲ ಮೇಲೆ ಕೈ ಹಾಕಿ
ನಡೆಯುತ್ತಿದ್ದೆ.. ಆಕಾಶ ನೋಡಿ ನಿಟ್ಟುಸಿರಿಡುತ್ತಿದ್ದೆ..
ಮನದ ಕೊಳದ ತುಂಬಾ ಅದೆಷ್ಟು
ಪ್ರೀತಿಯ ಕಲ್ಲುಗಳು.. ಏಕೆ?

ಹುಳಹಿಡಿದ ವ್ಯವಸ್ಥೆಯ ವಾಲ್ ಪೋಸ್ಟರಿಗೆ
ಇಬ್ಬರ ಉಚ್ಚೆಯ ವಾಸನೆಯಿರುತ್ತಿತ್ತು..
ಬೀದಿಯಲ್ಲಿ ನಡುಗುವವರ ಮೇಲೆ
ನಮ್ಮ ಬಟ್ಟೆಯಿರುತ್ತಿತ್ತು..
ನಮ್ಮದೇ ಮೂಗಿನ ನೇರದಲ್ಲಿ
ಸುಂದರ ಪ್ರಪಂಚದ ಕನಸಿತ್ತು..

ನಾನು.. ಕೆಲಸ ಕದಿಯಲು ಹೋದೆ
ಭಿಕ್ಷೆಯ ತಟ್ಟೆಯಲ್ಲೂ ನಿರೀಕ್ಷಿಸಿದೆ
ಸಿಕ್ಕಿದ್ದು ಬೆವರು ಬೈಗುಳದ ಎಂಜಲು
ಚಿಲ್ಲರೆ ಹರಿಯಲು ಬಿಟ್ಟ ಹರಿದ ಜೇಬು
ಅವಮಾನಗಳನ್ನು ಸಂಗ್ರಹಿಸಿಟ್ಟಿತ್ತು..
ರೂಮಿನಲ್ಲಿ ರೋಷದಲ್ಲಿ ಸಿಗರೇಟು ಸುಟ್ಟ
ದಟ್ಟ ಮೋಡ ಸರಿಸಿ ನೀನು ಬಂದೆ
ಬಿಸಿಬಿಸಿ ಮಿರ್ಚಿ ಟೀ.. ಅಂತೆಲ್ಲ ಸಾವರಿಸಿದೆ...

ಈಸಬೇಕು ಇದ್ದು.. ಅಂತೆಲ್ಲ
ಕಿವಿ ತೂತಾಗುವಂತೆ ಹಲುಬಿದ್ದೆ.. ಯಾಕೋ?
ಈಸಲಾರದೇ ಕೈಚಾಚಲೂ ತೋಚದೇ
ಹೋದದ್ದೇಕೋ?

ನಮ್ಮದೇ ಕನ್ನಡಿಯಲ್ಲಿ ಕರುಣೆ
ನಮಗೇ ಗೋಚರಿಸದಂತೆ..
ಹಾಗೇ ಆಯಿತೇ
ಮೃತ್ಯುಪತ್ರಕ್ಕೂ ಮುನ್ನ
ಸೊಳ್ಳೆ, ಫೋನ್ ಕರೆ, ಅಪರಿಚಿತ ಅತಿಥಿಗಳಿಗೆ
ನಿನ್ನ ನೆನಪಾಗಲಿಲ್ಲವೇ

ಸೋಲು ನಿನ್ನ ಸಲುಹಿತೆ
ದಾರಿ ತಪ್ಪಿಸಿ ಸರಿ ಎಂದು ಬೊಗಳೆ ಹೊಡೆಯಿತೆ..

ನೋವ ನುಂಗಿದರೆ ಮಾತ್ರ
ಬದುಕುವ ಅವಕಾಶವಿದೆ
ಅಂತೆಲ್ಲ ಪದ್ಯ ಗೀಚಿದ ಮಿದುಳಿಗೆ
ನೋವು ಗಂಟಲಲ್ಲೇ ಸಿಕ್ಕಿ
ಉಸಿರುಗಟ್ಟಿಸಿತೆ?

ಮೊದಲ ಪುಟದಲ್ಲೇ ಕಥೆ ಮುಗಿಸುವ ಹುಚ್ಚು
ಹೊಸ ಅನಿಷ್ಟ ಹುಚ್ಚನ್ನು ಎಲ್ಲಿಂದ ಕಡ ತಂದಿದ್ದೆ..
ಕುತ್ತಿಗೆಗೆ ಬೆಲ್ಟು ಕಟ್ಟಿಕೊಂಡು
ಅಂತರಿಕ್ಷದಲ್ಲಿ ತೇಲಾಡುತ್ತ ಕಾಣಲು ಹವಣಿಸಿದ್ದೇನು?
ಇಷ್ಟು ಜಯಿಸಲು ಆದ ಅಡೆತಡೆಯೇನು?

ಈಗೆಲ್ಲ ಕಣ್ತುಂಬ ನಿನ್ನ ಸೋತ ಚಿತ್ರ
ನಿರ್ವಾತದಲ್ಲಿ ಗೆಲ್ಲುವುದೇನಿದೆ?
ಪಂಖದ ರೆಕ್ಕೆ ತಿರುಗಿದಾಗಲೆಲ್ಲ
ಸಾರಿ ಅಂತಾ ಸಾರಿ ಹೇಳುತ್ತಿರುವುದು
ಫ್ಯಾನೋ.. ನೀನೋ..

ಸಹಶಿಕ್ಷಕಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಕುರ್ಕಿ – ೫೭೭ ೫೧೪, ದಾವಣಗೆರೆ ತಾ|| ಮತ್ತು ಜಿಲ್ಲೆ
ಮೊಬೈಲ್ : ೯೯೮೬೪ ೬೫೫೩೦



ಮುಸುರಿ ಅರಿಬೆ ನಾನು

■ ಕೈದಾಳ ಕೃಷ್ಣಮೂರ್ತಿ

ಮುಸುರಿ ಅರಿಬೆ ನಾನು
ಮೈತುಂಬಾ ಕೀವುಗಣ್ಣುಗಳು
ಸದಾ ಎಚ್ಚರ
ನಿದ್ದೆ ಕದಿವ ನಿಷೆ ಬರಿಸುವ ಕೆಲಸಗಳು ನಿರಂತರ
ಅನಾಮತಾಗಿ ಆವರಿಸಿದ ಖಾಯಿಲೆಗೆ
ಮದ್ದು ಚುಚ್ಚುವ ವೈದ್ಯನಿಗೆ ಸೋಂಕು ತಡಲಿದೆ.


ಮುಸುರಿ ಅರಿಬೆ ನಾನು
ನರನಾಡಿಯನ್ನೆಲ್ಲಾ ಆ್ಯಸಿಡ್‌ನಲ್ಲಿ ಅದ್ದಿದ ಕ್ಷಣ
ಕರೆಂಟು ತಂತಿಗೆ ಪ್ರಾಣಕೊಟ್ಟ ಕಾಗೆ
ಅವರ ಮನೆನೆಲದ ಕೊಳಕು ನನ್ನದಾಗುತ್ತದೆ
ಕಪ್ಪಿಟ್ಟ ನೆಲ ಗಾಜಿನಂತೆ ತಳತಳ
ಮನೆಯಾಕೆಯ ಕೈಸ್ಪರ್ಶದ ಖುಷಿ ಮಾತ್ರ ನನ್ನದು

ಮುಸುರಿ ಅರಿಬೆ ನಾನು
ಮನೆಯ ಮೂಲೆ ಗೆಳತಿಯ ಹೃದಯ ಎರಡೂ ಒಂದೇ
ನಾಯಿಗೂ ಮೈಚಳ
ಕಾವು ತಿಂದ ಮೈ ಹೇಸಿಗೆ ವಾಸನೆ
ಕೆಲಸ ಮುಗಿದ ಮೇಲೆ ಅಮೃತವೂ ವಿಷ

ಮುಸುರಿ ಅರಿಬೆ ನಾನು
ಸರಸ ವಿರಸ ಹಾಸ ಮೋಸ ದಗ
ಎಲ್ಲವನ್ನೂ ಕಂಡ ಕಣ್ಣು ಕೀವು ತುಂಬಿದೆ
ಕಟಕಟೆಯಲ್ಲಿ ನಿಂತು ಕೀವು ಸುರಿಸೋಣವೆಂದರೆ
ಅಲ್ಲಾನ ಆಜಾನ್ ಕೂಗು ಮೈಲಾರಲಿಂಗನ ಕಾರ್ನಿಕದ ಘಂಟಿ
ಎರಡೂ ಬಾರದ ಮೂಕಹಕ್ಕಿ ನಾನು

ಮುಸುರಿ ಅರಿಬೆ ನಾನು
ಅವನ ತೆವಲಿಗೆ ನಾನು ಹಾಸಿಗೆ
ಲ್ಯಾಪುಟಾಪುಗಳಲ್ಲಿ ಕೈಯಾಡಿಸಿ ಒದ್ದೆಯಾದ ಪೋಲಿ
ವೀರ್ಯ ಚೆಲ್ಲಿ ಒಸಗಿ ಮೂಲೆಗೆ ಎಸೆದುಬಿಡುತ್ತಾನೆ
ಐದೇ ನಿಮಿಷದಲ್ಲಿ ಖಾಲಿಯಾದ ಗಂಡಸುತನ ಕಂಡು
ಗಹಗಹಿಸಿ ನಗುತ್ತೇನೆ
ನನ್ನ ನಗು ಯಾರಿಗೂ ಕಾಣದ ಗೂಬೆಯಂತೆ

ಮುಸುರಿ ಅರಿಬೆ ನಾನು
ನಾನು ಮನುಷ್ಯ ಎಂಬುದು ಜಗದ ವಿಸ್ಮಯಗಳಲ್ಲೊಂದು.



ಬಲಶೆಟ್ಟಿಹಾಳ (ಪೊ), ಸುರಪುರ (ತಾ)
ಯಾದಗಿರಿ (ಜಿಲ್ಲೆ) – ೫೮೫ ೨೯೧
ಮೊಬೈಲ್ : ೯೯೭೨೮ ೯೯೧೩೧



ಯಾವ ಮುನ್ನುಡಿಗೆ

■ ಗಾಣಿಸರ ಎಸ್.ಎಸ್.

ಯಾವ ಮುನ್ನುಡಿಗೆ
ಮತ್ತೆ ಎದೆಯ ಕೊಳೆತ ಕನಸುಗಳು
ಹೂತೋದ ನೆನಪುಗಳು
ರಕ್ತಸೋರಿ ಸತ್ತ ಭಾವ
ಉರಿಹತ್ತಿ ದಹಿಸಿ ಬೆಂದ ಬಯಕೆಗಳು
ಮತ್ತೆ ಏಕೆ...?
ಮನಸಕತ್ತಿಯ ಮೇಲೆ ತೂಗುತಿವೆ.

ಯಾವ ಮುನ್ನುಡಿಗೆ
ಕಣ್ಣುಗಳು ಕಚ್ಚಿ ಹುಗಿಬಿದ್ದ
ಹೃದಯ ಕಂದರಗಳು
ತುಟಿಯ ಬಾಣದ ಗಾಯಗಳು
ಉಸಿರುತಾಕಿ ಸುಟ್ಟು ಹುಳುವತ್ತಿದ ಹುಣ್ಣುಗಳು
ಮತ್ತೆ ಜಿನುಗುತ್ತಿವೆ ಹವ್ಯಾಹತ.

ಯಾವ ಮುನ್ನುಡಿಗೆ
ಹಸಿದ ಪಾದಗಳು ಬರಿತಲೆಯ ಸಿಂಗರಿಸಿ
ಮುಖಬಾಸಿಂಗವನೇರಿಸಿ
ಮತ್ತೆ ಮೆರವಣಿಗೆ ಹೊರಟಂತಿವೆ
ಮನದ ಸುಡುಗಾಡಿನಿಂದ

ಯಾವ ಮುನ್ನುಡಿಗೆ
ಹಳದಿಗಟ್ಟಿದ ನರಗಳು
ಹಸಿರ ಬಿಸಿ-ಹಸಿ ಹರಿತ್ತನರಿಸಿ
ಎದೆಯ ಕೆಂಪಾಗಿಸುತಿವೆ
ಬಿಳಿಯ ಬಾಳ ಬೆವರ ತೆರೆಗಳಿಗೆ.

ಯಾವ ಮುನ್ನುಡಿಗೆ
ಕಲಸಿ ಹಳಸಿದ ಮಾತುಗಳು
ಹುರಿಗೊಂಡು ತರವಿಟ್ಟು;
ಮುಳ್ಳುಗಟ್ಟಿದ ನಾಲಿಗೆ
ಸಪಿಗೊಂಡು
ಸುಕ್ಕಿಡಿದ ಗಂಟಲ ಜಿದ್ದು ಪೊರೆಯ
ಕೀಳುತಿವೆ

ಯಾವ ಮುನ್ನುಡಿಗೆ
ನನ್ನದೇ ಶವ ಹೊತ್ತು
ಊರಂಗಣ ತಿರುತಿರುಗಿ
ಸತ್ಯ ಸಿಗದೆ
ಸಂಜೀವಿನಿಯೆಡೆಗೆ ಹೆಣ ಸಾಗಿಸಿ
ನಾನೇ ದಣಿಯುತಿರುವೆ.

ಸಂಶೋಧನಾರ್ಥಿ ಕನ್ನಡ ವಿಭಾಗ
ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ
ಗುಲ್ಬರ್ಗಾ - ೫೮೫ ೧೦೬
ದೂರವಾಣಿ: ೯೯೭೨೪ ೩೧೩೧೧

ನಿಮ್ಮನ್ನು ದೈವದಂತೆ ನಂಬಿದ ಬದುಕು

■ ನಾಗಣ್ಣ ಕಿಲಾರಿ

ಬೆಳಗಾದರೆ ಸಮುದ್ರವೇ ಮೂಡುತ್ತದೆ
ನಿಸ್ತೇಜ ನಿರ್ಮಲ ನಿಶ್ಶಬ್ದ ಕಡಲಿಗೆ
ಕಿಡಿಗೇಡಿ ಮೂಡಣದಲ್ಲಿ ಕಾಡ್ಗಲ್ಲು ಎಸೆದಂತೆ
ಸಮುದ್ರವೇ ಮೂಡುತ್ತದೆ ಸದ್ದಿಲ್ಲದೆ ಬಾಂಬು ಸಿಡಿದಂತೆ

ಇದ್ದಕ್ಕಿದ್ದಂತೆ ಅಸಂಖ್ಯೆ ಅಲೆಗಳು ಚಂಚಲೆಗಳು
ನೆಮ್ಮದಿ ಇಲ್ಲದೆ ಬಡಿಯುವ ಅಸಂಖ್ಯೆ ರೆಕ್ಕೆಗಳು
ಎಲ್ಲೋ ದೂರದಲಿ ಮಗು ಅಳುತ್ತಿರುವ ಧ್ವನಿ
ಮತ್ತೆಲ್ಲೋ ತಾಯಿ ದುಃಖಿಸುತ್ತಿರುವ ಸದ್ದು
ಅಪ್ಪ ಬುಸುಗುಟ್ಟುತ್ತಾನೆ ಪೆಟ್ಟು ಬಿದ್ದ ಸರ್ಪದಂತೆ

ಮೂಡಿನಲಿ ಮರಿ ಬಿಟ್ಟು ಮಧು ತರಲು ಹೊರಟ ದುಂಬಿ
ಜೇಡರ ಬಲೆಗೆ ಸಿಕ್ಕು ಒದ್ದಾಡುತ್ತಿದೆ
ಗೋಡೆಯನು ನಂಬಿ ಬದುಕುವ ಹಲ್ಲಿ
ಜೇಡರ ಬಲೆಗೆ ಜಿಗಿದು ದುಂಬಿಯ ಕಚ್ಚಿ ನೆಲಕ್ಕೆ ಬೀಳುತ್ತೆ
ಬೀಳುತ್ತೆ ನೆಲಕ್ಕೆ, ಬಾಲ ತುಂಡಾಗಿ
ಮಿಡುಕುತ್ತದೆ ನಿರ್ಗತಿಕರ ಬದುಕಿನಂತೆ

ನೀವು ಮತ್ತೆ ಹತ್ತುತ್ತೀರಿ ಗೋಡೆಯನ್ನು
ಸದ್ದು ಸಪ್ಪಳವಿಲ್ಲದೆ ಬಾಣ ಹೂಡುವ ಬೇಡೆಗಾರನಂತೆ
ಮತ್ತೊಂದು ಬೇಟೆಗೆ ಸಂಚು ರೂಪಿಸುತ್ತ

ತಿಪ್ಪೆಯ ಮೇಲೆ ನಿಂತು ಕತ್ತು ಕೊಂಕಿಸಿ ಕೋಳಿ ಅದನ್ನೇ ಕೂಗಿದ್ದು
ಮರಿಗಳಿಗಾಗಿ ತಿಪ್ಪೆ ಕೆದಕುತ್ತ
ಬೆಕ್ಕು ಮತ್ತು ಹದ್ದಿನ ಮೇಲೆ ಕಣ್ಣಿಟ್ಟು
ಹಾಗಾಗಿಯೇ ದೇವರು ನನ್ನ ತೊಡೆಗಳಲ್ಲಿ ಶಕ್ತಿ ತುಂಬಿದ
ನೀವು ಚಾಕುಕಟ್ಟಿ ನಮ್ಮ ನಡುವೆಯೇ ಕದನ ಕಟ್ಟಿದಿರಿ
ನಾವು ಬದುಕನ್ನು ಒಂದು ಯುದ್ಧದಂತೆ ಸವೆಸಿದೆವು
ನಿಮ್ಮನ್ನು ದೈವದಂತೆ ನಂಬಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಮಹಾವಿದ್ಯಾಲಯ ಸಿಂಧನೂರು, (ಕುಷ್ಟಗಿ ರಸ್ತೆ), ರಾಯಚೂರು ಜಿಲ್ಲೆ. ಮೊಬೈಲ್: ೯೯೭೨೬ ೦೭೧೦೮



ಈ ನಡುವೆ

■ ಪದ್ಮನಾಭ ಭಟ್ ಶೇವ್ಕಾರ್

ಎಲ್ಲ ನಾನು ಬಿಟ್ಟುಹೋದಂತೆ ಇರುವುದೆಂಬ
ತುಂಬು ನಂಬಿಗೆಯಲ್ಲಿ ಹೊರಟವನಿಗೆ,
ಈ ನಡುವೆ ಇಷ್ಟೆಲ್ಲ ಘಟಿಸಬಹುದೆಂದು
ನಿನ್ನ ಎಡಹುಬ್ಬಿನ ಮೇಲಿನ ಗಾಯದ ಗುರುತಿನಾಣೆ
ತಿಳಿದಿರಲಿಲ್ಲ.

ಹೊಳೆ ಹರಿದಂತೆ ಮರ ಮುರಿದಂತೆ
ಹಕ್ಕಿಪಕ್ಕಿಗಳು ಮರಿಹಾಕಿ ಬೆಳೆದಂತೆ
ಹೆಬ್ಬೆರಳು ಗುಳ್ಳೆಯೊಡೆದು ರಕ್ತವೊಸರಿ ಜಡ್ಡುಗಟ್ಟಿ
ಪಾದದ ಅಳತೆ ಬದಲಾಗುತ್ತಾ ಹೋಯಿತು.

ಬದಲಾಗುವ ಕ್ಯಾಲೆಂಡರುಗಳ ಲೆಕ್ಕ ಸಿಗುವುದಿಲ್ಲ
ಉದುರಿದಷ್ಟೇ ವೇಗವಾಗಿ ಚಿಗುರುವ ಎಲೆಗಳ ಈ ಕಾಡಲ್ಲಿ

ಈ ಸುದೀರ್ಘ ಪಯಣದುದ್ದಕ್ಕೂ
ನಿನಗೊಗ್ಗುವ ಹಾಗೆ ಉತ್ತರಿಸಲು
ತುಟಿಗಳ ತಿದ್ದುವ ಭರದಲ್ಲಿ
ರೆಪ್ಪೆ ತುಂಬಿದ್ದ ಪ್ರಶ್ನೆಗಳು ಹಸಿಬೀಜದಂತೆ
ಹುದುಗಿ ಹೋಗಿದ್ದಕ್ಕೆ ಪುರಾವೆಗಳಿರಲಿಲ್ಲ.
ಆದರೀಗ ನೋಡು,
ಬಿಸಿಲು ತಾಕದ ಹಸಿರು ಕಾಡನ್ನು ಕಡಿದುಬಂದ
ನನ್ನ ಆಲಿಗಳು ಒಮ್ಮೆ ಚಿಗುರು ಕೆಂಪಾಗಿ
ಒಮ್ಮೆ ಸುಳಿಹಳದಿಯಾಗಿ ಹೊರಳುತ್ತಿದ್ದರೆ
ನಿನಗುತ್ತರಿಸಲು ನಾಲಗೆ ತಡವರಿಸುತ್ತದೆ.

ಈ ನಡುವೆ ಏನೂ ಮೊದಲಿನಂತಿಲ್ಲ.
ಗಿಡ ಗಿಡವಾಗಿಲ್ಲ, ಮರಿ ಮರಿಯಾಗಿಲ್ಲ
ಪಾದಕ್ಕೆ ಮುತ್ತಿಕ್ಕಿ ಕಳಿಸಿದ್ದ ದಾರಿ ದಾರಿಯಾಗಿಲ್ಲ.
ನಿನ್ನ ಕಣ್ಣು ಹೊರತು ಬೇರೆ ಕನ್ನಡಿಯಿರದ ಈ ಊರಲ್ಲಿ
ನಾನು ಹೇಗಿರುವೆನೋ ತಿಳಿಯಲೇ ಇಲ್ಲ.

ಈ ದುರ್ಭಾಗ್ಯ ತಂದಿಟ್ಟ ಅಚ್ಚರಿಯ ಹೇಗೆ ಭರಿಸಲಿ?
ಈ ತುದಿಯಲ್ಲಿ ಎದುರುಗೊಂಡಿದ್ದು ನೀನಾಗಿರಲಿಲ್ಲ.

'ನಾಗಸುಧೆ', ನಂ. ೯೦, ಕಾಳಿದಾಸ ನಗರ, ವಿದ್ಯಾನಗರ ವಿಸ್ತರಣೆ
ಹುಬ್ಬಳ್ಳಿ - ೩೧, ಮೊಬೈಲ್ : ೯೪೮೧೦ ೧೩೯೯೭

ಅಟ್ಟದ ಮನೆ

■ ಮಲ್ಲಿಕಾರ್ಜುನ ಛಬ್ಬಿ




೧

ನಿಚ್ಚಣಿಕೆ ಏರಿ ದೂಳು ಕೊಡವಿ ಮಲಗುವುದಕ್ಕೊಂದಿಷ್ಟು
ಜಾಗ ಮಾಡಿಕೊಂಡು ಅಕ್ಕನ ಮಗ್ಗುಲಲ್ಲಿ
ಬಗೆ ಬಗೆಯ ಕಥೆ ಕೇಳುತ್ತಾ
ಜಾನಪದ ತ್ರಿಪದಿಗಳ ಹೇಳುತ್ತಾ
ತಾಯಿ ಮರಗಿಧಾಂಗ ಯಾರ ಮರಗ್ಯಾರ ಶಿವನ
ಆಲದ ಮರದಾನ ಅರಗಿಳಿಯು। ಮರಗಿಧಾಂಗ
ನಮಗ ನಮ್ಮವ್ವ ಮರಗ್ಯಾಳ
ಮನೆಯ ಅಟ್ಟದ ಹಲಗೆಗಳು ಒಂದೊಂದೇ ಕಳವಾಗುತ್ತ
ಖಾಲಿಯಾದ ಅಟ್ಟ ತನ್ನ ಹೀರೀಕರೊಂದಿಗೆ ರೋದಿಸುವ
ವಿದ್ರಾವಕ ಚಿತ್ರಣ ಬಣ್ಣ ಮಾಸದೇ
ಹಾಗೇ ಉಳಿದುಕೊಂಡಿದೆ

ಅಜ್ಜನಿಗೆ ಹೆದರಿ ಹದಿನಾಲ್ಕು ವರುಷ ಗಡಿಪಾರಾಗಿದ್ದ ಮಾಟಗಾತಿ
ಯಾವ ಮಾಯೆಯಿಂದಲೋ ಗೃಹ ಪ್ರವೇಶ ಮಾಡಿ
ವರುಷ ತುಂಬುವುದರೊಳಗೇ
ಅಜ್ಜನಂಥಾ ಅಜ್ಜನನ್ನೇ ನುಂಗಿ ಹಾಕಿದಾಳೆಂಬ ಕಥೆಗೆ
ಅಟ್ಟದ ಮೇಲಿನ ಜಂತಿಯಂತೆಯೇ
ಕರುಳೂ ಕಿರುಗುಡುತ್ತವೆ

೨

ನಾಕೆತ್ತಿನ ಕಮತ ನಿಭಾಯಿಸುತ್ತಿದ್ದ ಹುಲಿಯಂಥವನನ್ನು
ಪೇಟೆಯ ಪಾರಿವಾಳವೊಂದು ಹಾರಿಸಿಕೊಂಡು ಹೋದದ್ದು
ದಶಕಗಳಿಂದಲೂ ಫಸಲು ನೆಲವನ್ನೇ ಅಡಇಟ್ಟು
ಹುಲಿಯಂಥಾ ಹುಲಿಯೇ ಜೀತದಾಳಾಗಿ
ಹಳಸಿದನ್ನಕ್ಕೆ ಹರಿದ ಟವಾಲಿನ ಜೋಳಿಗೆ
ಚಾಚುವ ಹರಿಶ್ಚಂದ್ರನಾದನಲ್ಲಾ



೩

ಮುತ್ತೈದೆಯರ ಮುಡಿಗೆ ಮಲ್ಲಿಗೆ ಇಟ್ಟು
ಒಗತನ ಹರಿಸುವ
ಋತು ಚಕ್ರದ ರಕುತವನು ಗಂಡಂದಿರ ಮೈಗೊರೆಸಿ
ಹದ್ದುಬಸ್ತಿನಲ್ಲಿಟ್ಟುಕೊಳ್ಳುವ
ಮಾಟಗಾತಿಯರ ಕಥೆ ಕೇಳುವಾಗ
ಇಂಥ ಡಾಕಿನಿಯರೇ ಗರಾಣೆಸ್ತ ಮನೆತನವ
ಹೀನ ಸ್ಥಿತಿಗೆ ತಂದರೆಂಬೋ ಹೊಟ್ಟೆಯೊಳಗಿನ ಸಿಟ್ಟು
ನೆತ್ತಿಗೇರದೆ ರಟ್ಟೆಯೊಳಗೆ ಕುದ್ದು ಹಾರುತ್ತದೆ.

ವರ್ಷಕ್ಕೆರಡು ಸಲ ಇನ್‌ಕ್ರೀಮೆಂಟ್ ಸಮಯದಲಿ
ಆತ್ಮೀಯತೆಯ ಫೋನು ರಿಂಗಣಿಸುವ ದಾಯಾದಿಗಳಿಗೆ
ಸಂಕಟದ ದಿನಗಳಲ್ಲಿ ಕಣ್ಣೀರ ಶಾಯಿಯಿಂದ ಬರೆದ
ನನ್ನ ಪತ್ರ ಸಂಪುಟಗಳ ನೆನಪಾಗದೇನೋ

ಕೆರ್‍ಯಾಂಬಲಿ, ಶೀಗಿ ಹುಣ್ಣಿಮೆಯ ಹಿಲಾಲು, ದೀಪಾವಳಿಯ ಚಾಂಗ್‌ಬೋಲೋ
ಪಂಚಮಿಯ ಜೋಕಾಲಿ, ಶ್ರಾವಣದ ಗ್ರಂಥ ಪಾರಾಯಣ
ಎಲ್ಲ ಎಲ್ಲವೂ ಆರ್.ಸಿ.ಸಿ ಬಿಲ್ಡಿಂಗಿನ ಅಡಿಪಾಯದಲ್ಲಿ
ಹುದುಗಿ ಹೋದವಲ್ಲೋ ಅಣ್ಣಾ

೪


ಮಾತಿಗೊಮ್ಮೆ ಮನೆತನದ ಮರ್ಯಾದೆಯ
ಮುಗಿಲೆತ್ತರಕ್ಕೇರಿಸುತ್ತಿದ್ದ
ಜಗಳಕ್ಕೊಮ್ಮೆ ಮನೆಯನ್ನೇ ಕುರುಕ್ಷೇತ್ರ ರಣಾಂಗಣ ಮಾಡಿ
ತಮ್ಮಪ್ಪ ಕಟ್ಟಿದ ಮನೆಯೆಂದು
ಸಲಿಕೆಯಿಂದ ಗೋಡೆ ಒಡೆಯುತ್ತಿದ್ದ
ಬಿಡುವಿಲ್ಲದ ಕೆಲಸದಲ್ಲೂ ಒಡಪುಗಟ್ಟಿ ಸಂಪನ್ನಗೊಳಿಸಿದ
ಸೋದರತ್ತೆ ನೆನಪಾಗುತ್ತಾಳೆ

ಎತ್ತು-ಚಕ್ಕಡಿ ಗಾಲಿಗಳ ಅಂಗೈ ನಾಣ್ಯವ ಮಾಡಿ
ಚಿತ್ತಾ-ಡಬ್ಬಾ ಆಡಿದವರು
ನಿಶ್ಚಲ ಹೊಸ್ತಿಲದಂತೆ ಕೆಡವಿ
ನಿನ್ನ ಅಡ್ಡಡ್ಡ ದಾಟಿದರಲ್ಲವ್ವಾ

೫

ಕಂಪ್ಯೂಟರ್ ಜಾಲಾಡುವ ಶಹರ ಮಕ್ಕಳಿಗ್ಯಾಂಗ ದಕ್ಕೀತೋ
ತಮ್ಮಾ ನಮ್ಮ ದುಃಖ-ದಂವತಿ, ಸಂಬಂಧ-ಸೂತ್ರ,
ಜಾತ್ರಿ-ನಿಬ್ಬಣ, ಹಾಡು-ಕುಣಿತ
ಎಲ್ಲಿ ಹ್ವಾದವ್ವೋ ಸೌಹಾರ್ದದ ಆ ಕ್ಷಣಗಳು

ದಣಿದ ಹೊಟ್ಟೆ ಒಣಗಿದ ಗಂಟಲಿನ ಅಪ್ಪಂದಿರು
ಬಾಡಿಗೆ ಎತ್ತಿನಂತೆ ಏಗುತ್ತಿರುವಾಗ
ವಂಶೋದ್ಧಾರಕರು ಬಾರುಗಳಲಿ ಬಿಯರು ಚಿಮುಕಿಸುತ್ತಿದ್ದರೆ.
ತೊಡೆಯ ಮೇಲೆ ಕೂರಿಸಿಕೊಂಡು ತುತ್ತುಣಿಸುವ
ತಾಯಂದಿರಿಗೆ ವಿಚಿತ್ರ ಹಮ್ಮ
ಪರೀಕ್ಷೆಯಲ್ಲಿ ಪೆದ್ದು ಮಗು ಗೀಚುವ
ತಪ್ಪು ಅಕ್ಷರಗಳಂತಾಯಿತಲ್ಲ ನಮ್ಮ ಬದುಕು



೬

ನಮ್ಮ ಕಳ್ಳು ಬಳ್ಳಿಗಳ ತಿನ್ನಲು
ಕೆಟ್ಟ ಹುಳುವಾಗಿ ಹುಟ್ಟಿದವರೆ
ನಮ್ಮ ಕೂಡು ಕುಟುಂಬದ ತುಂಬು ಮನೆಯೆದುರು
ಅಡ್ಡಗೋಡೆ ಕಟ್ಟಿಸಿ ಘಟಸರ್ಪಗಳ ಕಾವಲಿಗಿಟ್ಟವರೆ


ಯಾರೂ ಅರಿಯದ ಭಾಷೆಯಲ್ಲಿ
ನಮ್ಮ ಹತಭಾಗ್ಯ ಚರಿತೆಯನ್ನು ಬರೆಯುತ್ತಿದೆ ದುಷ್ಟಕಾಲ

7

ಹೇಳಿ ಹಗುರಾಗು ಪಾರವ್ವತ್ತೆ ನಮ್ಮ ಚಿಕ್ಕತ್ತೆ
ಸುಕ್ಕುಗಟ್ಟಿದ ನಿನ್ನ ಮುಖದ ಕಾಂತಿಯಲ್ಲಿ
ಹುತ್ತಗಟ್ಟಿದ ಅಸಂಖ್ಯ ಕತೆಗಳ
ನಿನ್ನೆದೆಯೊಳಗೆ ಬಾವಿ ತೋಡಿದ ವ್ಯಥೆಗಳ

ನಾನೂ ಕಾಪಿಟ್ಟುಕೊಳ್ಳುವೆ
ಕವಿ ಸಮಯಕ್ಕೆ ಕಾವ್ಯ ವ್ಯಾಪಾರಕ್ಕೆ

ಶಿಕ್ಷಕರು, ಶ್ರೀ ಕೆಂಗಲ್ ಹನುಮಂತಯ್ಯ ಸರ್ಕಾರಿ ಪ್ರೌಢಶಾಲೆ, ಅಣ್ಣಹಳ್ಳಿ, ಎಂ.ಜಿ.ಪಾಳ್ಯ ಅಂಚೆ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು, ಜಿಲ್ಲೆ-562109. ಮೊಬೈಲ್: 9972961793, 9972412895
Email: mallikarjunchabbi@gmail.com



ಒಡೆದ ಬಣ್ಣದ ಚಿತ್ರಗಳು

■ ಮಹಂತೇಶ ಪಾಟೀಲ

೧

ಸಿಮೆಂಟ್ ರೋಡಿನ ಮೇಲೆ
ಸ್ಖಲಿತ ಕಾರ್ಬನ್ ಕುಡಿಯುತ್ತಾ
ರನ್ನವೇ ಕಾರ್ಟೂನಿನ ಕುದುರೆಯಂತಾದ ಪಪ್ಪ.
ಡೆಸ್ಕ್‌ಟಾಪಿನಲ್ಲಿ ಹಗಲು ರಾತ್ರಿಗಳಿಗೆ ಹರಾಜಾಗಿ
ಕಂಪನಿಯವರ 'ಶುಗರ್ ಫ್ರೀ' ಬಿಸ್ಕೆಟ್ ನುಂಗುತ್ತಾ
ಬಿಗ್‌ಬಜಾರಿನ ಮಾಲಿನಲ್ಲಿ
ಖಾಲಿಯಾದ ಅಕೌಂಟಿನ ತುಂಬ
ಕಾಯಿಲೆಗಳು ಜಮಾ ಆಗಿವೆ; ಬಡ್ಡಿ ಸಮೇತ
ಇನ್ನೂ ಸಾವಿನದ್ದೇನೂ ಭಯವಿಲ್ಲ
ಬದುಕಿನದ್ದೇ ...!

೨

ಕಿಚ್ಚನ ಪ್ಯಾರಡೈಸ್‌ನ
ಕೂಕ್ಕರ್, ಮಿಕ್ಸರ್‌ಗಳ ಕಿರುಚಾಟದ ಗಾಢಗದ್ದಲದಲ್ಲಿ
ಪ್ಲಾಸ್ಟಿಕ್ ಬಳೆಗಳ ಸದ್ದಿಲ್ಲ
ಮಾರುದ್ದ ಜಡೆ ಹೂ ಬೆನ್ನಿಗಿಲ್ಲ!
ಫ್ರೀಜಿನ ಪಾನಿಗಳಲ್ಲಿ ತಣ್ಣಗಾಗದ ಬಯಕೆಗಳು
ಸೀರಿಯಲ್ ಸಿನಿಮಾಗಳಲ್ಲಿ ಮೂಡುತ್ತವೆ
ಬಣ್ಣಗಳ ಬಟವಾಡಿಯಲ್ಲಿ.
ಮಮ್ಮಿಯಂತಿರುವ ಕಾಸ್ಮೆಟಿಕ್ ಗೊಂಬೆಗೆ
ಮತ್ತೇ ಹೊಟ್ಟೆಯದ್ದೇನೂ ಚಿಂತೆಯಿಲ್ಲ
'ಜೀರೋ ಸೈಜಿ'ನದ್ದೇ ...!

೩

ಬಾಡಿಗೆ ಬಸುರಿನಿಂದ
ಐಸಿಯುದಲ್ಲಿ ಕಣ್ಣುಬಿಟ್ಟ; ಚಿಂಟೂ - ಬೇಬಿ
-ಗಳೆಂಬ ಹಸಿರಬ್ಬರಿನಂತಿರುವ ಪುಟಾಣಿಗಳು,
ಕಾಂಪ್ಲೆನ್ ಕುಡಿದರೂ
ಹೆಣಭಾರವಾಗುವ ಕಾನ್ವೆಂಟ್ ಪುಸ್ತಕಗಳು
ಗೇಮ್, ಚಾಟಿಂಗ್‌ನಲ್ಲಿ ಕಾಲ ಕಳೆಯುವ
ಎಲೆಕ್ಟ್ರಾನಿಕ್ ಪರದೆಯ ಮೇಲಾಡುವ ಬೆರಳುಗಳು,
ಸ್ನ್ಯಾಕ್ಸ್, ಫಿಝ್ಝಾ, ಬರ್ಗರ್‌ಗಳಿಗೆ ಖಾಲಿ ಬಸಿರಾದವರಿಗೆ
ಚಟಗಳೇ ಚಟುವಟಿಕೆಗಳು
ಇನ್ನೂ ಜಾಬ್‌ನದ್ದೇನೂ ತಲೆನೋವಿಲ್ಲ
ಫಲಿತಾಂಶದ್ದೇ ...!

೪

ಅಪಾರ್ಟಮೆಂಟಿನ ನೆರಳ ತುದಿಗಿರುವ
ವೃದ್ಧಾಶ್ರಮದಲ್ಲಿ ಸಂಜೆಗಳು ನರಳುತ್ತಿವೆ
ಖಾಲಿತನದ ಕೈದಿಯೊಬ್ಬ ಮೈತುಂಬಿದಂತೆಲ್ಲ
ಸಾವು ಖಿನ್ನಗೊಂಡ ಹಗಲು
ರಾತ್ರಿಯಿಡೀ ದೇಹಾಂತರಗೊಳ್ಳುತ್ತವೆ.

೫

ಇಂಧನ ಒಡಕಲು ಬಿಂಬಗಳ ಮೇಲೆ
ರೆಕ್ಕೆಗಳಿಲ್ಲದೆ ಹಾರಾಡುವ
ಸೀಳು ಕನಸಿನ ಫೈಬರ್ ಕಾರುಗಳಲ್ಲಿ
ಥೇಟ್ ಮನುಷ್ಯರ ಹಾಗಿರುವ
ನಿಶಾಚರಿಗಳು...

ಸಾವು ಶೋಕವಾಗದೀ ಲೋಕದಲ್ಲಿ
ಹುಟ್ಟು ಸಂಭ್ರಮವಾದೀತೆ...?

ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಗುಲ್ಬರ್ಗಾ - 585 106
ದೂರವಾಣಿ : 87227 26886

ಮೈ ತುಂಬಿದ ಅಂಗಿ

■ ಯಾಕೊಳ್ಳಿ ವೈ.ಎಂ.

ನಿತ್ಯ ಹರಕಂಗಿಯೊಳಗೆ ವಿಜೃಂಭಿಸಿ
ಮೆರೆಯುತ್ತಿದ್ದ ಅಪ್ಪ
ಮೈತುಂಬ ಅಂಗಿ ಹಾಕಿ ಊರ ಗೆದ್ದವನಂತೆ
ದೊಡ್ಡ ದೊಡ್ಡ ಹೆಜ್ಜೆಗಳ್ನಿಡುತ್ತ ನಡೆದಿದ್ದ.

ಗೌಡರ ಅಂಗಿಯೊಳಗಿಂದ ಅಪ್ಪನಿಗೆ ಠೀವಿಯ
ಕೋರೆ ಮೀಸೆ ಮೂಡಿ
ಆತನ ನಡತೆಯ ಖದರಿಗೇ
ಹುಟ್ಟಿತ್ತು ಹೊಸ ಅರ್ಥ.

ಬರಬರುತ್ತ ಮೀಸೆ ಬೆಳೆದು ಮುಖವೆಲ್ಲ ವ್ಯಾಪಿಸಿ
ಅವನಿಗೆ ಕಂಡವರ ಹಿಡಿದು ಬಯ್ಯಬೇಕೆನಿಸಿತು.
ಎದುರಿಗೆ ಬಂದ ಬರಿಯಲುಬನ ಕಂಡು
ಅಪ್ಪ ಗಹಗಹಿಸಿ ನಕ್ಕ
ನಗೆಯೊಳಗಿನ ವಿಕೃತತೆಗೆ
ಮುಖದೊಳಗಿನ ಕಠೋರತೆಗೆ
ಇಡೀ ಕೇರಿಗೆ ಕೇರಿಯೇ ಬೆಚ್ಚಿಬಿದ್ದಿತು.

ಹಾದಿಯುದ್ದಕ್ಕೂ ಎದುರಾದವರೆಲ್ಲ ತನಗೆ ಸಲಾಮು
ಹೊಡೆಯಲಿ ಎಂಬ ಆಸೆ ಮೂಡಿತು

ಯಾಕೋ ಅಪ್ಪ ಅಂದು ಮನೆಗೆ ಬಂದಾಗ
ಖುಷಿಯನಿಸಲಿಲ್ಲ ಅಪ್ಪನ
ಮೈಯಲ್ಲೀಗ ಭೂತ ಹೊಕ್ಕಂತೆನಿಸಿ
ದೂರ ದೂರ ನಿಂತೆವು.

ಮನೆಗೆ ಬಂದವನೇ,
ಮತ್ತೆ ಮುಂದಿನ ಹಬ್ಬಕ್ಕೆಂದು
ಗೌಡರ ಅಂಗಿ ಕಳಚಿ ಮಡಿಚಿ ಇಟ್ಟನೋ,
ಆತ ನಮಗೆಲ್ಲ
ಮನುಷ್ಯನಂತೆ ಕಾಣ ಹತ್ತಿದ.
ಮೂಡಿದ್ದ ಕೊರೆ ಮೀಸೆ ಮಾಯವಾಗಿ
ಚಿಕ್ಕ ತಂಗಿಯನ್ನೆತ್ತಿ
ಅದೇ ಬರಿ ಮೈಯ ಅಪ್ಪ
ಮುತ್ತನ್ನಿತ್ತಾಗ ನಾವೆಲ್ಲ ನಿರುಮ್ಮಳವಾದೆವು!

'ನಿವೇದನೆ', ಮನೆ ನಂ. 46 ಬಿ,
ಶಿವಬಸವನಗರ, ರಾಮಪುರಂ ಸೈಟ್
ಸವದತ್ತಿ, ಬೆಳಗಾವಿ ಜಿಲ್ಲೆ – 591 126
ಮೊಬೈಲ್ : 97319 70857

ಯಾವ ಮುಲಾಮಿಗೂ ಮಾಸದ ಗಾಯವಿದು...

■ ರಮೇಶ್ ಬಾಲಿ

೧

ಅವಳ ಅಘೋರ ರಾತ್ರಿಯ ನಿದ್ದೆಗಳು ನೋವು ತಿಂದಿದ್ದವು ಮತ್ತೆ
ಹೆಂಗೆಳೆಯರ ಮೃದು ಮೈ ರೋಮಗಳು ಜುಮ್ ಎನ್ನುತ್ತಾ ಕಾಡುವಂತೆ
ಸುಳಿದ ಗಾಯಗಳು ಮಾಸಿ ಹೋಗುವ ಮೊದಲು ಮತ್ತೊಂದು ಆಳವಾದ
ಗಾಯ ಮಾಡಲು ಮತ್ತೆ ಯಾವ ಸುಂದರನ ಹೆಜ್ಜೆಗಳು ತಳುಕಿಗೆ ಕಾದು
ಕುಳಿತಿರುತ್ತವೆ ನಿರಂತರ ಗಾಯದ ನೋವು ಯಾರಿಗೂ ಗೊತ್ತಿಲ್ಲ ಅದು ಅವಳಿಗೆ
ಬಹು ನೆನಪಿನಾ ಬುತ್ತಿ ಪಕ್ಕೆಯಿಂದ ಅಪ್ಪುಗೆ ಎದೆಯ ಹಾಲಿನಲ್ಲಿ ಕೋಲಾಹಲದ
ಅಲೆಗಳು ಸಾವಿರಾರು ಮಾರಾಟದ ಪಾರಿಜಾತಗಳು ಅಳುಕಿದವು ಕೆಂಪು
ತುಟಿಗಳು ಚೀರಾಡಿದವು

೨

ಕನ್ನೆಯ ಸುಳಿದ ಚಕ್ಕೆ ಎಬ್ಬಿಸಿಕೊಂಡು ನೋಡದೆ ಹೊರಟ ಅವನು ಯಾವ
ಜಾತಿಯ ಸರದಾರನೋ ಹೊಸ ಗಾಯದ ನೋವು ಧಣಿದ ಅವಳಿಗೆ
ನೆಟ್ಟುಕೊಳ್ಳುತ್ತವೆ ಚಳಿ ಬಯಲಿನ ಕಪ್ಪು ಗುಡ್ಡಗಳಲಿ ಕೆಂಪು ನೆತ್ತರು ಘೋರ
ನೋವುಗಳನ್ನು ಮನಸ್ಸು ನುಂಗುತ್ತಾ ದೇಹ ಮಲಗಿತ್ತು ಮೃತ್ಯುಪಿಸೆದೆಗೆ ಮುತ್ತಿಟ್ಟ
ಅನುಭವ ನಿತ್ಯ ನಿರಂತರ ಬೆವರು ಸುರಿಸುತ್ತಾ ಯಾವ ವರ್ಷದಿಂದಲೋ ನನಗೆ
ಗೊತ್ತಿಲ್ಲ ಹೆಗ್ಗಂಬ ದೇಹ ಸಿಹಿ ಪುರುಷರ ಲೆಕ್ಕಕ್ಕೆ ಬೇಡಿಕೆಯ ಸೊತ್ತು ಮಾತ್ರ,
ಹೊಸ ಜನ ಹೊಸ ಗಾಯಗಳಿಗೆ ಹೆದರದ ಬೆಂಕಿ ಉಂಡೆಯ ಚೆಂಡು ಅವಳು.

೩

ಯಾವ ಅಪ್ಪುಗೆಯ ಮುಗುಳುಗಳೋ ಯಾವ ಮುಲಾಮಿಗೂ ಬಾಡದ
ಚಿತ್ತಲ ಗಾಜಿನ ಗಾಯವಿದು ಮಧ್ಯರಾತ್ರಿಯ ಹೊತ್ತು ಬಿಡುವಿಲ್ಲದ
ನಿದ್ದೆಗೆ ಜಾರಿದ ಮಾನವೆಂಬ ಸುಟ್ಟ ಸಮಾಜದ ಹೊಗೆಯು ಸೂರ್ಯನ
ಕಿರಣಗಳು ಎದ್ದು ಬಂದವು ರಾತ್ರಿ ಅವನಿಗೆ ಕಗ್ಗತ್ತಲಿನಲ್ಲಿ ಬೆಳಕು ಹುಡುಕಿದ
ಸಂತೋಷ ಸುಖ ನೀಡಿದ ದೇಹಕ್ಕೆ ನಿದ್ದೆಯೇ ಬಂದಿಲ್ಲ ಬಾಡಿದ ಹೂವಾಗಿ
ಹೋದಳು ಇಂತ ಎಷ್ಟೋ ರಾತ್ರಿಯಲಿ ಬಿದ್ದಿದ್ದಳೋ ಬಾಡಿದರೂ ಭಯ
ಹೊಸದಾಗಿ ಚಕ್ಕೆ ಎಬ್ಬಿದಿದ್ದರೂ ಹಳೆಯ ಗಾಯಗಳ ಭಯ.

೪

ಅಪ್ಪುಗೆಯಲ್ಲಿನ ಕೆಟ್ಟ ಕನಸುಗಳು ಹೊತ್ತಿಲ್ಲದ ಹೊತ್ತಿನಲ್ಲಿ ಬಿದ್ದು-ಬಿದ್ದು
ನಗುತ್ತವೆ ಮಂಚದ ಸುಖಕ್ಕಾಗಿ ಬರುತ್ತಲೇ ಇದ್ದರೂ ಹೆಜ್ಜೆಗಳ ಹಿಂದೆ
ಬಣ್ಣ-ಬಣ್ಣದ ನೋವುಗಳ ಹೊತ್ತು ತರುತ್ತಲೇ ಇದ್ದರೂ.

ಡಾ. ಬಿ.ಆರ್. ಅಂಬೇಡ್ಕರ್ ನಗರ, ಸುಕಾಲಪೇಟೆ, ಸಿಂಧನೂರು - ೫೮೪ ೧೨೮, ರಾಯಚೂರು ಜಿಲ್ಲೆ
ಮೊಬೈಲ್ : ೯೪೪೯೨೪೪೮೯೦



ಕತ್ತಲೆಂಬುದು ಕತ್ತಲಲ್ಲ

■ ರವಿ ಬೆಸಗರಹಳ್ಳಿ

ನನಗೆ ಕತ್ತಲೆಂದರೆ ಇಷ್ಟ!
ಕಾವ್ಯದ ಮುಂಚೆಗಿನ ಕವಿಯ ತಲ್ಲಣಗಳಂತೆ
ಒಂದು ಧ್ಯಾನದಂತೆ
ಆವರಿಸಿ ನಿಗೂಢವಾಗುವುದಲ್ಲ?

ಎಲ್ಲಕೂ ಮಾಯಕಾದ ಮುಸುಕ
ಹೊದೆಸಿ ಬಿಡುತ್ತಲ್ಲ
ಹೆಣ್ಣು-ಗಂಡು ಬೆಸೆವಾಗ ಹೊತ್ತ
ನಾಚಿಯ ಹಿಡಿದೂ
ಎರಡು ಒಂದಾಯಾಗಿಸುವಂತೆ ಇದು
ಮರ್ಮಕ್ಕೆ ತಾಗುವಂತೆ
ಮೌನದಂತೆ

ಬೆಳಕೋ ತೆರೆದು ತೋರಿಸಬಹುದು
ನಮ್ಮ ಸುತ್ತಲನ್ನ
ಹಾತೊರೆದಿರಬಹುದು ನಾನು, ನೀವು
ಒಂದು ಬೆಳಕು
ತಿಂದುಹಾಕಬಹುದು ಕತ್ತಲನ್ನ
ಆದರೂ ಅದು ಹೇಗೆ ಜೀವಿಸಿರುತ್ತೆ
ನಮ್ಮ ಸುತ್ತಲೂ
ಸದ್ದಿಲ್ಲದ ಸಂತನ ಹಾಗೆ

ಹಾ! ಈ ಕತ್ತಲೋ
ಅವ್ವನ ಬೆಚ್ಚನೆದೆಯ ನೆನಪಲ್ಲಿ
ನನ್ನ ಇಳುಕಿ ಸಮಾಧಾನಪಡಿಸುತ್ತೆ
ಕರುಳುಳ್ಳ ಇಂಥ ಕತ್ತಲು
ಕಾವು ಕೂತಾಗಲೇ
ಬೆಳಕೆಂಬುದು ಮೊಟ್ಟೆ ಒಡೆದು
ಮರಿಯಾಗೋದು

ಕತ್ತಲೆಂದರೆ ನನಗಿಷ್ಟ.

ನಂ. ೪೫೦, ೫ನೇ ಮೇನ್, ೮ನೇ ಕ್ರಾಸ್,
ಆರ್‌ಎಂವಿ ೨ನೇ ಹಂತ, ಡಾಲರ್ಸ್ ಕಾಲೋನಿ,
ಬೆಂಗಳೂರು – ೫೬೦ ೦೯೨

ಪ್ರತಿಕ್ರಿಯೆ

೧೦೨ನೇ ಸಂಚಿಕೆಯಲ್ಲಂತೂ ತಮ್ಮ ಸಂಪಾದಕೀಯ ಓದಿ ಮನಸ್ಸು ತುಸು ಖಿನ್ನವಾಯಿತು, ಆಶ್ಚರ್ಯವೇನೂ ಆಗಲಿಲ್ಲ. ಕನ್ನಡದಲ್ಲಿ ವೈಚಾರಿಕ ಸಾಹಿತ್ಯವು ಎಷ್ಟು ವಿರಳವೋ ಅಷ್ಟೇ ಅಸಹಾಯಕವೂ ಆಗಿದೆ. ಬಂಗಾಳಿ, ಮರಾಠಿಯಲ್ಲಿದ್ದಂತೆ ನಮ್ಮ ಭಾಷೆಯಲ್ಲೂ ಏಕೆ ವೈಚಾರಿಕ ಪತ್ರಿಕೆಗಳಿಲ್ಲ ಎಂದು ನನಗೆ ನಾನು ದಿಲ್ಲಿ, ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವಾಗ ಮೇಲಿಂದ ಮೇಲೆ ಪ್ರಶ್ನೆಯೊಂದು ಕಾಡಿಸುತ್ತಿತ್ತು . ಆದರೆ, ಬೆಂಗಳೂರಿಗೆ ಬಂದ ನಂತರ ಕ್ರಮೇಣವಾಗಿ ನನಗೆ ಯಾಕೆಂದು ಅರ್ಥವಾಗತೊಡಗಿತು. ನಮ್ಮ ಜನರಿಗೆ ವೈಚಾರಿಕ ಗೊಡವೆಯೇ ಬೇಡ ಹಾಗೂ ನಮ್ಮ ಸಾಹಿತಿಯೊಂದಿಗೆ (with a few exceptions, as always) ಪ್ರಶಸ್ತಿ ಬೇಕು, ಹಣ ಬೇಕು, ಅಹಂಭಾವ ಬೇಕು. ಆದರೆ, ತತ್ತ್ವಬದ್ಧ ಹೋರಾಟ ಬೇಡ ಎಂದೆನಿಸತೊಡಗಿತು. ಅರಿವು-ಬರಹ, ಋಜುವಾತು, ದೇಶಕಾಲ ಮುಂತಾದ ಪತ್ರಿಕೆಗಳು ನಿಶ್ಶಕ್ತವಾಗಿ ನಿಂತುಹೋಗುವುದು ನಮ್ಮೆಲ್ಲರ ಹಣೆಬರಹವೆಂದು ಅಂದುಕೊಂಡೆ.

ಆದರೀಗ ತಮ್ಮ 'ಸಂಚಯ'ಕ್ಕೂ ಸಂಚಕಾರ ಬರುತ್ತಿದೆ ಎಂಬುದನ್ನು ನಾನು ಒಪ್ಪಲು ಸಿದ್ಧವಿಲ್ಲ. ಇದು ಹೀಗೇ ಮುನ್ನಡೆಯಬೇಕು, ಸದೃಢವಾಗಿರಬೇಕು, ಯಾರ ಮೇಲೂ ನಿರ್ಭರವಾಗಿರಬಾರದು ಹಾಗೂ ತಮ್ಮಂತಹವರನ್ನು ನಾನು ನನ್ನ ಕೈಲಾದ ಮಟ್ಟಿಗೆ ಸಮರ್ಥಿಸಬೇಕೆಂಬುದು ನನ್ನ ಆಕಾಂಕ್ಷೆ.

■ **ಪ್ರೊ . ಆರ್‌ಎಲ್‌ಎಂ ಪಾಟೀಲ್**, ಬೆಂಗಳೂರು

'ಸಂಚಯ' ತಲುಪಿತು. ಹೊಳೆದದ್ದು ತಾರೆ, ಉಳಿದದ್ದು ಆಕಾಶದಲ್ಲಿ ತಾವು ಮನಬಿಚ್ಚಿ ಮಾತಾಡಿರುವುದು ಓದಿದೆ. ನನಗೆ ಒಂಥರಾ ಆಯ್ತು. ನಿಮ್ಮನ್ನು ಕೇಳಿಕೊಳ್ಳುವುದೇನೆಂದರೆ ಖಂಡಿತ 'ಸಂಚಯ' ನಿಲ್ಲಿಸಬೇಡಿ. 'ಸಂಚಯ'ದಂತಹ ಪತ್ರಿಕೆ ಯಾವುದೂ ಇಲ್ಲ ಕನ್ನಡದಲ್ಲಿ. ನಿಮ್ಮ ಇಪ್ಪು ವರ್ಷಗಳ ಸಫಲ ತಪಸ್ಸು ವಿಫಲವಾಗುತ್ತದೆ. ಒಂದು ಇತಿಹಾಸ ಬರೆಯುತ್ತಿದ್ದೀರಿ. ಯಾವುದೇ ಆಡಂಬರವಿಲ್ಲದೆ, ಯಾವುದೇ ಅಪೇಕ್ಷೆ ಇಲ್ಲದೆ ತಾವು ತೇಯುತ್ತಿರುವ ಈ ಗಂಧ ತನ್ನ ಸುವಾಸನೆಯನ್ನು ನಿರಂತರವಾಗಿ ಸೂಸುತ್ತಿರಲಿ.


ಸಂಚಯ – ಕನ್ನಡ ಹೆಮ್ಮೆ


ಸಂಚಯ – ಕನ್ನಡದ ಸ್ವಾಭಿಮಾನ ಸೂಚಕ

'ಸಂಚಯ' ಎಂದೂ ನಿಲ್ಲದಿರಲಿ. ಅದಕ್ಕೆ ನಮ್ಮಂತಹವರ ಬೆಂಬಲವಿದೆ, ಹಂಬಲವಿದೆ.

■ **ಸಿ.ವಿ. ಶೇಷಾದ್ರಿ ಹೊಳವನಹಳ್ಳಿ**, ಕೊರಟಗೆರೆ

ಸಾಹಿತ್ಯ ಗ್ಯಾಲರಿ







ಎಲ್ಲರೂ ಬದುಕುವುದು ನೋವಿನಲ್ಲಿ
ತಿಳಿದಿರುವೆ ನಾನು ಈ ಬಾಳಿನಲ್ಲಿ
ಮೇಲುದಾರಿಯ ಹಿಡಿದು ಏರುವವರು
ಕೆಳಗೇನೆ ಸಂತೃಪ್ತ ಬಾಳುವವರು

SANCHAYA (Bi-Monthly), MAG(2) PRB-DECL : 309/94-95

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925